ಲಂಕೇಶ್

ಸೆಪ್ಟೆಂಬರ್ 1, 2010 ರೂ. 12/-

'ನೀನಾಸಂ' ಕಿರು ಕೊಂಡಿ 'ದೇಶಕಾಲ'






ಭೂಗಳ್ಳ ಬಚ್ಚೇಗೌಡ

ಹಾವೇರಿ: ಗೋಮಾಳ ನುಂಗಿದ ಸಜ್ಜನ





ಚಿಕ್ಕ ಹುಡುಗಿ ಜೊತೆ ದಿನೇಶ್ ಬಾಬು ಎರಡನೇ ಮದುವೆ

ಬಳ್ಳಾರಿ: ಮಿತ್ತಲ್‌ನ ಲ್ಯಾಂಡ್ ಲೂಟಿ

ಶಿರಸಿ TSS ಮುಷ್ಕಗಿ ಮಾಮನ ಮಹಿಮೆ

ಮದನಿ ಬಂಧನ

ಂದು ಸಂಚಿನ ಕತೆ!

ಜಯನಗರ: ಸಂಜು ಬೇಟೆ ಆಡಿದ ವಿಶ್ವ-ಗೋರಿಲ್ಲಾ



ಗುಡಿಸಲಿನಿಂದ ಅರಮನೆಗೆ.. ವಯಾ.. ದೆಹಲಿ!

(ಪೊಳ್ಳು) 'ವೇದಾಂತ' ಗಳು (ಸುಳ್ಳು) Reliance ಗಳು

ಜಾಗತೀಕರಣದ ಹೆಸರಿನಲ್ಲಿ ಈ ದೇಶದ ಸಂಪತ್ತಿನ ಲೂಟಿಯ ಮೇಲಿದ್ದ ಶಾಸನಬದ್ಧ ಅಂಕುಶಗಳನ್ನೆಲ್ಲಾ ಕಿತ್ತೊಗೆದ ಮೇಲೆ ದೇಶ-ವಿದೇಶಗಳ ಕಂಪನಿಗಳೆಲ್ಲಾ ಇಲ್ಲಿ "ಆಪರೇಷನ್ ಟ್ರೆಷರ್ ಹಂಟ್" ನಡೆಸುತ್ತಿವೆ. ಅದನ್ನು ತಡೆಗಟ್ಟಬೇಕಾದ ಪ್ರಭುತ್ವ-ಶಾಸಕಾಂಗ-ಕಾರ್ಯಾಂಗ- ಮತ್ತು ನ್ಯಾಯಾಂಗಗಳೆಲ್ಲವೂ ಈ ಲೂಟಿಕೋರ ಕಂಪನಿಗಳ ದಲ್ಲಾಳಿಗಳಾಗಿಬಿಟ್ಟಿವೆ. ಅವರ "ಟ್ರೆಷರ್ ಹಂಟ್" ನಿರಾತಂಕವಾಗಿ ಸಾಗಲು ದೇಶದ ಸಂಪತ್ತನ್ನು ಉಳಿಸಿಕೊಳ್ಳಲು ಮತ್ತು ತಮ್ಮ ಬದುಕನ್ನು ಕಾಪಾಡಿಕೊಳ್ಳಲು ಹೋರಾಡುತ್ತಿರುವವರ ಮೇಲೆ "ಆಪರೇಷನ್ ಗ್ರೀನ್‌ಹಂಟ್" ಅನ್ನು ಹರಿಬಿಡಲಾಗಿದೆ.

ಈ ರೀತಿಯಲ್ಲಿ ಜಾಗತೀಕರಣ ಪ್ರಣೀತ ಆರ್ಥಿಕ ನೀತಿಗಳು ಮತ್ತು ಅದರಿಂದಾಗಿ ಬದಲಾಗಿರುವ ಪ್ರಭುತ್ವದ ಪಾತ್ರಗಳಿಂದಾಗಿಯೇ ಈ ದೇಶದಲ್ಲಿ ಹತ್ತಾರು ಶತಕೋಟ್ಯಾಧಿಪತಿಗಳು ಮತ್ತು ಹತ್ತಾರು ಕೋಟಿ ನಿರ್ಗತಿಕರು ಏಕಕಾಲದಲ್ಲಿ ಹುಟ್ಟಿಕೊಳ್ಳುತ್ತಿದ್ದಾರೆ! ಆದರೆ ಆರ್ಥಿಕ 'ತಜ್ಞರು' ಈ ಎರಡು ವಿದ್ಯಮಾನಗಳಿಗೆ ಸಂಬಂಧವೇ ಇಲ್ಲವೇನೋ ಎಂಬಂತೆ ಬಡವರಾದದ್ದು ಬಡವರ ತಪ್ಪು, ಶ್ರೀಮಂತರಾದದ್ದು ಅವರ ಪವಾಡಸದೃಶ ಪ್ರತಿಭೆ ಮತ್ತು ಶ್ರಮದ ಕಾರಣಕ್ಕೆ ಎಂಬ ಮಿಥ್ಯೆಗಳನ್ನು ಬಿತ್ತರಿಸುತ್ತಾರೆ. ಈ ವಾದಗಳ ಮೂಲಕ ಅವರು "ನವ ಉದಾರವಾದಿ" ಆರ್ಥಿಕತೆ ಬೇಡುವ ಮನಸ್ಥಿತಿಗಳನ್ನು ಸಹ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ.

ಜಾಗತೀಕರಣ ಶ್ರೀಮಂತರಾಗಲು ಎಲ್ಲರಿಗೂ ಅವಕಾಶ ನೀಡುತ್ತದೆ ಎಂಬುದು ಅದರಲ್ಲಿ ಒಂದು. ಆದ್ದರಿಂದ ಯಾರು ಪ್ರತಿಭಾಶಾಲಿಗಳಾಗಿದ್ದಾರೋ ಅವರು ಈ ಅವಕಾಶವನ್ನು ಬಳಸಿಕೊಂಡು ಮೇಲೆ ಬರುತ್ತಾರೆ. ಅಲ್ಲದೇ ಸರ್ಕಾರ ಮತ್ತು ಮಾಧ್ಯಮಗಳು ಈ ಅವಕಾಶಗಳನ್ನು ಬಳಸಿಕೊಂಡು "ಗುಡಿಸಲಿನಿಂದ ಅರಮನೆ" ಸೇರಿದವರ ಕಥನಗಳನ್ನು ಪ್ರಚಾರ ಮಾಡುತ್ತವೆ. ಈ ಪವಾಡ ಪುರುಷರ ಪಟ್ಟಿಯಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುವವರು ಅಂಬಾನಿ, ನಾರಾಯಣಮೂರ್ತಿ, 'ವೇದಾಂತ' ಕಂಪನಿಯ ಮಾಲೀಕ ಅನಿಲ್ ಅಗರ್‌ವಾಲ್ ಅಂಥವರು.

ಇದು ಜಾಗತೀಕರಣವೆಂಬುದು ಅವಕಾಶಗಳ ಸಂತೆಯನ್ನಾಗಿ ಒಂದು ಕಡೆ ಚಿತ್ರಿಸಿಕೊಟ್ಟರೆ ಮತ್ತೊಂದೆಡೆ ಈ ಕೆಲವೇ ಜನ ಅತಿ ಶ್ರೀಮಂತರಾಗುವಂತೆ ಮಾಡುವಲ್ಲಿ ಸರ್ಕಾರದ ಪಾತ್ರವನ್ನೂ ಗೌಣಗೊಳಿಸುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಬಡತನಕ್ಕೆ ಕಾರಣವನ್ನು ಸಮಾಜದಲ್ಲಿರುವ ವ್ಯವಸ್ಥಿತ ತಾರತಮ್ಯಗಳಲ್ಲಿ ಹುಡುಕದೆ ತಮ್ಮ ಬದುಕಿನ ದಾರುಣತೆಗೆ ತಮ್ಮ ಪೂರ್ವಜನ್ಮದ ಪಾಪಫಲವೇ ಕಾರಣವೆಂದು ನಂಬಿಕೊಂಡು ಈಗಾಗಲೇ ಆತ್ಮವಿಶ್ವಾಸವನ್ನು ಮತ್ತು ಆತ್ಮಪ್ರತ್ಯಯವನ್ನೂ ಬಡವರು ಕಳೆದುಕೊಂಡಿದ್ದಾರೆ. ಅವರೆದುರು ಬಿತ್ತಲ್ಪಡುವ ಈ ಆಧುನಿಕ ಪವಾಡಗಳ ಮತ್ತು ಪ್ರತಿಭೆಗಳ ಕಥನಗಳು ಬಡಜನರ ಆತ್ಮಪ್ರತ್ಯಯವನ್ನು ಇನ್ನಷ್ಟು ಅತಂತ್ರಗೊಳಿಸುತ್ತದೆ ಮತ್ತು ಅಧೀರಗೊಳಿಸುತ್ತದೆ. ಹಾಗೆಯೇ ಯಾಜಮಾನ್ಯ ಶಕ್ತಿಗಳಿಗೆ ಅಧೀನಗೊಳಿಸುತ್ತದೆ. ಇದೇ ಪ್ರಭುತ್ವದ ಉದ್ದೇಶವೂ ಆಗಿದೆ.

ಆದ್ದರಿಂದಲೇ "ಗುಡಿಸಲಿನಿಂದ ಅರಮನೆ" ಸೇರಿದ ಈ ಮಹಾಶಯರುಗಳು ಕುಬೇರರಾಗಿದ್ದರಲ್ಲಿ ಪವಾಡಗಳ ಪಾತ್ರವೆಷ್ಟು? ಪ್ರತಿಭೆಯ ಪಾತ್ರವೆಷ್ಟು? ಹಾಗೂ ದೇಶದ ಸಂಪನ್ಮೂಲಗಳು "ಶಾಸನಬದ್ಧವಾಗಿ" ಈ ದೇಶದ ಲಕ್ಷಾಂತರ ಗುಡಿಸಲುಗಳಿಂದ ಇವರ ಅರಮನೆ ಸೇರುವಂತೆ ಮಾಡಿದ ಪ್ರಭುತ್ವದ ನೀತಿಗಳ ಪಾತ್ರವೆಷ್ಟು ಎಂಬುದನ್ನು ವಿಶ್ಲೇಷಿಸುವ ಅಗತ್ಯವಿದೆ.

ಏಕೆಂದರೆ ಪ್ರತಿಬಾರಿ ಈ ನಾರಾಯಣಮೂರ್ತಿಗಳೋ, ಅಂಬಾನಿಗಳೋ ತಮ್ಮ ತಮ್ಮ ತ್ರೈಮಾಸಿಕ ಲಾಭದ ದರವನ್ನು ಘೋಷಿಸುವಾಗಲೆಲ್ಲಾ ಈ ಮಿಥ್‌ಗಳು ಮತ್ತೆ ಮತ್ತೆ ಗಟ್ಟಿಯಾಗುತ್ತಾ ಹೋಗುತ್ತವೆ. ಮೊನ್ನೆ ಮಧ್ಯಭಾರತದ ಖನಿಜ ಸಂಪತ್ತನ್ನು ಲೂಟಿ ಮಾಡುವ "ಪ್ರತಿಭೆ" ತೋರುತ್ತಲೇ ಪ್ರಪಂಚದ 112ನೇ ಶ್ರೀಮಂತನಾದ 'ವೇದಾಂತ' ಕಂಪನಿಯ ಅನಿಲ್ ಅಗರ್‌ವಾಲ್ 'ಕೇರ್ನ್ಸ್ ಇಂಡಿಯಾ' ಎಂಬ ಮತ್ತೊಂದು ಬೃಹತ್ ಬಹುರಾಷ್ಟ್ರೀಯ ತೈಲ ಕಂಪನಿಯೊಂದನ್ನು 9.6 ಬಿಲಿಯನ್ ಡಾಲರ್ (ಅಂದಾಜು 40,000 ಕೋಟಿ ರೂಪಾಯಿಗಳು) ಮೊತ್ತಕ್ಕೆ ಕೊಂಡುಕೊಂಡಿದ್ದನ್ನು ಪತ್ರಿಕೆಗಳೆಲ್ಲಾ ಭಾರತೀಯನ ಮತ್ತೊಂದು ವಿಜಯಗಾಥೆ ಎಂಬಂತೆ ಪ್ರಚಾರ ಮಾಡಿದವು. ಅಂಬಾನಿಗಳ ಒಟ್ಟು ಆಸ್ತಿ ಮೊತ್ತ 2.5 ಲಕ್ಷ ಕೋಟಿ ರೂ. ಮುಟ್ಟಿದಾಗಲೂ ಅದು ಭಾರತಕ್ಕೇ ಸಂದ ವಿಜಯವೆಂಬಂತೆ ಪತ್ರಿಕೆಗಳು ಪ್ರಚಾರ ಮಾಡಿದ್ದವು. ಟಾಟಾ ಕಂಪನಿ ನಮ್ಮದೇ ಬ್ಯಾಂಕು ಮತ್ತು ವಿಮೆ ಕಂಪನಿಗಳು ನೀಡಿದ 56,000 ಕೋಟಿ ಸಾಲದ ಹಣದಿಂದ ಬ್ರಿಟನ್ನಿನ ಕೋರಸ್ ಕಂಪನಿಯನ್ನು ಕೊಂಡಾಗಲೂ ಪತ್ರಿಕೆಗಳು ಭಾರತವು ದೊಡ್ಡ ಸೂಪರ್ ಪವರೇ ಆಗಿಬಿಟ್ಟಿತೆನ್ನುವ ರೀತಿಯಲ್ಲಿ ಪ್ರಚಾರ ನಡೆಸಿದ್ದವು. ಇವೆಲ್ಲದರಿಂದ ಈ ದೇಶದ ಕೆಲವೇ ಕಂಪನಿಗಳ ವಾರ್ಷಿಕ ಲಾಭ ಬೆಳೆಯಿತು. ಆದರೆ ಈ ದೇಶದ ಶೇ.99ರಷ್ಟು ಜನತೆ ಈ ಡೀಲುಗಳಿಂದ ಕಳೆದುಕೊಂಡಿದ್ದೇನು? ಕಾರ್ಪೊರೇಟ್ ಕಂಪನಿಗಳ ಈ ವಿಜಯವು ಈ ದೇಶದ ಬಡಜನರ ವಿಜಯವೋ-ಪರಾಭವವೋ? ಈ ದೇಶದ ಪ್ರಜಾತಂತ್ರದ ವಿಜಯವೋ-ಪರಾಭವವೋ?

ಉದಾಹರಣೆಗೆ ಇತ್ತೀಚೆಗೆ ಮಧ್ಯಭಾರತದ ಸಂಪನ್ಮೂಲವನ್ನು ಲೂಟಿ ಹೊಡೆಯುತ್ತಾ ಬಿಲಿಯನೀರ್ ಕ್ಲಬ್ ಸೇರಿದ ವೇದಾಂತದ ಮಾಲೀಕ ಅನಿಲ್ ಅಗರ್‌ವಾಲ್‌ರವರ ಬೆಳವಣಿಗೆಯ "ಪವಾಡ"ವನ್ನು ನೋಡೋಣ. ಲಾಲೂ ಪ್ರಸಾದ್ ಯಾದವರ ಕ್ಲಾಸ್‌ಮೇಟ್ ಕೂಡಾ ಆಗಿದ್ದ ಈ ಅಗರ್‌ವಾಲ್ ತನ್ನ ಬಿಸಿನೆಸ್ ಪ್ರಾರಂಭಿಸಿದ್ದು ಪಾಟ್ನಾದ ಒಬ್ಬ ಸಾಮಾನ್ಯ ಗುಜರಿ ವರ್ತಕನಾಗಿ. ನಂತರ 1976ರಲ್ಲಿ ಇವರು ಸ್ಟೆರಲೈಟ್ ಕಂಪನಿಯನ್ನು ಸ್ಥಾಪಿಸಿದಾಗಲೂ ಇವರು ಕೋಟಿಗಳನ್ನಿರಲಿ ಲಕ್ಷಗಳನ್ನೂ ಕಂಡಿರಲಿಲ್ಲ. ಆದರೆ 1991ರಲ್ಲಿ ಖಾಸಗೀಕರಣ ನೀತಿಗಳ ಭಾಗವಾಗಿ ಸರ್ಕಾರಿ ಕಂಪನಿಗಳು ನಷ್ಟ ಮಾಡುತ್ತಿವೆ ಎನ್ನುವ ಹೆಸರಲ್ಲಿ ಅವುಗಳನ್ನು ಬಿಡಿಗಾಸಿಗೆ ಖಾಸಗಿ ಕಂಪನಿಗಳಿಗೆ ಮಾರಲು ಪ್ರಾರಂಭಿಸಲಾಯಿತು. ಈ ನೀತಿಯ ಪ್ರಧಾನ ಫಲಾನುಭವಿಗಳು ಈ ಅಗರ್‌ವಾಲ್ ಮತ್ತು ಅಂಬಾನಿಗಳು. ಇದಕ್ಕೆ ಒಂದು ಸಣ್ಣ ಉದಾಹರಣೆಯೆಂದರೆ ಮಧ್ಯಪ್ರದೇಶದ ಸರ್ಕಾರಿ ಸ್ವಾಮ್ಯದ ಬಾಲ್ಕೋ ಕಂಪನಿ. 5500 ಕೋಟಿ ರೂ. ಮೌಲ್ಯದ ಮತ್ತು 500 ಕೋಟಿಯಷ್ಟು ಮೀಸಲು ನಿಧಿಯೇ ಠೇವಣಿಯಲ್ಲಿದ್ದ ಈ ಕಂಪನಿಯನ್ನು ನಷ್ಟ ಮಾಡುತ್ತಿದೆ ಎನ್ನುವ ಹೆಸರಲ್ಲಿ ಕೇವಲ 550 ಕೋಟಿ ರೂಪಾಯಿಗಳಿಗೆ ಅಗರ್‌ವಾಲ್‌ನ ಕಂಪನಿಗೆ ಮಾರಲಾಯಿತು. ಈ ಬಲದಿಂದಲೇ ವೇದಾಂತ ಕಂಪನಿ 1998ರಲ್ಲಿ ಬದಲಾದ ಗಣಿ ನೀತಿಯನ್ನು ಬಳಸಿಕೊಂಡು ಒರಿಸ್ಸಾ, ಮಧ್ಯಪ್ರದೇಶಗಳಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿತು.

1991ರವರೆಗೆ ಈ ದೇಶದ ಖನಿಜ ಸಂಪತ್ತಿನ ಮೇಲೆ ಸಂಪೂರ್ಣ ಸ್ವಾಮ್ಯ ಸರ್ಕಾರಕ್ಕಿತ್ತು. ಆದರೆ 1991ರಲ್ಲಿ ಜಾಗತೀಕರಣ ಪ್ರಣೀತ ಮಾರುಕಟ್ಟೆ ಆರ್ಥಿಕ ನೀತಿಗಳ ಭಾಗವಾಗಿ ಇವೆಲ್ಲವೂ ಬದಲಾಯಿತು. ಇದರ ಭಾಗವಾಗಿಯೇ 1993ರಲ್ಲಿ ರಾಷ್ಟ್ರೀಯ ಖನಿಜ ನೀತಿಯೊಂದನ್ನು ರೂಪಿಸಲಾಯಿತು. ಇದರ ಭಾಗವಾಗಿ ಕಬ್ಬಿಣದ ಅದಿರು, ಮ್ಯಾಂಗನೀಸ್, ಚಿನ್ನ, ವಜ್ರ, ತಾಮ್ರ, ಸತು, ಇತ್ಯಾದಿ 13 ಖನಿಜಗಳ ಅದಿರಿನ ಉತ್ಪಾದನೆಯನ್ನು ಖಾಸಗೀಕರಿಸಲಾಯಿತು. 1997ರಲ್ಲಿ ಈ ನೀತಿಗೆ ಮತ್ತಷ್ಟು ತಿದ್ದುಪಡಿ ಮಾಡಿ ಈ ಕ್ಷೇತ್ರಗಳ ಗಣಿಗಾರಿಕೆಯಲ್ಲಿ ಶೇ.50ರಷ್ಟು ಖಾಸಗಿ ಹೂಡಿಕೆಗೆ ಅವಕಾಶ ಮಾಡಿಕೊಡಲಾಯಿತು. ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಶೇ.74ರಷ್ಟು ಖಾಸಗಿ-ವಿದೇಶಿ ಬಂಡವಾಳದ ಪಾಲಿಗೆ ಅವಕಾಶ ಮಾಡಿಕೊಟ್ಟರೆ 2006ರ ಫೆಬ್ರವರಿಯಲ್ಲಿ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರ ಅದಿರು ಗಣಿಗಾರಿಕೆಯಲ್ಲಿ ಶೇ.100ರಷ್ಟು ಖಾಸಗಿ-ವಿದೇಶೀ ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟಿತು. ಆಗಲೂ ಇದರ ಪ್ರಧಾನ ಫಲಾನುಭವಿ ವೇದಾಂತ!



ಪ್ರತಿ ಟನ್ ಅದಿರಿಗೆ ಈ ವೇದಾಂತದಂತಹ ಕಂಪನಿಗಳು ಸರ್ಕಾರಕ್ಕೆ ಕಟ್ಟುತ್ತಿದ್ದದ್ದು ಕೇವಲ 25 ರೂ. ಆದರೆ ಅದರಿಂದ ಕಂಪನಿಗಳು ಪಡೆದುಕೊಳ್ಳುತ್ತಿದ್ದ ಲಾಭ ಪ್ರತಿ ಟನ್ನಿಗೆ 6,000 ರೂ. ಇದೇ ಹಣ ಸರ್ಕಾರದ ಬೊಕ್ಕಸಕ್ಕೆ ಸೇರಿದ್ದರೆ ಸರ್ಕಾರ ಅಂದರೆ ಜನರು ಶ್ರೀಮಂತರಾಗಿರುತ್ತಿದ್ದರು. ಆದರೆ ಬದಲಾದ ನೀತಿಗಳ "ಪವಾಡ"ದಿಂದಾಗಿ ವೇದಾಂತ ಕಂಪನಿ ದೇಶದ 11ನೇ ಅತಿದೊಡ್ಡ ಶ್ರೀಮಂತ ಕಂಪನಿಯಾಯಿತು. ಈ "ಪವಾಡ"ದಿಂದಾಗಿಯೇ 1976ರಲ್ಲಿ ಕೋಟಿ ದಾಟದಿದ್ದ ಅನಿಲ ಅಗರ್‌ವಾಲ್ ಆಸ್ತಿಪಾಸ್ತಿ 2007ರಲ್ಲಿ 25,000 ಕೋಟಿಯಾಗಿದ್ದು ಇದ... ದೇಶದ ಸಂಪನ್ಮೂಲಕ್ಕೆ ಕನ್ನ ಕೊರೆದ ವೇದಾಂತ ಪ್ರತಿಭೆ... ಈ ಪವಾಡದಿಂದಾಗಿಯೇ ವೇದಾಂತ ಶ್ರೀಮಂತವಾಯಿತು... ಆದಿವಾಸಿಗಳು ನಿರ್ಗತಿಕರಾದರು, ನಕ್ಸಲೈಟರಾದರು.

ಅದೇರೀತಿ ರಿಲಯನ್ಸ್‌ನ ಅಂಬಾನಿ. 1950ರ ದಶಕದ... ಅರಬ್ ವ್ಯಾಪಾರಿಯೊಬ್ಬನ ಅಟೆಂಡರ್ ಆಗಿ ಕೆಲಸ ಪ್ರಾರಂಭಿಸಿ... ಧೀರೂಬಾಯಿ ಅಂಬಾನಿ ಭಾರತಕ್ಕೆ ಬಂದು ರಿಲಯನ್ಸ್... ಉದ್ಯಮ ಸ್ಥಾಪಿಸಿ ಇಪ್ಪತ್ತು ವರ್ಷ ಕಳೆದರೂ ಆತನ ಒಟ್ಟು... ವ್ಯವಹಾರ 1977ರಲ್ಲಿ 70 ಕೋಟಿ ರೂ. ದಾಟಿರಲಿಲ್ಲ... ಆದರೆ 1980ರ ದಶಕದಲ್ಲಿ ಖುಲ್ಲಂ ಖುಲ್ಲ ರಾಜಕೀಯ... ನಾಯಕರೊಂದಿಗೆ ಭ್ರಷ್ಟ ಸಂಬಂಧ ಏರ್ಪಡಿಸಿಕೊಂಡು... ಕಾನೂನುಗಳನ್ನು ತನ್ನ ಜವಳಿ ಉದ್ಯಮಕ್ಕೆ ತಕ್ಕ ಹಾಗೆ... ಬಗ್ಗಿಸಿಕೊಳ್ಳುವಂತೆ ಮಾಡಿದ. ನಂತರವೂ 1991ರಲ್ಲಿ ಆತನ... ಒಟ್ಟು ವ್ಯವಹಾರ 3000 ಕೋಟಿ ರೂ.ಗಳನ್ನು ದಾಟಿರಲಿಲ್ಲ... ಆದರೆ 1991ರಲ್ಲಿ ಜಾಗತೀಕರಣ ನೀತಿಗಳು ಆರಂಭವಾದ... ನಂತರದ ಈ ಎರಡು ದಶಕಗಳಲ್ಲಿ ಅಂಬಾನಿ ಕುಟುಂಬದ... ಒಟ್ಟು ವ್ಯವಹಾರ 2.5 ಲಕ್ಷ ಕೋಟಿ ರೂ.ಗಳನ್ನು ದಾಟಿದೆ... ಇದು ದಕ್ಷಿಣದ ಎಲ್ಲಾ ರಾಜ್ಯಗಳ ಒಟ್ಟು ವಾರ್ಷಿಕ ಬಜೆಟ್ಟಿಗೆ... ಸಮ ಎಂದರೆ ಲೆಕ್ಕ ಹಾಕಿ. ಆದರೆ ಅಂಬಾನಿ ಇಷ್ಟು... ಶ್ರೀಮಂತನಾಗಲು ಮಾಡಿದ "ಪವಾಡ"ಗಳೇನು? ಪೆಟ್ರೋ... ಕೆಮಿಕಲ್ಸ್, ಫೈಬರ್, ಜವಳಿ, ಸಂಪರ್ಕ, ಪ್ಲಾಸ್ಟಿಕ್, ವಿದ್ಯುತ್... ಈ ಎಲ್ಲಾ ಕ್ಷೇತ್ರಗಳಲ್ಲೂ ಸರ್ಕಾರದ ಒಡೆತನದಲ್ಲಿದ್ದ ಸಾಕಷ್ಟು... ಸಂಪನ್ಮೂಲಗಳನ್ನು ಬಿಡಿಗಾಸಿಗೆ ಅಂಬಾನಿಗೆ ಮಾರಿಕೊಂಡಿದ್ದು...

ಇದನ್ನು ಸಾಧಿಸಿಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಸ್ನೇಹಿತರನ್ನು... ಇಟ್ಟುಕೊಂಡಿದ್ದರಲ್ಲಿ ಮಾತ್ರ ಅಂಬಾನಿಯ ಪ್ರತಿಭೆ ಅಗಾಧವಾಗಿತ್ತು! ಎಲ್ಲಿಯತನಕ... ಎಂದರೆ 90ರ ದಶಕದಲ್ಲಿ ಭಾರತದಲ್ಲಿ ಎಷ್ಟು ರಾಜಕೀಯ ಪಕ್ಷಗಳಿವೆ ಎಂದು... ಕೇಳಿದರೆ ಬರುತ್ತಿದ್ದ ಉತ್ತರ ಒಂದೇ! ಇರುವುದು ಒಂದೇ ಪಕ್ಷ. ಅದು... ರಿಲಯನ್ಸ್ ಪಾರ್ಟಿ ಆಫ್ ಇಂಡಿಯಾ! ಅದೇ ರೀತಿ ಆಗ ರಾಜಕಾರಣಿಗಳಲ್ಲಿ... ಎರಡೇ ಬಗೆಯ ರಕ್ತದ ಗುಂಪಿರುತ್ತದೆ ಎಂಬ ಮಾತು ಚಾಲ್ತಿಯಲ್ಲಿತ್ತು... ಒಂದು ಬಹುಸಂಖ್ಯಾತ ರಿಲಯನ್ಸ್ ಪಾಸಿಟೀವ್, ಎರಡನೆಯದು ಅತ್ಯಂತ... ಅಲ್ಪಸಂಖ್ಯಾತ ರಿಲಯನ್ಸ್ ನೆಗಟೀವ್. ಇದರ ಪರಿಣಾಮ ಎಲ್ಲಿಯತನಕ... ಇತ್ತೆಂದರೆ ಇರಾಕ್ ಜೊತೆ ಭಾರತ ಮಾಡಿಕೊಂಡ... "ತೈಲಕ್ಕಾಗಿ ಆಹಾರ ಧಾನ್ಯ" ಯೋಜನೆಯ... ಲಕ್ಷಾಂತರ ಕೋಟಿ ರೂ. ಗಳನ್ನು ನುಂಗಿಹಾಕ... ಲಾಯಿತು. ಅದರಲ್ಲಿ ಸಿಪ್ಪೆ ತಿಂದ ಕಾಂಗ್ರೆಸ್... ಹಿರಿಯ ನಾಯಕ ನಟವರ್ ಸಿಂಗ್ ತನ್ನ ಸ್ಥಾನವನ್ನು... ಕಳೆದುಕೊಳ್ಳಬೇಕಾಯಿತು. ಆದರೆ ಪೂರ್ತಿ ಹಣ... ತಿಂದು ಮುಗಿಸಿದ್ದ ರಿಲಯನ್ಸ್ ಕಂಪನಿಯನ್ನು... ಮಾತ್ರ ಕಾಂಗ್ರೆಸ್ಸೂ ಮುಟ್ಟಲಿಲ್ಲ, ಬಿಜೆಪಿಯೂ... ಮುಟ್ಟಲಿಲ್ಲ!

ಅದೇರೀತಿ ಇನ್ಫೋಸಿಸ್ ನಾರಾಯಣಮೂರ್ತಿ... ಗಳು, ವಿಪ್ರೋ ಪ್ರೇಂಜಿಗಳು, ಬಯೋಕಾನ್ ಮಜುಂದಾರ್‌ಗಳು. ಸರ್ಕಾರದ... ಮಾರುಕಟ್ಟೆ ಪರ ನೀತಿಗಳು ಇವರುಗಳಿಗೆ ಎಷ್ಟು ಸಂಪನ್ಮೂಲ ರವಾನೆ... ಮಾಡಿದೆ ಎಂದರೆ ಇದರಲ್ಲಿ ಕಾಲು ಭಾಗದಷ್ಟನ್ನಾದರೂ ಸಣ್ಣ ಉದ್ದಿಮೆಗಳಿಗೆ... ಕೊಟ್ಟಿದ್ದರೆ ಅಥವಾ ಅದನ್ನೇ ತೆರಿಗೆ ಆದಾಯವಾಗಿ ಪರಿವರ್ತನೆ ಮಾಡಿಕೊಂಡಿದ್ದರೆ... ಈ ದೇಶದ ಶೇ. 50ರಷ್ಟು ಬಾಲಕಾರ್ಮಿಕರು, ಶೇ.45ರಷ್ಟು ಬಡತನದ... ರೇಖೆಗಿಂತ ಕೆಳಗೆ ಬದುಕುವ ಕಾರಣವೇ ಇರುತ್ತಿರಲಿಲ್ಲ.

2007-09ರ ನಡುವೆ ಇಡೀ ವಿಶ್ವದ ಶ್ರೀಮಂತರು ಸಹ ಹಣಕಾಸು... ಬಿಕ್ಕಟ್ಟಿನಿಂದ ಕಂಗೆಟ್ಟಿದ್ದರೂ ಭಾರತದ ಬಿಲಿಯನರ್‌ಗಳ ಸಂಖ್ಯೆ ಹೆಚ್ಚುತ್ತಲೇ... ಹೋಯಿತು! ಆದರೆ ಅದೇ ಅವಧಿಯಲ್ಲಿ ಭಾರತದ ಬಡಜನತೆಯ ಸಂಖ್ಯೆ... ಮತ್ತು ಅದರ ದಾರುಣತೆ ಹೆಚ್ಚುತ್ತಲೇ ಹೋಯಿತು. ಸರ್ಕಾರಗಳು ಇದನ್ನು... ಪರಿಹರಿಸಲು ತಮ್ಮ ಬಳಿ ಸಂಪನ್ಮೂಲಗಳಿಲ್ಲವೆಂದು ಹೇಳಿದವು! ಇದು... ಈ ದೇಶದ ಶ್ರೀಮಂತರ "ಪ್ರತಿಭೆ". ಸರ್ಕಾರ ಮಾಡುತ್ತಿರುವ "ಪವಾಡ"...

ಈಗಲಾದರೂ ಈ "ಪವಾಡ"ಗಳನ್ನು ಬಯಲು ಮಾಡಲೇಬೇಕು.



ಚಾರ್ವಾಕ

▸ ಶಿವಸುಂದರ್

ನೋ ಕಾಮೆಂಟ್ಸ್

"1947 ಆಗಸ್ಟ್ 15ರಂದು ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಖ್ಯಾತ ಕಮ್ಯುನಿಸ್ಟ್ ನಾಯಕ ಎ.ಕೆ. ಗೋಪಾಲನ್ ಇನ್ನೂ ಬಂಧನದಲ್ಲಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಜೊತೆಗಿದ್ದವರೆಲ್ಲಾ ಬಿಡುಗಡೆಯಾದರೂ ಕಮ್ಯುನಿಸ್ಟರಾದ ಇವರನ್ನು ಮಾತ್ರ ಸರ್ಕಾರ ಬಿಡುಗಡೆ ಮಾಡಿರಲಿಲ್ಲ. ಅಷ್ಟು ಮಾತ್ರವಲ್ಲ, ಸ್ವಾತಂತ್ರ್ಯ ಬಂದ ದಿನ ಗೋಪಾಲನ್ ಅವರು ಜೈಲಿನಲ್ಲಿಯೇ ಮೆರವಣಿಗೆ ತೆಗೆದು ಸಂಭ್ರಮಾಚರಣೆ ಮಾಡಿದ್ದಕ್ಕಾಗಿ ಸ್ವತಂತ್ರ ಭಾರತ ಸರ್ಕಾರ ಅವರ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿತು ಹಾಗೂ ಸ್ವತಂತ್ರ ಭಾರತದ ನ್ಯಾಯಾಲಯ ಅವರಿಗೆ ಆ ಅಪರಾಧಕ್ಕಾಗಿ ಶಿಕ್ಷೆಯನ್ನೂ ವಿಧಿಸಿತು. ಇದು ಭಾರತ ಸ್ವತಂತ್ರವಾದರೂ ಹೇಗೆ ಮಸಾಹತು ಪ್ರಜ್ಞೆ ಮುಂದುವರೆಯಿತು ಎಂಬುದಕ್ಕೆ ಒಂದು ಉದಾಹರಣೆ."

- ಕೆ.ಜಿ. ಕನ್ನಾಭಿರನ್, ಹಿರಿಯ ವಕೀಲರು, ಅವರ ಆತ್ಮಕಥೆಯಲ್ಲಿ.

"ಅರ್ಕಾವತಿ ನದಿ ಪುನಶ್ಚೇತನಕ್ಕೆ ಇದೇ ಸರ್ಕಾರ ನೂರಾರು ಕೋಟಿ ಬಿಡುಗಡೆ ಮಾಡುತ್ತದೆ. ಈಗ ಮತ್ತೆ ಅದೇ ಪ್ರದೇಶದಲ್ಲಿ ಭೂಸ್ವಾಧೀನಕ್ಕೆ ಮುಂದಾಗಿದೆ. ಯಾವ ಅರ್ಕಾವತಿ ಅಚ್ಚುಕಟ್ಟು ವಲಯದಲ್ಲಿ ಕಲ್ಲು ಗಣಿಗಾರಿಕೆ ನಿಷೇಧಿಸಿ ಭೂ ವಿಜ್ಞಾನ ಇಲಾಖೆ ನೋಟಿಸ್ ನೀಡಿತ್ತೋ ಅದೇ ವಲಯದಲ್ಲಿ ಐಟಿ ವಲಯಕ್ಕಾಗಿ ಭೂಸ್ವಾಧೀನ ಮಾಡಿಕೊಳ್ಳುತ್ತಿದೆ. ಯಾವ ಭೂಮಿಯನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದಡಿಯಲ್ಲಿ ಹಸಿರು ವಲಯ ಎಂದು ಇದೇ ಸರ್ಕಾರ ಘೋಷಿಸಿತ್ತೋ ಈಗ ಅದೇ ಸರ್ಕಾರ ಅದನ್ನು ಉಲ್ಲಂಘಿಸಿ ಐಟಿ ವಿಶೇಷ ವಲಯಕ್ಕೆ ಪರಭಾರೆ ಮಾಡುತ್ತಿದೆ."

- ಹರೀಶ್, ಹಸಿರು ಸೇನೆ

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಜ್ಯದಲ್ಲಿ ವಿದ್ಯುತ್ ಸಮಸ್ಯೆಯನ್ನು ನೀಗಿಸುವ ನಿಟ್ಟಿನಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ ಹೆಚ್ಚುವರಿಯಾಗಿ 8... ಸಾವಿರ ಮೆಗಾವ್ಯಾಟನ್ನು ಉತ್ಪಾದಿಸುವ ಉದ್ದೇಶವನ್ನು ಹೊ... ಲಾಗಿದೆ. 2014ರ ವೇಳೆಗೆ ಈ ರಾಜ್ಯದ ವಿದ್ಯುತ್... ಸಮಸ್ಯೆ ತೀರುವ ಸಾಧ್ಯತೆ ಇದೆ."

- ಡಾ. ಎಸ್.ಎಮ್. ಜಾಮ್‌ದಾರ್...

"ಭಾರತೀಯ ಸಂಸದರು ವಿಶ್ವದ ಇತರೆ ಎಲ್ಲಾ ದೇಶಗಳಿಗಿಂತ ಕಡಿಮೆ ಸಂಬಳ ಪಡೆಯುತ್ತಿದ್ದಾರೆ. ಸಂಸತ್... ಸದಸ್ಯರಿಗೆ ಸರ್ಕಾರಿ ಗುಮಾಸ್ತನಿಗಿಂತಲೂ ಕಡಿಮೆ... ಸಂಬಳವನ್ನು ನೀಡಲಾಗುತ್ತಿದೆ."

- ಕಾಂಗ್ರೆಸ್-ಬಿಜೆಪಿ ಸಂಸದರ ಜಂಟಿ ಹೇಳಿಕೆ...

ಜನರೇ ಫ್ಯಾಸಿಸ್ಟರು!

"ಕಾಶ್ಮೀರದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು... ಅಪ್ರಜಾತಾಂತ್ರಿಕವಾದದ್ದಾಗಿದೆ. ಅವರು ಒಮರ್... ಅಬ್ದುಲ್ಲಾನನ್ನು ನಾಯಕನೆಂದು ಒಪ್ಪಿಕೊಳ್ಳಬೇಕು. ಮತ್ತು... ರಾಜ್ಯ ಸರ್ಕಾರವು ಪ್ರತ್ಯೇಕತಾವಾದವನ್ನು ಕಠಿಣವಾಗಿ... ಬಗ್ಗುಬಡಿಯಬೇಕು."

- ಎಸ್.ಪಿ. ಶರ್ಮ, 'ತೆಹೆಲ್ಕಾ'ದಲ್ಲಿ...

ಸ್ವಾತಂತ್ರ್ಯೋತ್ಸವ ಮತ್ತು 'ರೋಡ್ ಟು ಸಂಗಮ್'



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಲ ದಿನಗಳ ಹಿಂದೆ ಭಾರತದ 64ನೇ ಸ್ವಾತಂತ್ರ್ಯ ಚರಣೆಯನ್ನು ಆಚರಿಸಲಾಯಿತು. ಆದರೆ ಅದ್ಯಾಕೋ ತ್ತ ನನ್ನಲ್ಲಿ ನಮ್ಮ ದೇಶದ ಬಗ್ಗೆ ಅಭಿಮಾನವಾಗಲಿ, ಯಾಗಲಿ ಮೂಡಲೇ ಇಲ್ಲ. ಇತ್ತೀಚೆಗೆ ಸವಣೂರಿನಲ್ಲಿ ಸಂಸಾರವೊಂದು ತಮ್ಮ ಮೇಲೆ ಮಲ ಸುಕೊಂಡು ಪ್ರತಿಭಟಿಸಿದ್ದು; ಹಣವಂತರು ತಮ್ಮ ಪ್ರೇಮವನ್ನು ಪ್ರದರ್ಶಿಸಲು ಅನುಕೂಲವಾಗಲೆಂದು ಬಟ್ಟೆ ಧರಿಸಿದ್ದ ಬಡಮಕ್ಕಳು ಸಿಗ್ನಲ್ ಲೈಟ್‌ಗಳಲ್ಲಿ ಧ್ವಜಗಳನ್ನು ಮಾರುತ್ತಿದ್ದದ್ದು; ಇದೇ ಶುಕ್ರವಾರ ಗಡೆಗೊಳ್ಳುತ್ತಿರುವ ನಮ್ಮ ಪ್ರಕಾಶನದ 'ಅಸ್ಪೃಶ್ಯ ವಸಂತ' ಬರಿಯಲ್ಲಿನ ನಾಲ್ಕು ತಲೆಮಾರಿನ ದಲಿತ ಬವೊಂದರ ದಾರುಣ ಬದುಕು ಮತ್ತು ಪ್ರತಿಭಟನೆ... ಲವೂ ನನ್ನ ಮನಸ್ಸನ್ನು ಕವಿದಿದ್ದವು.


ಮ್ಮ ದೇಶದ ಬಹಳಷ್ಟು ಜನ ಇವತ್ತಿಗೂ ಮಾನದ ಬದುಕಿನಿಂದ ವಂಚಿತರಾಗಿರುವಾಗ ಈ ತ್ರ್ಯ ದಿನಾಚರಣೆ'ಗೆ ಏನು ಅರ್ಥ? 1947 ರಲ್ಲಿ ಈ ದ ಜನ ಕನಸು ಕಂಡಿದ್ದ 'ಸಮಾನತೆ, ಸಹಬಾಳ್ವೆ, ರ್ದ ಭಾರತ'ದ ಕನಸು ಈಗ ನುಚ್ಚುನೂರಾಗಿದೆ.

ಜಾಗತೀಕರಣ ಮತ್ತು ಕೋಮುವಾದ ಎಂಬ ಎರಡು ಗಳಿಂದಾಗಿ ಇವತ್ತು ಭಾರತ ಸಾಮಾಜಿಕವಾಗಿ, ಕತಿಕವಾಗಿ ಮತ್ತು ಆರ್ಥಿಕವಾಗಿ ಬಹುಸಂಖ್ಯಾತರ ವನ್ನು ಕಾಣುತ್ತಿದೆ. ಮಾತ್ರವಲ್ಲ, ಭೋಪಾಲ್ ಅನಿಲ ತದಲ್ಲಿ ಜೀವ-ಬದುಕು ಕಳೆದುಕೊಂಡ ಅಮಾಯಕರಿಗೆ ಹುಸಿ 1,500 ಕೋಟಿ ರೂಪಾಯಿಗಳ ಪರಿಹಾರವನ್ನು



ಬೇಕು ಎಂದು ಭಾರತ ಸರ್ಕಾರ "ಗದ್ದಲ" ಮಾಡಿದರೆ ಶಕ್ಕೆ ಬಂಡವಾಳ ಹರಿದು ಬರುವುದಿಲ್ಲ 'ಹುಷಾರ್' ಅಮೆರಿಕ ನಮ್ಮ ನಾಯಕರನ್ನು ಎಚ್ಚರಿಸಿದೆ. ಇಂತಹ ತ್ರ್ಯ'ದ ಬಗ್ಗೆ ನಮ್ಮಲ್ಲಿ ಎಂತಹ ಗೌರವ ಉಕ್ಕೀತು? ಇದೆಲ್ಲದರ ಬಗ್ಗೆ ಯೋಚಿಸುತ್ತಾ, ಸ್ವಾತಂತ್ರ್ಯದ ಮುಖ್ಯ ರಿ ಆಗಿದ್ದ ಮಹಾತ್ಮ ಗಾಂಧಿಯ ಸಿದ್ಧಾಂತ, ತ್ಯಾಗ, ಮುಗಳೆಲ್ಲವೂ ಈಗ ಸಮಾಧಿ ಸೇರಿವೆ ಎಂದೆನಿಸು ಗಲೇ ಒಂದು ಹಿಂದಿ ಸಿನಿಮಾ ನೋಡಿದೆ. ಅದರ 'ದಿ ರೋಡ್ ಟು ಸಂಗಮ್.'

ಆ ಸಿನಿಮಾದ ಕೇಂದ್ರ ಹಸ್ಮತುಲ್ಲಾ ಎಂಬ ಮುಸಲ್ಮಾನ ನಿಕ್. ಅಲಹಾಬಾದಿನಲ್ಲಿ ಒಂದು ಗ್ಯಾರೇಜ್ ಸುತ್ತಿರುವ ಹಸ್ಮತುಲ್ಲಾ ಎಂತಹ ಹಳೆ ಎಂಜಿನ್‌ಅನ್ನೂ ರಿ ಮಾಡಬಲ್ಲ ಚಾಣಾಕ್ಷ. ಒಂದು ದಿನ ಅಲಹಾಬಾದಿನ ಸಂಗ್ರಹಾಲಯದವರು ಪುರಾತನ ಫೋರ್ಡ್ ಎಂಜಿನ್, ಆತನಿಗೆ ನೀಡಿ ಅದನ್ನು ಆದಷ್ಟು ಬೇಗ ರಿಪೇರಿ



ಮಾಡಿ ಕೊಡಬೇಕೆಂದು ಕೋರುತ್ತಾರೆ. ಆದಕ್ಕೆ ಹಸ್ಮತುಲ್ಲಾ ಒಪ್ಪಿ ಕೆಲಸ ಪ್ರಾರಂಭಿಸುತ್ತಾನೆ.

ಆದರೆ ಮರುದಿನವೇ ಅಲಹಾಬಾದಿನಲ್ಲಿ ಬಾಂಬ್ ಸ್ಫೋಟವಾಗಿ ಕೆಲ ಜನ ಸಾಯುತ್ತಾರೆ. ಎಂದಿನಂತೆ ಪೊಲೀಸರು ಈ ಸ್ಫೋಟದ ಹಿಂದೆ ಮುಸಲ್ಮಾನರೇ ಇರಬೇಕೆಂದು ಭಾವಿಸಿ ಕೈಗೆ ಸಿಕ್ಕ ಮುಸಲ್ಮಾನರನ್ನು ಬಂಧಿಸುತ್ತಾರೆ. ಹೀಗೆ ಅಮಾಯಕರನ್ನು ಬಂಧಿಸಿದ್ದರ ಬಗ್ಗೆ ಕೋಪಗೊಳ್ಳುವ ಮುಸಲ್ಮಾನ ಸಮುದಾಯದ ನಾಯಕರು ತಮ್ಮ ಪ್ರದೇಶಗಳಲ್ಲಿ ಬಂದ್ ಘೋಷಿಸುತ್ತಾರೆ. ಹಸ್ಮತುಲ್ಲಾ ಕೂಡ ತನ್ನ ಗ್ಯಾರೇಜ್ ಬಾಗಿಲು ಹಾಕುತ್ತಾನೆ.

ಆಗ ಟಿವಿ ಚಾನೆಲ್ ಒಂದರ ವರದಿಗಾರ ಹಸ್ಮತುಲ್ಲಾನನ್ನು ಸಂದರ್ಶಿಸಲು ಬರುತ್ತಾನೆ. ಆ ವರದಿಗಾರ ಹಸ್ಮತುಲ್ಲಾಗೆ ಒಂದು ಆಚ್ಚರಿಯ ವಿಷಯವನ್ನು ಬಹಿರಂಗಪಡಿಸುತ್ತಾನೆ. ಅದೇನೆಂದರೆ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಚಿತಾಭಸ್ಮವಿರುವ ಒಂದು ಚೆಂಬು ಇಷ್ಟು ವರ್ಷಗಳ ಕಾಲ ಯಾವುದೋ ಲಾಕರ್‌ನಲ್ಲಿ ಇದ್ದುದ್ದಾಗಿಯೂ, ಗಾಂಧಿಯವರ ಮೊಮ್ಮಗ ಅದನ್ನೀಗ ಗಂಗೆ, ಯಮುನೆ ಮತ್ತು ಸರಸ್ವತಿ ನದಿಗಳು ಕೂಡುವ ಸಂಗಮದಲ್ಲಿ ವಿಸರ್ಜಿಸಲು ಉದ್ದೇಶಿಸಿದ್ದಾರೆಂದೂ, ಚಿತಾಭಸ್ಮವನ್ನು ಸಂಗಮಕ್ಕೆ ಸಾಗಿಸಲು 1948ರಲ್ಲಿ ಉಪಯೋಗಿಸಿದ್ದ ಫೋರ್ಡ್ ವಾಹನವನ್ನೇ ಉಪಯೋಗಿಸಲಿದ್ದಾರೆಂದೂ, ಅದಕ್ಕಾಗಿಯೇ ಆ ವಾಹನದ ಎಂಜಿನ್ ಅನ್ನು ರಿಪೇರಿ ಮಾಡಲು ಹಸ್ಮತುಲ್ಲಾನನ್ನು ಕೇಳಲಾಗಿದೆ ಎಂದೂ ವರದಿಗಾರ ಹೇಳುತ್ತಾನೆ.


ಇದನ್ನು ಕೇಳಿ ಹಸ್ಮತುಲ್ಲಾನಿಗೆ ಆಘಾತವಾಗುತ್ತದೆ. ಒಂದೆಡೆ ಇಂತಹ ದೊಡ್ಡ ಜವಾಬ್ದಾರಿ ವಹಿಸಿಕೊಂಡಿದ್ದಾನೆ. ಇನ್ನೊಂದೆಡೆ ಅದನ್ನು ಪೂರೈಸಲಾಗದಂತೆ ಆತನ ಸಮುದಾಯದವರೇ ಬಂದ್ ಘೋಷಿಸಿದ್ದಾರೆ. ಹಸ್ಮತುಲ್ಲಾ ಕಷ್ಟದಲ್ಲಿ ಸಿಲುಕಿಕೊಳ್ಳುತ್ತಾನೆ. ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ, ಎಲ್ಲಾ ಕೋಮಿನವರೂ ಅಣ್ಣತಮ್ಮಂದಿರಂತೆ ಭಾರತದಲ್ಲಿ ವಾಸಿಸಬೇಕೆಂದು ಬಯಸಿದ್ದ ಮಹಾತ್ಮ ಗಾಂಧಿಯ ಬಗ್ಗೆ ಹಸ್ಮತುಲ್ಲಾನಿಗೆ ಅಪಾರವಾದ ಮೆಚ್ಚುಗೆ; ಆದ್ದರಿಂದಲೇ ಅವರ ಈ ಅಂತಿಮ ಯಾತ್ರೆಗೆ ತನ್ನ ಕೈಲಾದ ಸೇವೆಯನ್ನು ಸಲ್ಲಿಸಬೇಕೆಂಬ ಬಯಕೆ.

ಆ ಕಾರಣಕ್ಕಾಗಿಯೇ ತನ್ನ ಗ್ಯಾರೇಜ್‌ಗೆ ಈ ಬಂದ್‌ನಿಂದ ವಿನಾಯಿತಿ ಕೊಡಬೇಕೆಂದು ತನ್ನ ಸಮುದಾಯದ ನಾಯಕರನ್ನು ವಿನಂತಿಸಿಕೊಳ್ಳುತ್ತಾನೆ. ಆದರೆ ಅದಕ್ಕೆ ಅವರು ಒಪ್ಪುವುದಿಲ್ಲ. ಆಗ ಹಸ್ಮತುಲ್ಲಾ ತನ್ನ ಗ್ಯಾರೇಜ್ ಮುಂದೆ ಧರಣಿ ಕೂರುತ್ತಾನೆ; ಮುಸಲ್ಮಾನರ ಪರ ವಹಿಸಿದ್ದಕ್ಕೆ ತನ್ನ ಪ್ರಾಣ ತೆತ್ತ ಮಹಾತ್ಮ ಗಾಂಧಿಗೆ ತಾನು ಸೇವೆ ಸಲ್ಲಿಸುತ್ತೇನೆ ಎಂದು ಪಣ ತೊಡುತ್ತಾನೆ. ಹಸ್ಮತುಲ್ಲಾನ ಈ ಗಟ್ಟಿ ನಿರ್ಧಾರವನ್ನು ಕಂಡು ವಿಧಿಯಿಲ್ಲದೆ ಆತನ ಗ್ಯಾರೇಜ್‌ನ ಕೀಲಿ ಕೈಗಳನ್ನು ಆತನ ಸಮುದಾಯದವರೇ ನೀಡುತ್ತಾರೆ.

ಫೋರ್ಡ್ ಎಂಜಿನ್ ಅನ್ನು ರಿಪೇರಿ ಮಾಡಲು ಹಸ್ಮತುಲ್ಲಾನಿಗೆ ಇತರರ ನೆರವೂ ಬೇಕಾಗುತ್ತದೆ. ಆತನ ಹಿಂದೂ ಸ್ನೇಹಿತ ಡಾ. ಅನ್ಸಾರಿ ನೀಡುವ ಸಲಹೆಯ ಪ್ರಕಾರ ಆತ ತನ್ನ ಸಮುದಾಯದವರ ಪ್ರಮುಖರನ್ನು ಒಬ್ಬೊಬ್ಬರಾಗಿ ತನ್ನತ್ತ ಸೆಳೆಯುತ್ತಾನೆ, ತಾನು ಮಾಡುತ್ತಿರುವುದು ಸರಿಯಾದದ್ದು ಎಂದು ಅವರಿಗೆ ಮನವರಿಕೆ ಮಾಡಿಕೊಡುತ್ತಾನೆ. ಕೊನೆಗೆ ಎಲ್ಲರೂ ಹಸ್ಮತುಲ್ಲಾನ ಪರ ನಿಂತರೂ ಸಮುದಾಯದ ಪ್ರಮುಖ ಕಸೂರಿ ಮತ್ತು ಮೌಲ್ವಿ ಖುರೇಷಿ ಮಾತ್ರ ಆತನ ವಿರುದ್ಧ ನಿಲ್ಲುತ್ತಾರೆ. ಇದರಿಂದ ಹಸ್ಮತುಲ್ಲಾ ತುಂಬಾ ಬೇಸರಗೊಂಡು "ನಾನು ರಿಪೇರಿ ಮಾಡುತ್ತಿರುವ ವಾಹನ ಜಿನ್ನಾದಾಗಿದ್ದರೆ ನಿಮ್ಮ ಪ್ರತಿಕ್ರಿಯೆ ಹೀಗೇ ಇರುತ್ತಿತ್ತೆ? ಈ ದೇಶದ ಪ್ರಜೆಗಳಾಗಿ ಈ ದೇಶದ ರಾಷ್ಟ್ರಪಿತನಿಗೆ ನಾವು ತೋರಿಸುವ ಗೌರವವೇ ಇದು" ಎಂದು ಕುಟುಕುತ್ತಾನೆ. ಆದರೂ ಅವರು ಹಸ್ಮತುಲ್ಲಾನ ವಾದಕ್ಕೆ ಒಪ್ಪುವುದಿಲ್ಲ.

ನಗರದಲ್ಲಾಗಲೇ ಬಾಂಬ್ ಸ್ಫೋಟಗೊಂಡಿದೆ, ಮುಸಲ್ಮಾನರು ರೋಷಗೊಂಡು ಬಂದ್ ಘೋಷಿಸಿದ್ದಾರೆ, ಯಾವುದೇ ಕ್ಷಣದಲ್ಲಿ ದೊಂಬಿಗಳಾಗುವ ಸಾಧ್ಯತೆ ಇದೆ... ಇಂತಹ ಸಂದರ್ಭದಲ್ಲೂ ಮಹಾತ್ಮಾ ಗಾಂಧಿ ಅವರ ಚಿತಾಭಸ್ಮವನ್ನು ಹೊತ್ತಿರುವ ವಾಹನ ಮುಸಲ್ಮಾನರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ತನ್ನ ಪ್ರದೇಶದಲ್ಲೂ ಸಾಗಿ ಹೋಗಬೇಕೆಂದು ಹಸ್ಮತುಲ್ಲಾ ಅಧಿಕಾರಿಗಳ ಮುಂದೆ ಬೇಡಿಕೊಳ್ಳುತ್ತಾನೆ. ತನ್ನ ಜನರೂ ಗಾಂಧಿಗೆ ಗೌರವ ಸಲ್ಲಿಸುವ ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತಾನೆ. ತನ್ನ ಎಲ್ಲ ಕಷ್ಟಗಳ ನಡುವೆಯೂ ಆತ ತಮ್ಮೊಂದಿಗೆ ಸಹಕರಿಸಿದ್ದರಿಂದ ಅಧಿಕಾರಿಗಳು ಒಪ್ಪಿಕೊಳ್ಳುತ್ತಾರೆ.

ಗಾಂಧಿಯ ಚಿತಾಭಸ್ಮವನ್ನು ಹೊತ್ತ ವಾಹನ ಮುಸಲ್ಮಾನರ ಪ್ರದೇಶವನ್ನು ಪ್ರವೇಶಿಸುತ್ತದೆ. ಆದರೆ ಎಲ್ಲೂ ಜನರಿಲ್ಲ, ಎಲ್ಲ ಅಂಗಡಿಗಳು, ಮನೆಗಳು ತಮ್ಮ



ಕದಮುಚ್ಚಿದ್ದು ಎಲ್ಲೆಡೆ ನಿಶಬ್ದ ಆವರಿಸಿದೆ. ಇದನ್ನು ನೋಡಿ ಹಸ್ಮತುಲ್ಲಾ ಆತಂಕಗೊಳ್ಳುತ್ತಾನೆ. ಆದರೆ ವಾಹನ ಸಾಗಿದಂತೆಲ್ಲ ನಿಧಾನವಾಗಿ ಜನ ಪ್ರತ್ಯಕ್ಷರಾಗುತ್ತಾರೆ. ಅವರೆಲ್ಲ ನೋಡುನೋಡುತ್ತಿದ್ದಂತೆ ಮುಸಲ್ಮಾನರ ನಾಯಕ ಕಸೂರಿ ತನ್ನ ಮನೆಯಿಂದ ಹೊರಬಂದು ಗಾಂಧಿಯವರ ಅಂತಿಮ ಯಾತ್ರೆಗೆ ತನ್ನ ನಮನ ಸಲ್ಲಿಸುತ್ತಾನೆ. ಮೌಲ್ವಿ ಖುರೇಷಿ ಕೂಡ ಆತನೊಂದಿಗೆ ನಿಲ್ಲುತ್ತಾನೆ. ಮರುಕ್ಷಣ ಜನಸಾಗರವೇ ಹರಿದು ಬಂದು ವಾಹನ ಸಾಗುತ್ತಿರುವ ರಸ್ತೆಯನ್ನು ಸ್ವಚ್ಛಗೊಳಿಸುತ್ತಾರೆ, ಪುಷ್ಪಗಳನ್ನು ಅರ್ಪಿಸಿ ಕೈ ಮುಗಿಯುತ್ತಾರೆ. ಹಸ್ಮತುಲ್ಲಾ ನಿಟ್ಟುಸಿರಿನೊಂದಿಗೆ ಕಣ್ಣೀರು ಸುರಿಸುತ್ತಾನೆ. ಹಿನ್ನೆಲೆಯಲ್ಲಿ ಗಾಂಧೀಜಿ ಅವರಿಗೆ ಪ್ರಿಯವಾಗಿದ್ದ "ಈಶ್ವರ್, ಅಲ್ಲಾ ತೇರೇ ನಾಮ್ ಸಬುಕೊ ಸಮ್ಮತಿ ದೇ ಭಗವಾನ್" ಹಾಡು ಕೇಳಿಸುತ್ತಾ ಸಿನಿಮಾ ಅಂತ್ಯಗೊಳ್ಳುತ್ತದೆ.

ಈ ಚಿತ್ರದ ವಿಶೇಷ ಯಾವುದೆಂದರೆ ಇದರಲ್ಲಿ ಎಲ್ಲೂ ಗಾಂಧೀಜಿಯವರ ನೀತಿ, ಮೌಲ್ಯಗಳ ಬಗ್ಗೆ ಯಾರೂ ಮಾತಾಡುವುದಿಲ್ಲ, ಅವರು ಸಾಂದರ್ಭಿಕ ಕಥಾವಸ್ತು ಮಾತ್ರ ಆಗಿದ್ದಾರೆ. ಆದರೂ ಹಸ್ಮತುಲ್ಲಾ ಎಂಬ ಸಾಮಾನ್ಯ ಮನುಷ್ಯನೊಳಗಡೆ ಗಾಂಧಿ ಚಿಗುರೊಡೆದು ಆತನ ಮೂಲಕ ಕಾಣಿಸಿಕೊಳ್ಳುತ್ತಾರೆ. ಕಾಯಕವೇ ಕೈಲಾಸ, ಅದಕ್ಕೂ ಧರ್ಮಕ್ಕೂ ಸಂಬಂಧವಿಲ್ಲ; ತನಗೆ ಸರಿ ಅನ್ನಿಸಿದ್ದನ್ನು ಮಾಡಬೇಕು, ತನ್ನ ನಿಲುವು ಸರಿಯಾದದ್ದಾದರೆ ಜನ ತನ್ನ ಪರ ನಿಲ್ಲುತ್ತಾರೆ; ಯಾವುದೇ ಧರ್ಮ ಸೌಹಾರ್ದಕ್ಕೆ ಒತ್ತು ನೀಡುತ್ತದೆಯೇ ಹೊರತು ದ್ವೇಷಕ್ಕೆ, ಬದಲಾಗಿ ಸಂಕುಚಿತ ಚಿಂತನೆಗೆ ಅಲ್ಲ ಎಂಬುದನ್ನೆಲ್ಲ ಕ್ಲೀಶೆ, ಕೆಟ್ಟ ಡೈಲಾಗ್‌ಗಳ ಹಸ್ಮತುಲ್ಲಾನ ನೇರ, ನಿಷ್ಠುರ ಬದುಕಿನ ಮೂಲಕವೇ ಚಿತ್ರಿಸುತ್ತದೆ.

'ರೋಡ್ ಟು ಸಂಗಮ್' ಅಮಿತ್ ರೈ ಎಂಬುವವರ ಚೊಚ್ಚಲ ನಿರ್ದೇಶನದ ಸಿನಿಮಾವಾಗಿದೆ. ಅದ್ಭುತ ನಟರಾದ ಪರೇಶ್ ರಾವಲ್ ಅವರು ಹಸ್ಮತುಲ್ಲಾ ಪಾತ್ರದಲ್ಲಿ ಬೆರೆತುಹೋಗಿದ್ದಾರೆ. ಚಿತ್ರದ ಪ್ರತಿ ಕ್ಷಣವೂ ಸೂಕ್ಷ್ಮವಾಗಿ ಮೂಡಿ ಬಂದಿದೆ. 'ರೋಡ್ ಟು ಸಂಗಮ' ಚಿತ್ರದ ಸಿಡಿ ಈಗ ಎಲ್ಲೆಡೆ ಲಭ್ಯವಿದೆ. ನಿಮ್ಮೂರಲ್ಲಿ ಸಿಕ್ಕರೆ ದಯವಿಟ್ಟು ಇದನ್ನು ನೋಡಿ....

64ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ನಮ್ಮ ದೇಶ ಎತ್ತ ಸಾಗಿದೆ ಎಂಬುದರ ಬಗ್ಗೆ ವಿಷಾದವಾಗುತ್ತಿರುವಾಗಲೇ ನಮ್ಮ ದೇಶದಲ್ಲಿ ಗಾಂಧೀಜಿಯ ಆಶಯಗಳನ್ನು ನಮ್ಮ ಮುಂದೆ ಮತ್ತೆ ತೆರೆದಿಡುವ ಮೂಲಕ ನಾವು ಸಿನಿಕರಾಗದಂತೆ ನೋಡಿಕೊಳ್ಳುವ ಯುವಕರೂ ಇದ್ದಾರೆ ಎಂದು ಈ ಚಿತ್ರ ತೋರಿಸಿದ್ದರಿಂದ ಒಂದಿಷ್ಟು ನೆಮ್ಮದಿ ಆಯಿತು. •



ಪತ್ನಿ ಹಂತಕ ಸತೀಶ್ ಬಾಯಿಬಿಟ್ಟಿದ್ದು- ಕೊಲ್ಲುವ ಮುನ್ನ ರಿಹರ್ಸಲ್ ನಡೆಸಿದ್ದೆ...

ನಾನು ಅವಳನ್ನ ಎಷ್ಟೊಂದು ಪ್ರೀತಿಸ್ತಿದ್ದೀನಿ ಗೊತ್ತಾ? ಅವಳಿಗೆ ಅಂತಾನೇ ಒಂದು ಕಾರನ್ನು ಗಿಫ್ಟ್ ಮಾಡಬೇಕು ಅಂತಾ ದುಡ್ಡು ರೆಡಿ ಮಾಡಿ ಇಟ್ಟುಕೊಂಡಿದ್ದೀನಿ. ಏನ್ ಮಾಡೋದು ಅತ್ತೆ ಬೇಡ ಅಂತಿದ್ದಾಳೆ. ನೀವಾದ್ರೂ ಹೇಳಬಾರ್ದ? ಪ್ರೀತಿಯಿಂದ ನಾನು ಗಿಫ್ಟು ಕೊಡೋದು ಕೂಡ ತಪ್ಪಾ? ಅವಳನ್ನಲ್ಲದೇ ನಾನು ಯಾರನ್ನ ಪ್ರೀತಿಸಲಿ? ನೀವೇ ಹೇಳಿ ಅತ್ತೆ-

ಹೀಗೆ ಮಾತು ಮಾತಿಗೆ ತನ್ನ ಎದೆಬಗೆದಂತೆ ಪತ್ನಿ ಪ್ರಿಯಾಂಕಾಳನ್ನು ತಾನು ಅದೆಷ್ಟು ಪ್ರೀತಿಸುತ್ತಿದ್ದೇನೆಂದು ಆಕೆಯ ತಾಯಿ ಅಂದರೆ ತನ್ನ ಅತ್ತೆಯನ್ನು ನಂಬಿಸಲೆತ್ನಿಸುತ್ತಿದ್ದ ಅಳಿಯ ಸತೀಶನೇ ಇನ್ನೊಂದು ತಿಂಗಳಲ್ಲಿ ತನ್ನ ಮಗಳನ್ನು ಕೊಂದು ಹಾಕುತ್ತಾನೆಂಬುದು ಹೇಗೆ ತಾನೇ ತಾಯಿ ಕಾಂಚನಾಗೆ ಗೊತ್ತಾಗಬೇಕು? ಅಳಿಯನೇ ತನ್ನ ಮಗಳ ಪಾಲಿಗೆ ಯಮಧೂತನಾಗಿ ಕಾದಿದ್ದಾನೆಂಬುದು ಆ ತಾಯಿಗೆ ಗೊತ್ತಾಗಲೇ ಇಲ್ಲ.

ಅಂಥದೊಂದು ತಣ್ಣಗಿನ ಸಾವಿನ ಬಲೆಯನ್ನು ಸದ್ದಿಲ್ಲದೇ ಹೆಣೆದವನು ಇನ್ಫೋಸಿಸ್‌ನ ಸಿಬ್ಬಂದಿ ನಿಯಂತ್ರಣಾಧಿಕಾರಿ ಸತೀಶ್‌ಕುಮಾರ್ ಗುಪ್ತಾ. ಆಗಸ್ಟ್ 10ರ ಬೆಳ್ಳಂಬೆಳಗ್ಗೆ ಹುಳಿಮಾವು ವ್ಯಾಪ್ತಿಯ ವೆಂಕಟೇಶ್ವರ ಲೇಔಟಿನ ತನ್ನ ಮನೆಯಲ್ಲೇ ಕೊಲೆಯಾದ ಪ್ರಿಯಾಂಕಾ ಗುಪ್ತಾಳಿಗೂ ತನ್ನ ಗಂಡನ ಅತೀ ಪ್ರೀತಿಯ ಮರೆಯಲ್ಲಿ ಸಾವು ಅವಿತು ಕುಳಿತದ್ದು ಗೊತ್ತಾಗಲಿಲ್ಲ.

ಅದು ಆಗಸ್ಟ್ 1ರ ಮುಂಜಾವಿನ ಹೊತ್ತು. ಹಿಂದಿನ ರಾತ್ರಿಯೇ ನಾಳೆ ನಿನಗೊಂದು ಅಚ್ಚರಿಯ ಗಿಫ್ಟು ಕೊಡ್ತೀನಿ ಎಂದು ಪ್ರಿಯಾಂಕಾಳನ್ನು ಸತೀಶ್ ನಂಬಿಸಿದ್ದ. ಬೆಳಗ್ಗೆಯೇ ಆಕೆಯನ್ನು ಎಬ್ಬಿಸಿದ ಸತೀಶ್ ವಿಪರೀತ ಮುದ್ದುಮಾಡಿ 'ಅದೇನು ಅಂತ ನೋಡೋ ಆಸಕ್ತಿ ಇದೆಯಾ? ಎಂದು



ತನ್ನ ತಂದೆ-ತಾಯಿ ಹಾಗೂ ಪತಿ ಸತೀಶ್ ಜೊತೆ ಪ್ರಿಯಾಂಕ...

ಪತ್ನಿಯನ್ನು ಕೆಣಕಿದ್ದ. ಗಂಡ ಸರ್‌ಪ್ರೈಸ್ ಗಿಫ್ಟು ಕೊಡುತ್ತಾನೆ ಎಂದರೆ ಯಾವ ಪತ್ನಿ ತಾನೇ ಸಂಭ್ರಮಿಸುವುದಿಲ್ಲ?

ಮರುಮಾತಾಡದೇ ತಲೆದೂಗಿಸಿದಳು ಪ್ರಿಯಾಂಕಾ. ಸತೀಶ್ ಆಕೆಯನ್ನು ಅದೇ ಕುರ್ಚಿಯಲ್ಲಿ ಕೂರಿಸಿ ಆಕೆಯ ಎರಡೂ ಕೈಗಳನ್ನು ಕುರ್ಚಿಗೆ ಕಟ್ಟಿದ. ಆಕೆಯ ಹಿಂದೆ ಬಂದು ನಿಂತವನೇ ಪಟ್ಟಿಯೊಂದನ್ನು ತೆಗೆದು ಕಣ್ಣಿಗೆ ಕಟ್ಟಿದ. ಡ್ರಾಯಿಂಗ್ ರೂಮಿನಿಂದ ದೊಡ್ಡ ಬೋರ್ಡ್ ಒಂದನ್ನು ತಂದು ಎದುರಿಗಿಟ್ಟ. ಪ್ರಿಯಾಂಕಾಳ ವಿವಿಧ ಭಂಗಿಗಳ ಫೋಟೋಗಳನ್ನು ಕೊಲಾಜ್ ಮಾಡಿ ಆ ಬೋರ್ಡಿಗೆ ಅಂಟಿಸಲಾಗಿತ್ತು. ಸತೀಶ್ ತಾನೇ ನಿಂತು ಆಕೆಯ ಕಣ್ಣು ಪಟ್ಟಿಯನ್ನು ಬಿಚ್ಚಿದ್ದ. ಅದನ್ನು ನೋಡಿದ್ದೇ ಪ್ರಿಯಾಂಕಾ ಸಂಭ್ರಮಿಸಿಬಿಟ್ಟಳು. ಇದು ತನ್ನ ಹತ್ಯೆಗೆ ತನ್ನ ಗಂಡ ನಡೆಸುತ್ತಿರುವ ರಿಹರ್ಸಲ್ ಎಂದು ಆಕೆಗೆಲ್ಲಿ ಗೊತ್ತಾಗಬೇಕು?

ಸತೀಶ್ ಆರು ತಿಂಗಳ ಹಿಂದೆಯೇ ತನ್ನ ಪತ್ನಿಯನ್ನು ಮುಗಿಸಿಹಾಕಲು ನಿರ್ಧರಿಸಿದ್ದ. ಕ್ಷಣಕ್ಷಣಕ್ಕೂ ಅವಕಾಶಕ್ಕಾಗಿ



ಸತೀಶ್-ಪ್ರಿಯಾಂಕ

ಹಾತೊರೆಯುತ್ತಿದ್ದ. ಮದುವೆಯಾದ ಮೂರು ತಿಂಗಳಷ್ಟೇ ಗಂಡಹೆಂಡತಿ ಸುಖವಾಗಿದ್ದದ್ದು. ಸಾಕಷ್ಟು ವರದಕ್ಷಿಣೆಯನ್ನು ಸತೀಶ್ ಪಡಕೊಂಡಿದ್ದ. ಸಣ್ಣಪುಟ್ಟ ವಿಷಯಕ್ಕೂ ಸತೀಶನ ತಾಯಿ ಮೀರಾ ಸೊಸೆಯನ್ನು ಕುಟುಕುತ್ತಿದ್ದಳು. ಪ್ರಜ್ಞಾವಂತನಂತೆ ಪೋಜು ಕೊಡುತ್ತಿದ್ದ ಸತೀಶ್ ತನ್ನ ತಾಯಿಯ ಪರ ವಹಿಸುತ್ತಿದ್ದನೇ ಹೊರತು ಯಾವತ್ತೂ ಪ್ರಿಯಾಂಕಾಳನ್ನು ಬೆಂಬಲಿಸುತ್ತಿರಲಿಲ್ಲ. ಸಂಪ್ರದಾಯಸ್ಥ ಬನಿಯಾ ಕುಟುಂಬವೊಂದರಲ್ಲಿ ಏನೆಲ್ಲಾ ಹುಳುಕಿರುತ್ತೋ ಅದೆಲ್ಲವೂ ಸತೀಶನ ಮನೆಯಲ್ಲಿತ್ತು. ಶುರುವಿನಲ್ಲಿ ಇದೆಲ್ಲಾ ಇದ್ದಿದ್ದೇ ಎಂದು ಪ್ರಿಯಾಂಕಾ ಸಹಿಸಿಕೊಂಡಿದ್ದಳು. ದೆಹಲಿ ಪಬ್ಲಿಕ್ ಸ್ಕೂಲಿನಲ್ಲಿ ಆಕೆಗೆ ಟೀಚರ್ ಕೆಲಸ ಸಿಕ್ಕಿತು. ದಿನವಿಡೀ ಶಾಲೆಯಲ್ಲಿ ದುಡಿದು ಬಂದರೆ ಮನೆಯಲ್ಲಿ ಅಡುಗೆ ಕೂಡ ಆಕೆಯ ತಲೆಗೇ ಬಿದ್ದಿತ್ತು. ಹೀಗೆ ಮೂರು ವರ್ಷಗಳು ಕಳೆದು ಹೋದವು. ಗಂಡಹೆಂಡತಿ ಅನ್ಯೋನ್ಯವಾಗಿರುವುದನ್ನು ಅತ್ತೆ ಮೀರಾ ಸಹಿಸಲೇ ಇಲ್ಲ. ಸತೀಶನ ತಂದೆ ಆನಂದ್‌ಕುಮಾರ್ ಗುಪ್ತಾ ತನ್ನ ಬನಿಯಾ ಬುದ್ಧಿಗೆ ತಕ್ಕಂತೆ ಪರಮಲೋಭಿ.

ಮೂರು ವರ್ಷಗಳಾದರೂ ಪ್ರಿಯಾಂಕಾ ಗರ್ಭಿಣಿಯಾಗದೇ ಇದ್ದದ್ದು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಿಸಿತ್ತು. ಇನ್ನು ತಾಳಿ ಫಲವಿಲ್ಲ ಎಂಬ ನಿರ್ಧಾರಕ್ಕೆ ಬಂದ ಪ್ರಿಯಾಂಕಾ ಬೇರೆ ಮನೆ ಮಾಡುವಂತೆ ಹಠಕ್ಕೆ ಬಿದ್ದಿದ್ದಾಳೆ. ಎಲ್ಲಿ ತನ್ನ ಮೇಲೆ ವರದಕ್ಷಿಣೆ ಕಿರುಕುಳದ ಕೇಸು ಬೀಳುತ್ತೋ ಎಂದು ಹೆದರಿದ ಸತೀಶ್ ವೆಂಕಟೇಶ್ವರ ಲೇಔಟಿನಲ್ಲಿ ಪ್ರತ್ಯೇಕ ಮನೆ ಹಿಡಿದಿದ್ದು ಇಲ್ಲಿಗೆ ಎಂಟು ತಿಂಗಳ ಹಿಂದೆ.

ಆ ಹೊತ್ತಿಗಾಗಲೇ ಪತ್ನಿಯನ್ನು ಕೊಂದು ಹಾಕಲು ಆತ ನಿರ್ಧರಿಸಿಬಿಟ್ಟಿದ್ದ. ಅದಕ್ಕೆ ಕಾರಣವಾದದ್ದು ಆತನ ನಪುಂಸಕತ್ವ. ಪ್ರಿಯಾಂಕಾ ಆರೋಗ್ಯವಾಗೇ ಇದ್ದಳು. ತಾನು ಗರ್ಭಿಣಿಯಾಗದೇ ಇದ್ದುದಕ್ಕೆ ಸತೀಶ ದೌರ್ಬಲ್ಯವೇ ಕಾರಣವೆಂಬುದು ಗೊತ್ತಾಗಿದ್ದೇ ತಡ ಪ್ರಿಯಾಂಕ ವೀರ್ಯ ಪರೀಕ್ಷೆಗೊಳಪಡುವಂತೆ ಸತೀಶನನ್ನು ಪೀಡಿಸಲಾರಂಭಿಸಿದಳು. ತಾನೊಬ್ಬ ನಿಸ್ಸಾರ ಪುರುಷನೆಂಬುದನ್ನು ಅಷ್ಟು ಸುಲಭಕ್ಕಾತ ಒಪ್ಪಿಕೊಳ್ಳಬೇಕಲ್ಲ?

ತಾನು ವೀರ್ಯ ಪರೀಕ್ಷೆ ಮಾಡಿಕೊಂಡೆನೆಂದೂ ರಿಪೋರ್ಟ್‌ನಲ್ಲಿ ಯಾವುದೇ ದೋಷ ಇಲ್ಲವೆಂದೂ ಸತೀಶ್ ಸಾಧಿಸಿದ್ದ. ಹಾಗಾದರೆ ಆ ರಿಪೋರ್ಟನ್ನು ತೋರಿಸು ಎಂದು ಪ್ರಿಯಾಂಕಾ ಒತ್ತಾಯಿಸಿದರೆ; ಅದನ್ನು ತನ್ನ ಆಫೀಸಿನಲ್ಲಿಟ್ಟಿದ್ದೇನೆಂದೂ ತರುವುದನ್ನು ಮರೆತೇಬಿಟ್ಟೆನೆಂದೂ ಮಾತು ತೇಲಿಸಿ ಬಿಡುತ್ತಿದ್ದ. ನಿನಗೆ ಅರ್ಥರೈಟಿಸ್ ಇರೋದೇ ಇದಕ್ಕೆಲ್ಲಾ ಕಾರಣ ಎಂದು ಪದೇಪದೇ ಪ್ರಿಯಾಂಕಾಳನ್ನು ಹಂಗಿಸುತ್ತಿದ್ದ. ಅರ್ಥರೈಟಿಸ್‌ಗೂ ಸಂತಾನ ಹೀನತೆಗೂ ಸಂಬಂಧವಿಲ್ಲದಿದ್ದರೂ ಅದೊಂದೇ ಕಾರಣಕ್ಕೆ ಯಾಕೆ ಮಾತು ಕೇಳಬೇಕೆಂದು ಪ್ರಿಯಾಂಕಾಳ ತಾಯಿಯೇ ಬಂದು ಆಕೆಯನ್ನು ಕೇರಳದ ಪ್ರಕೃತಿ ಚಿಕಿತ್ಸಾ ಕೇಂದ್ರವೊಂದಕ್ಕೆ ಕರೆದೊಯ್ದಿದ್ದರು. ಸರಿಸುಮಾರು ಒಂದು ತಿಂಗಳ ಕಾಲ ಚಿಕಿತ್ಸೆಯೂ ನಡೆಯಿತು. ಜೂನ್ ತಿಂಗಳಲ್ಲಿ ಕೇರಳದಿಂದ ವಾಪಸ್ಸು ಮಗಳನ್ನು ಕರೆತಂದು ಬಿಟ್ಟು ಮತ್ತೆ ಲಕ್ನೋಗೆ ಬಂದ ತಾಯಿಗೇ ಅಚ್ಚರಿಯಾಗುವಂತೆ ಸತೀಶನ ವರ್ತನೆಯೇ ಬದಲಾಗಿ ಹೋಗಿತ್ತು.



ಮೊಸಳೆ ಕಣ್ಣೀರು ಸುರಿಸುತ್ತಿರುವ ಸತೀಶ್..



ಪ್ರಿಯಾಂಕಾಳ ಬಗ್ಗೆ ವಿಪರೀತ ಕಾಳಜಿ ವಹಿಸುತ್ತಿದ್ದ ವಿನಾಕಾರಣ ಮುದ್ದು ಮಾಡುತ್ತಿದ್ದ. ಯಾವತ್ತೂ ಇಲ್ಲದ ಗಿಫ್ಟು ಕೊಡುವ ಹೊಸ ಚಾಳಿಯೊಂದನ್ನು ಆರಂಭಿಸಿದ್ದ. ಅದು ತನ್ನ ನಿರ್ವೀರ್ಯತೆಯನ್ನು ಮುಚ್ಚಿಕೊಳ್ಳುವ ಮತ್ತು ಪ್ರಿಯಾಂಕಾಳ ಹತ್ಯೆಗೆ ಆತ ನಡೆಸುತ್ತಿದ್ದ ಹುನ್ನಾರದ ಸಿದ್ಧತೆಯಾಗಿತ್ತು. ಆಗಸ್ಟ್ 1 ರಂದು ಕುರ್ಚಿಗೆ ಕೈಕಟ್ಟಿದ ಪ್ರಸಂಗದಲ್ಲಿ ಪ್ರಿಯಾಂಕಾ ಆತನನ್ನು ನಂಬಿದ್ದು ಇನ್ನಷ್ಟು ಉತ್ತೇಜನಕ್ಕೀಡು ಮಾಡಿತ್ತು.

ಸದ್ಯ ಹುಳಿಮಾವು ಇನ್ಸ್‌ಪೆಕ್ಟರ್ ಬಲರಾಮೇ ಗೌಡರ ಮುಂದೆ ಸತೀಶ ಬಾಯಿ ಬಿಟ್ಟಂತೆ; ಆತ ಪ್ರಿಯಾಂಕಾಳನ್ನು ಕೊಲ್ಲಲು ಮತ್ತೂ ಒಂದೂ ಕಾರಣವಿತ್ತು. ಆಕೆ ದೀಪಾ ಬಸವರಾಜ್. ಇನ್ಫೋಸಿಸ್‌ನಲ್ಲಿ ಸತೀಶನ ಸಹೋದ್ಯೋಗಿಯಾಗಿದ್ದ ದೀಪಾ ಓರ್ವ ಡೈವೋರ್ಸಿ. ಚೆಲುವೆ ಪತ್ನಿಯಿದ್ದೂ ದೀಪಾ ಜೊತೆ ಚಕ್ಕಂದಕ್ಕಿಳಿದಿದ್ದ ಸತೀಶ್ ಪತ್ನಿ ಪ್ರಿಯಾಂಕಾಳನ್ನು ಮುಗಿಸಿಯಾದರೂ ದೀಪಾಳನ್ನು ದಕ್ಕಿಸಿಕೊಳ್ಳುವ ದುರಾಶೆಗೆ ಬಿದ್ದಿದ್ದ. ಪತ್ನಿಯನ್ನು ಕೊಂದು ಹಾಕಲು ಆತ ವಿವಿಧ ಮಾರ್ಗೋಪಾಯಗಳನ್ನು ಲೆಕ್ಕ ಹಾಕಿದ್ದ. 'ಮೊದಲು ಆಕ್ಸಿಡೆಂಟ್ ಮಾಡಿಸುವ ಪ್ಲಾನು ಮಾಡಿದ್ದೆ. ಅದು ರಿಸ್ಕಿ ಎನ್ನಿಸಿತು. ನಂತರ ಯಾರಾದರೂ ಸುಪಾರಿ ಹಂತಕರನ್ನು ಬಿಟ್ಟು ಕಾರ್ಯ ಸಾಧಿಸಲು ಯತ್ನಿಸಿದೆ. ಅದು ಕೂಡ ವಿಪರೀತ ದುಬಾರಿ ಮತ್ತು ರಿಸ್ಕಿನ ಕೆಲಸವಾಗಿತ್ತು. ನಂತರ ವಿಷಯುಕ್ತ ನಾಗರಹಾವೊಂದನ್ನು ತಂದು ಕಚ್ಚಿಸಲಾ ಎಂದು ನೋಡಿದೆ. ಆದರೆ ಅಂಥ ಹಾವು ಸಿಗಬೇಕಲ್ಲ? ಹಾವಿನ ವಿಷ ತಂದು ಕೃತಕವಾಗಿ ಹಾವು ಕಚ್ಚಿದಂತೆ ಮಾಡಲು ಸಾಧ್ಯವಾ ಎಂದೂ ತಲೆ ಕೆಡಿಸಿಕೊಂಡೆ. ಅದೂ ಕೂಡ ಇನ್‌ಪ್ರಾಕ್ಟಿಕಲ್ ಎನ್ನಿಸಿ ಕೊನೆಗೆ ನಾನೇ ಉಪಾಯವಾಗಿ ಮುಗಿಸಲು ನಿರ್ಧರಿಸಿದೆ....'

ಇದು ಹುಳಿಮಾವು ಪೊಲೀಸರ ಮುಂದೆ ಸತೀಶ್ ಬಾಯಿಬಿಟ್ಟ ವಿವರಗಳು.

ಅಂತಿಮವಾಗಿ ನಾನೇ ಮುಗಿಸಲು ನಿರ್ಧರಿಸಿದೆನಲ್ಲ; ಅದೇ ಸೇಫು ಅನ್ನಿಸಿತ್ತು. ಕಲಾಸಿಪಾಳ್ಯದ ಸಂಡೆ ಬಜಾರಿಗೆ ಬಂದು ಒಂದು ಜೊತೆ ಕೈಗ್ಲೌಸು ಮತ್ತು ಜರ್ಕೀನ್ ಒಂದನ್ನು ಖರೀದಿಸಿದೆ. ಅದಕ್ಕೆ ತಕ್ಕಂತೆ ವಾಕಿಂಗಿಗೆ ಹೋಗುವುದನ್ನು ಅಭ್ಯಾಸ ಮಾಡಿಕೊಂಡೆ. ಜುಲೈ 24 ರಿಂದ ಪ್ರತಿನಿತ್ಯ ಬೆಳಿಗ್ಗೆ ಐದಕ್ಕೆ ಎದ್ದವನೇ ವಾಕಿಂ[illegible] ಆರಂಭಿಸಿದೆ. ಇಷ್ಟರಲ್ಲೇ ನಿನಗೆ ಭಯಂಕರವಾದ ಗಿಫ್[illegible] ಕೊಡ್ತೀನಿ ನೋಡ್ತಾ ಇರು ಎಂದು ಪ್ರಿಯಾಂಕಾಳನ್[illegible] ರಮಿಸುತ್ತಿದ್ದೆ. ಅದು ನಿನ್ನ ಕುತ್ತಿಗೆಗೆ ಸಂಬಂಧಪಟ್ಟಿದ[illegible] ಎಂದೂ ಮುನ್ಸೂಚನೆ ನೀಡಿದ್ದೆ. ಬೆಲೆಬಾಳುವ ನೆಕ್ಲೇಸ್[illegible] ಕೊಡ್ತೀನಿ ಎಂಬಂತೆ ಪ್ರಿಯಾಂಕಾಳನ್ನು ಯಾಮಾರಿಸುವುದ[illegible] ನನ್ನ ಉದ್ದೇಶವಾಗಿತ್ತು. ಎಲ್ಲವೂ ಲೆಕ್ಕಾಚಾರದ ಹಾಗೆ[illegible] ಒದಗಿಬಂದಿತ್ತು. ಆಗಸ್ಟ್‌ರ ಹತ್ತರ ಬೆಳಗ್ಗೆಯೇ ಕೆಲ[illegible] ಮುಗಿಸಲು ನಿರ್ಧರಿಸಿಬಿಟ್ಟೆ. ನಾಳೆ ಬೆಳಗ್ಗೆ ನಿನಗೆ ಎಂಥ[illegible] ಗಿಫ್ಟು ಕೊಡ್ತೀನಿ ಗೊತ್ತಾ? ಎಂದು ಹಿಂದಿನ ರಾತ್ರಿಯ[illegible] ಅವಳನ್ನು ನಂಬಿಸಿದ್ದೆ. ಬೆಳಗ್ಗೆ ನಾಲ್ಕಕ್ಕೇ ಎದ್ದು ಪ್ರಿಯಾಂಕಾಳನ್[illegible] ಎಬ್ಬಿಸಿದೆ. ಮುಖ ತೊಳೆಕೊಂಡು ಬಾ ಎಂದೆ. ಖು[illegible] ಯಾಗೇ ರೆಡಿಯಾಗಿ ಬಂದಳು ಪ್ರಿಯಾಂಕಾ.

ಆಕೆಯನ್ನು ಹಿಂದೊಮ್ಮೆ ಮಾಡಿದ ಹಾಗೇ ಕುರ್ಚಿಯ[illegible] ಕೂರಿಸಿ ಎರಡೂ ಕೈಗಳನ್ನು ಕಟ್ಟಿಹಾಕಿದೆ. ಮುಂ[illegible] ಕನ್ನಡಿಯೊಂದನ್ನು ತಂದು ನಿಲ್ಲಿಸಿದೆ. ನೈಲಾನ್ ಹ[illegible] ಕೈಗ್ಲೌಸು, ಜರ್ಕಿನ್ನು ಎಲ್ಲವನ್ನೂ ರೆಡಿ ಮಾಡಿಕೊಂಡಿದ[illegible] ಪ್ರಿಯಾಂಕಾ ಸಂಭ್ರಮಿಸುತ್ತಿದ್ದಳು. ಹಿಂದೆ ಬಂದವನೇ ಆಕೆಯ[illegible] ಕಣ್ಣಿಗೆ ಪಟ್ಟಿ ಕಟ್ಟಿದೆ. ಒಮ್ಮೆ ಆಕೆಯ ಕುತ್ತಿಗೆಗೆ ಕೈಹಾ[illegible] ಸುಮ್ಮನೇ ಸವರಿದೆ. ಪ್ರಿಯಾಂಕಾ ನಕ್ಕಳು. ತಕ್ಷಣವೇ ನೈಲಾನ್[illegible] ಹಗ್ಗವನ್ನು ತೆಗೆದದ್ದೇ ಆಕೆಯ ಕುತ್ತಿಗೆ[illegible] ಸುತ್ತಿ ಬಲವಾಗಿ ಎಳೆದುಬಿಟ್ಟೆ[illegible] ಸರಿಸುಮಾರು ಐದು ನಿಮಿಷ[illegible] ಹಗ್ಗವನ್ನು ಹಾಗೇ ಎಳೆದ[illegible] ಹಿಡಿದಿದ್ದೆ. ಕ್ರಮೇಣ ಆಕೆಯ ಮುಖ[illegible] ಕಪ್ಪು ಬಣ್ಣಕ್ಕೆ ತಿರುಗುತ್ತಿತ್ತು. ತ[illegible] ಎರಡೂ ಕಾಲುಗಳನ್ನು ಒದ್ದಾಡು[illegible] ವಂತೆ ಚಡಪಡಿಸುತ್ತಿದ್ದಳು. ಐದೇ[illegible] ನಿಮಿಷಕ್ಕೆ ದೇಹ ನಿಷ್ಕ್ರಿಯಗೊಂಡಿತು[illegible]


ಆದರೆ ಹಗ್ಗ ಸಡಿಲಿಸುತ್ತಿದ್ದಂ[illegible] ಆಕೆಯ ಬಾಯಿಯಿಂದ ಗೊರ[illegible] ಗೊರ್ರ್ ಸದ್ದು ಕೇಳಿಸಿತು. ಇನ್ನೂ[illegible] ಉಸಿರಿತ್ತು. ಏನೋ ಯಡವಟ್ಟಾಗಿದ[illegible] ಎನ್ನಿಸಿ ಚಾಕು ತೆಗೆದದ್ದೇ ಕುತ್ತಿಗೆ[illegible] ಚುಚ್ಚಿ ಸೀಳಿಬಿಟ್ಟೆ. ಕ್ಷಣಾರ್ಧದಲ್ಲಿ[illegible] ಪ್ರಿಯಾಂಕಾಳ ಪ್ರಾಣ ಹೋಗಿತ್ತು[illegible] ಆದರೆ ರಕ್ತ ನನ್ನ ವಾಕಿಂಗ್ ಷ[illegible] ಮೇಲೆ ಬಿದ್ದಿತ್ತು. ಅದಕ್ಕೆ ಲೆದರ್[illegible] ಷೂ ಹಾಕಿಕೊಂಡೆ. ತಂದಿದ್ದ ಕೈ[illegible] ಗ್ಲೌಸ್ ಮತ್ತು ಜರ್ಕೀನನ್ನು ಆಕೆಯ[illegible] ಮೇಲೆ ಬಿಟ್ಟೆ ಪಕ್ಕದಲ್ಲೇ ಸಿಗರೇಟ್[illegible] ಪ್ಯಾಕೇಟೊಂದನ್ನು ಇರಿಸಿದೆ[illegible] ಆಕೆಯ ಮೊಬೈಲಿನಿಂದ ನನಗೆ ಫೋನ್ ಮಾಡಿದಂ[illegible] ನಕಲಿ ಕರೆ ಯೊಂದನ್ನು ಮಾಡಿದೆ. ಆದರೆ ಅದಾದ[illegible] ಮೇಲೆ ನನ್ನ ಜೊತೆ ವಾಕಿಂಗಿಗೆ ಬರುವ ಕಿಶನ್ ನನ[illegible] ಫೋನ್ ಮಾಡಿದ.

ಇದು ಹುಳಿಮಾವು ಇನ್ಸ್‌ಪೆಕ್ಟರ್ ಬಲರಾಮೇಗೌಡ[illegible] ಮುಂದೆ ಸತೀಶ್ ಬಾಯಿಬಿಟ್ಟ ವಿವರಗಳು. ಹಂತ[illegible] ಎಷ್ಟೇ ತಲೆ ಓಡಿಸಿದರೂ ತನಗರಿವಿಲ್ಲದಂತೆ ಕ್ಲೂಬಿಟ್ಟು[illegible] ಹೋಗಿರುತ್ತಾನೆಂಬ ಕ್ರಿಮಿನಾಲಜಿಯ ಥಿಯರಿ ಇಲ್ಲೂ[illegible] ಸಾಬೀತಾಗಿತ್ತು. ಪತ್ನಿಯನ್ನು ಕೊಂದು ವಾಕಿಂಗಿಗೆ ಹೋಗುವ[illegible] ಮೊದಲೇ ಸತೀಶ್ ತನ್ನ ಐಡೆಂಟಿಟಿ ಕಾರ್ಡನ್ನು ತೆಗೆದಿಟ್ಟು[illegible] ಕೊಂಡಿದ್ದ. ವಾಕಿಂಗಿಗೆ ಬಳಸುವ ಕ್ಯಾನ್ವಾಸ್ ಷೂ ಬದಲಿಗೆ[illegible] ಚರ್ಮದ ಬೂಟು ಧರಿಸಿದ್ದ. ಜೊತೆಗೆ ಕಾರಿನ ಕೀಯನ್ನೂ[illegible] ಮೊದಲೇ ತೆಗೆದಿಟ್ಟುಕೊಂಡಿದ್ದ. ಇದೇ ಆತನಿಗೆ ಮುಳು[illegible] ವಾಯಿತು.


ಬಹುಶಃ ಬೇರೆಲ್ಲಾ ಪಾತಕಿಗಳಿಗಿಂತಲೂ ಅತ್ಯಂತ[illegible] ಜಾಗರೂಕತೆಯಿಂದ, ಎಲ್ಲಾ ಸಿದ್ಧತೆಗಳೊಂದಿಗೆ, ಎಲ[illegible] ಥರದ ಮುನ್ನೆಚ್ಚರಿಕೆ ಕ್ರಮಗಳನ್ನೂ ಸತೀಶ್ ನಿಭಾಯಿಸಿದ್ದ[illegible] ಇನ್ಫೋಸಿಸ್‌ನ ಸೋಕಾಲ್ಡ್ ಬುದ್ಧಿವಂತ ಪಾತಕಿಗೆ ವಾಸ್ತವವೆ[illegible] ಬೇರೆ ಇದೆ ಎಂಬುದು ಅರ್ಥವಾಗಲು ಹೆಚ್ಚು ಹೊತ್ತು[illegible] ಹಿಡಿಯಲಿಲ್ಲ. ಈಗ ತನ್ನ ಕೈ ಕುಯ್ದುಕೊಂಡಿದ್ದಾನೆ[illegible] ಮಾತುಮಾತಿಗೆ ತನ್ನ ಲಾಯರ್ ಕರೆಸಿ ಎನ್ನುತ್ತಾನೆ[illegible] ಕಾರ್ಪೊರೇಟ್ ಕ್ರಿಮಿನಲ್ ಬುದ್ಧಿಗೆ ತಕ್ಕ ಶಿಕ್ಷೆಯಾಗು[illegible] ವುದೊಂದೇ ಬಾಕಿ.

• ರಾ. ಸೋಮನಾಥ್
ra.somanath2010@gmail.com

ಕಾರ್ಟೂನ್ ಕಾರ್ನರ್



ಮೈಸೂರು ಸಮಾವೇಶ: ಬಿಜೆಪಿಗೆ ಗರ್ವಭಂಗ!






ಕಾಂಗ್ರೆಸ್‌ನ ಪಾದಯಾತ್ರೆಗೆ ...ನೂ ಬೆದರಿಲ್ಲ, ಅದರಿಂದ ಯಾವ ...ಮ ಪರಿಣಾಮವೂ 'ಇಲ್ಲ' ಎಂದು ...ಕೊಳ್ಳುತ್ತಿದ್ದ ಬಿಜೆಪಿಯವರು ಒಂದಲ್ಲಾ ... ಸಮಾವೇಶಗಳನ್ನು ಯೋಜಿಸಿದ್ದು, ...ು ಯಾವ ಪರಿ ಬೆದರಿದ್ದರು ಎಂಬು ...ಸಾಕ್ಷಿಯಾಗಿತ್ತು. ನಾಲ್ಕರಲ್ಲಿ ಒಂದನ್ನು ...ೂರಲ್ಲೇ ಮಾಡಲು ಕಾರಣ ಸ್ಪಷ್ಟ ...ಯೇ ಇತ್ತು. ಮೈಸೂರು ಸಿದ್ದರಾಮಯ್ಯ ... ಪಾಳೆಯ ಪಟ್ಟು. ಆದ್ದರಿಂದಲೇ ...ರಾಮುಲು ಬಳ್ಳಾರಿಯಿಂದ ಮೈಸೂ... ಪಾದಯಾತ್ರೆ ಮಾಡುತ್ತೇನೆಂದು ...ಷಿಸಿದ್ದು, ಬಿಜೆಪಿಯೊಳಗೇ ರೆಡ್ಡಿಗಳಿಗೆ ... ಇಮೇಜ್ ತಂದುಕೊಡಬಾರದೆಂದು ...ಬಿಸಿದ್ದರಿಂದ ಅಂತಿಮವಾಗಿ ಪಾದ ...ತ್ರೆ ರದ್ದಾಗಿ ಸಮಾವೇಶಗಳ ಯೋಜನೆ ... ತಲೆಗೋ ಹೊಳೆಯಿತು. ಮೊದಲ ...ಮಾವೇಶ ದಾವಣಗೆರೆಯಲ್ಲಿ, ನಂತರ ...ನೆಯದ್ದು ಗುಲ್ಬರ್ಗದಲ್ಲಿ ನಡೆಯಿತು.

ಆ ಸಮಾವೇಶವಾಗಲೀ, ಬಳ್ಳಾರಿ ... ಗುಂಡು ಹೊಡೆಸಿಕೊಂಡು ಶ್ರೀ...ಮುಲು ನಡೆಸಿದ ಬೋಡುಗುಂಡುಗಳ ...ತ್ರೆಯಾಗಲೀ ಕಾಂಗ್ರೆಸ್ ಪಾದಯಾತ್ರೆಗೆ ...ತ್ತಿದ್ದ ಬೆಂಬಲ ಮತ್ತು ಅದು ಕರ್ನಾಟಕ ...ಮೂಡಿಸುತ್ತಿದ್ದ ಸಂಚಲನವನ್ನು ಕಡಿಮೆ ಮಾಡಲಿಲ್ಲ; ...ಗೆ ಸಿದ್ದರಾಮಯ್ಯನವರ ಇಮೇಜ್ ಸಹ ದಿನೇ ... ಏರುತ್ತಲೇ ಹೋಯಿತು. ಹೀಗಾಗಿ ಬಿಜೆಪಿಗೆ ಮತ್ತು ...ಪಟಾಲಂಗೆ ಮೈಸೂರು ಸಮಾವೇಶ ಬಹಳ ಪ್ರತಿಷ್ಠೆಯ ...ಕಿಯಾಗಿತ್ತು.

...ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯ ಜನರನ್ನೇ ...ಕಲಾಗಿತ್ತು. ಆದರೆ ಸ್ವತಃ ಬಿಜೆಪಿಗರು ...ಕ್ಷಿಸಿದ್ದರಲ್ಲಿ ಕಾಲು ಭಾಗವೂ ...ರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ...ಮಾವೇಶದಲ್ಲಿ ಶ್ರೀರಾಮುಲು ...ನಾಡುತ್ತಾ, ಬಳ್ಳಾರಿಯಲ್ಲಿ ಕಾಂಗ್ರೆಸ್ ...ಮಾವೇಶಕ್ಕೆ ಸೇರಿದ್ದಕ್ಕಿಂತ ಮೂರು ಪಟ್ಟು ...ಇಲ್ಲಿ ಸೇರಿದ್ದಾರೆ ಎಂದು ಹೇಳಿದಾಗ ...ಸೇರಿದ್ದ ಜನರೇ ತಮಗೂ ಕಾಣಿಸದ ...ಟ ಜನರು ಎಲ್ಲಿದ್ದಾರೆ ಎಂದು ...ಮುಂದೆ ಹುಡುಕಿದರು. ಇದು ...ಯ ನಿರೀಕ್ಷೆಗೂ ಜನಸ್ಪಂದನೆಗೂ ... ಅಂತರವನ್ನು ಎತ್ತಿ ತೋರಿಸುತ್ತಿತ್ತು. ಈ ಹಿಂದೆ ...ಭಾ ಕರಂದ್ಲಾಜೆ ಉಸ್ತುವಾರಿಯಲ್ಲಿ ಮೈಸೂರಿನಲ್ಲಿ ...ದ್ದ ಸಾಧನಾ ಸಮಾವೇಶವು, ಈ ಪ್ರಮಾಣದ ಜಿದ್ದು ...ನ್ಮೂಲಗಳಿಲ್ಲದಿದ್ದರೂ ಇದಕ್ಕಿಂತ ಅಚ್ಚುಕಟ್ಟಾಗಿ ...ಪಿಗರ ಸಂಘಟನಾ ಶಕ್ತಿಗೆ ತಕ್ಕಂತೆ ನಡೆದಿತ್ತು. ಆದರೆ ...ರಿ ಶೋಭಕ್ಕನೂ ಸೇರಿದಂತೆ ಮೈಸೂರಿನ ಒಬ್ಬರಿಗೂ ...ಕೆಯಲ್ಲಿ ಗೌರವವಿರಲಿಲ್ಲ. ಇಂತಹ ಹಲವು ಎಡವಟ್ಟು ... ಮೈಸೂರಿನ ಬಿಜೆಪಿ ಸಮಾವೇಶವು ಗರ್ವಭಂಗಕ್ಕೆ ... ಮಾಡಿಕೊಟ್ಟಿತೇ ಹೊರತು, ಸಿದ್ದರಾಮಯ್ಯನವರಿ...ನ್ನೂ ಮಾಡಲಾಗಲಿಲ್ಲ.



ಸಿದ್ದರಾಜು

...ಸ್ಸಾದ ಶ್ರೀರಾಮುಲು ಪಟಾಕಿಗಳು


...ಮೈಸೂರಿನವರೆಗೆ ಪಾದಯಾತ್ರೆ ಮಾಡಲು ಪಕ್ಷದಿಂದ ...ಗೆ ದೊರಕಿಸಿಕೊಡಲು 'ತಾಯಿ' ಸುಷ್ಮಾ ಸ್ವರಾಜ್‌ಗೂ ...ಲ್ಲವೆಂದ ಮೇಲೆ ಶ್ರೀರಾಮುಲು ಹಾಕಿದ ಹೊಸ ... ಚಾಮುಂಡೇಶ್ವರಿ ಬೆಟ್ಟಕ್ಕೆ ಪಾದಯಾತ್ರೆ! ಸಾವಿರಾರು ... ಅಭಿಮಾನಿಗಳು ತಲೆ ಬೋಳಿಸಿಕೊಂಡು ಕರೀವೇಷ ...ಟ್ಟುಕೊಂಡು, ಕರಡಿಮರಿಗಳ ಹಾಗೆ ಬೆಟ್ಟವನ್ನು ಹತ್ತುತ್ತಾರೆ ...ದು ಬೇಗ್ ಬಿಡಲಾಗಿತ್ತು. ಆದರೆ ಅಂತಿಮವಾಗಿ ...ರಾಮುಲುಗಾಗಿ ತಲೆ ಬೋಳಿಸಿಕೊಳ್ಳಲು ಸಿಕ್ಕವರು ... 25 ಮಂದಿ ಮಾತ್ರ. ಅವರೂ ಬೆಟ್ಟ ಹತ್ತಿದ ...ಮೇಲೆ ದುಡ್ಡಿಗಾಗಿ ಜಗಳ ತೆಗೆದದ್ದನ್ನು ನೋಡಿದ ...ದ ಮೇಲಿನ ಜನ, ಡೈನಾಮಿಕ್ ಶ್ರೀರಾಮುಲುವಿನ ...ಮಾನಿಗಳ ರೀತಿ ಕಂಡು ದಂಗಾದರಂತೆ.

ಸಿದ್ದುಗೆ ಸರಿಯಾಗಿ ಪಂಚ್ ಮಾಡಲು ಹಿಂದುಳಿದ ವರ್ಗಗಳ ಹೊಸ ಡೈನಾಮಿಕ್ ಹೀರೋ ಶ್ರೀರಾಮುಲುವೇ ಸರಿ ಎಂದು ರೆಡ್ಡಿಗಳು ಆತನನ್ನು ನಾಲ್ಕಾರು ದಿನ ಮೊದಲೇ ಮೈಸೂರಿಗೆ ಅಟ್ಟಿದ್ದರು. ಆದರೆ ಬಳ್ಳಾರಿಯಲ್ಲಿ ತಲೆಬೋಳಿಸಿಕೊಂಡ ರಾಮುಲುಗೆ ಮೈಸೂರಿನಲ್ಲೂ ಅದೇ ಗತಿಯಾಯಿತು. ಅಪ್ಪಣ್ಣನೆಂಬ ಅಡ್ಡಕಸುಬಿ ಲೀಡರ್‌ನನ್ನು ಸಿದ್ದರಾಮಯ್ಯ ರಿಂದ ಬಿಡಿಸಿ ಬಿಜೆಪಿಗೆ ಸೇರಿಸು ವುದೂ ಅಲ್ಲದೇ, ಮೈಸೂರು ನಗರ, ಜಿಲ್ಲೆಗಳ ಹಲವು ದೊಡ್ಡ ಲೀಡರ್‌ಗಳನ್ನು ಕಾಂಗ್ರೆಸ್- ಜೆಡಿಎಸ್‌ನಿಂದ ಪಕ್ಷಾಂತರ ಮಾಡಿಸುವ ಪಣ ತೊಟ್ಟು ವಾರವಿಡೀ ರಾಮುಲು ತಿಣುಕಾಡಿದ್ದೇ ಬಂತು. ಅಂತಿಮವಾಗಿ ಸಮಾವೇಶದ ದಿನ ಒಬ್ಬನೇ ಒಬ್ಬ ಲೀಡರ್ ಸಹ ಬೇಲಿ ಹಾರಲಿಲ್ಲ. ಅತ್ತ ಚಾಮುಂಡೇಶ್ವರಿ ಯಾತ್ರೆಯೂ ಠುಸ್, ಇತ್ತ ಆಪರೇಷನ್ ಅಹಿಂದವೂ ಠುಸ್ ಆದ ಮೇಲೆ ಶ್ರೀರಾಮುಲುವಿನ ವರಸೆಯೇ ಬದಲಾಯಿತು. ಪತ್ರಕರ್ತರ ಮುಂದೆ 'ಸಿದ್ದರಾಮಯ್ಯರ ಬಗ್ಗೆ ನಾನೇನೂ ಮಾತಾಡಲ್ಲ, ನನಗೆ ಅವರ ಬಗ್ಗೆ ಗೌರವವಿದೆ' ಎಂದು ರಾಗ ಬದಲಾಯಿತು. ಕೊನೆಗೆ ತಾನು ಭಾಷಣ ಮಾಡುವಾಗ ಜೋರಾಗಿ ಶಿಳ್ಳೆ ಹೊಡೆಯಲು ಬಾವುಟ ತಿರುಗಿಸಲು ಜನರ ಕೊರತೆಯಾಗದಂತೆ ಮ್ಯಾನೇಜ್ ಮಾಡಿದ್ದಷ್ಟೇ ಶ್ರೀರಾಮುಲು ಎಫೆಕ್ಟ್.

ಹೊರಗಿನವರಿಗೆ ಗಾಳ-ಮನೆಯೊಳಗೇ ಗೂಟ

ಮೈಸೂರು ಭಾಗದ ನಾಯಕರು ಮತ್ತು ಒಕ್ಕಲಿಗರನ್ನು ದೊಡ್ಡ ಪ್ರಮಾಣದಲ್ಲಿ ಸೆಳೆಯಲು ಈ ಸಮಾವೇಶವನ್ನು ಬಳಸಿಕೊಳ್ಳಬೇಕೆಂಬ ಪ್ರಯ ತ್ನವೂ ತಿರುಗೇಟು ನೀಡಿದೆ. ಮಂಡ್ಯ ಜಿಲ್ಲೆಯ ಉಸ್ತುವಾರಿ ಹೊಂದಿರುವ ಸಚಿವ ಆರ್. ಅಶೋಕ್‌ಗೆ ಅಧಿಕೃತವಾಗಿ ಸಮಾವೇಶದ ಉಸ್ತುವಾರಿಯನ್ನು ನೀಡಲಾಗಿತ್ತು. ಮೈಸೂರಿನ ಉಸ್ತುವಾರಿ ಸಚಿವ ಸುರೇಶ್ ಕುಮಾರ್ ಹೇಗೂ ಈ ರೀತಿ ಜನರನ್ನು ಸೇರಿಸುವ ತಾಕತ್ತು ಇರುವವರೂ ಅಲ್ಲ, ಅಥವಾ ಫೈನಾನ್ಸ್ ಮಾಡುವ ಸಾಮರ್ಥ್ಯವೂ ಇಲ್ಲವಾದ್ದರಿಂದ ಅವರಿಗೆ ಸಿಕ್ಕ ಸ್ಥಾನವೂ ಅಷ್ಟಕ್ಕಷ್ಟೇ. ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಸೆಡ್ಡು ಹೊಡೆಯಲೆಂದು ಸಾಕಷ್ಟು ಬಾಜಾಭಜಂತ್ರಿಗಳೊಂದಿಗೆ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದ್ದ ಜಿ.ಟಿ.ದೇವೇಗೌಡರಿಗೆ ಯಾವ ವಿಶೇಷ ಮರ್ಯಾದೆಯನ್ನೂ ಕೊಡಲಿಲ್ಲ. ಸಮಾವೇಶದ ವೇದಿಕೆಗೆ ಈಶ್ವರಪ್ಪರೊಂದಿಗೆ ಮೇಲೇರಿದ್ದಷ್ಟೇ ಜಿಟಿಡಿಗೆ ದಕ್ಕಿದ ಸ್ಥಾನಮಾನ.

ಅದೇರೀತಿಯಲ್ಲಿ ರಾಮದಾಸ್ ಮತ್ತು ಶಂಕರಲಿಂಗೇಗೌಡರೆಂಬ ಪುರಾತನ ಬಿಜೆಪಿ ಶಾಸಕರೂ, ಹಾಲಿ ಕಟ್ಟಾ ಭಿನ್ನಮತೀಯರಿಗೂ ಸಿಕ್ಕ ಸ್ಥಾನಗಳೂ ಮೂರೂ ಮತ್ತೊಂದು. ಶೋಭಕ್ಕ ಮಹಾರಾಣಿಯಾಗಿ ಮೆರೆಯು ತ್ತಿದ್ದಾಗಲೂ ನರ್ಮ್ ಹಣದಲ್ಲಿ ಇವರ ಕ್ಷೇತ್ರಗಳಿಗೆ ಸಿಂಹಪಾಲು ಸಿಕ್ಕಿತು ಎಂಬ ಒಂದೇ ಮರ್ಯಾದೆ ಬಿಟ್ಟರೆ, ಆಗಿನಿಂದಲೂ ಇವರಿಬ್ಬರು ಮಲತಾಯಿ ಮಕ್ಕಳೇ. ಈ ಸಮಾವೇಶದಲ್ಲಿ ಮಾತನಾಡಲೂ ಕರಂದ್ಲಾಜೆಗೆ ಅವಕಾಶ ನೀಡಲಿಲ್ಲವಾದರೂ, ಆಕೆಯ ಬಲಗೈ ಬಂಟ ಎಂ.ಎಲ್.ಸಿ. ಸಿದ್ದರಾಜುವಿನ ದರ್ಬಾರಂತೂ ಸಾಕಷ್ಟು ನಡೆಯಿತು. ಇವತ್ತು ಹುಣಸೂರಿನ ಎಂ.ಎಲ್.ಸಿ ಚಿಕ್ಕಮಾದುವಿನಷ್ಟೇ ಪ್ರಬಲವಾಗಿ ಬೆಳೆಯುತ್ತಿರುವ ನಾಯಕರ ಇನ್ನೊಬ್ಬ ಲೀಡರ್ ಸಿದ್ದರಾಜುವೇ. ಆತ ಸೇರಿಸಿದ ಜನರು ಸಹಜವಾಗಿ ಜಾತಿ ಪ್ರೇಮದಿಂದ ಶ್ರೀರಾಮುಲುಗೂ ಸಿಳ್ಳೆ ಹೊಡೆದರು. ಇದೇ ರೀತಿ ಜನ ಸೇರಿಸಲು, ಅವರಿವರ ಮೇಲೆ ಏರಿಹೋಗಲು ಶ್ರೀರಾಮುಲುವನ್ನು ರೆಡ್ಡಿ ಬ್ರದರ್ಸ್ ಇಟ್ಟುಕೊಂಡಿದ್ದರೆ, ಸಿದ್ದರಾಜುವನ್ನು ಯಡ್ಡಿ-ಶೋಭಾ ಜೋಡಿ ಮಡಗಿಕೊಂಡಿದೆ.



ಚಿಕ್ಕಮಾದು

ಜನ ಸೇರಿಸಲು ಮಂಡ್ಯ, ಚಾ.ನಗರ, ಕೊಡಗು, ಹಾಸನ ಜಿಲ್ಲೆಗಳ ಬಿಜೆಪಿ ಲೀಡರ್‌ಗಳಿಗೆಲ್ಲಾ ಹುಕುಂ ಹೋಗಿತ್ತು. ಅದಕ್ಕಾಗಿ ಅಶೋಕ್ ವಿಶೇಷ ಸಭೆಗಳನ್ನು ಮಾಡಿದ್ದರು. ಅಶೋಕ್ ಇಲಾಖೆಯಿಂದಲೇ ಸಾವಿರಾರು ಬಸ್‌ಗಳನ್ನು ಸಮಾವೇಶಕ್ಕಾಗಿ ಪಡೆಯಲಾಗಿತ್ತು. ಎಷ್ಟರ ಮಟ್ಟಿಗೆ ಈ ಭಾಗದ ಡಿಪೋಗಳನ್ನು ಖಾಲಿ ಮಾಡಿದ್ದರೆಂದರೆ ಮೈಸೂರು, ಮಂಡ್ಯ ಇತರೆಡೆಗಳಲ್ಲಿ ಜನರು ಬಸ್‌ಗಳಿಲ್ಲದೇ ಪರದಾಡಿ ಪ್ರತಿಭಟನೆಗಳನ್ನೂ ಮಾಡಿದರು. ಆ ರೀತಿ ಕೊಂಡೊಯ್ದ ಬಸ್‌ಗಳಲ್ಲಿ ಹೆಚ್ಚೆಂದರೆ ಪ್ರತೀ ಬಸ್‌ಗೆ 35 ಜನರಿದ್ದರು. 10-15 ಜನರು ಮಾತ್ರ ಇದ್ದ ಬಸ್‌ಗಳೂ ಸಾಲುಗಟ್ಟಿ ಸಮಾವೇಶಕ್ಕೆ ಬಂದಿದ್ದವು. ಬಸ್ ಹತ್ತುವಾಗ 100 ರೂಪಾಯಿ, ಊಟ, ಮತ್ತೆ ಮೈಸೂರಲ್ಲಿ ಬಸ್ ಹತ್ತಿ ಊರಲ್ಲಿ ಬಂದಿಳಿದರೆ 100 ರೂ.ನಂತೆ ಮಾತಾಡಿ ಜನರನ್ನು ಕರೆತರಲಾಗಿತ್ತು. ಸಾಕಷ್ಟು ಜನರು ಮೈಸೂರಿನಾದ್ಯಂತ ತಿರುಗಾಡಿಕೊಂಡು ಸಂಜೆ ಹೊತ್ತಿಗೆ ಮಿಸ್ ಮಾಡದೇ ಬಸ್ ಹತ್ತಿ ಊರು ಸೇರಿಕೊಂಡರು.

ಹೆಚ್ಚಿನ ಜನರು ಬಂದಿದ್ದು ಚಾಮರಾಜನಗರ ಜಿಲ್ಲೆಯಿಂದಲೇ. ನಗರದ ಕೆ.ಆರ್.ಮಲ್ಲಿಕಾರ್ಜುನ, ಗುಂಡ್ಲುಪೇಟೆ ನಿರಂಜನಕುಮಾರ್ ಮತ್ತು ಎ.ಆರ್.ಕೃಷ್ಣಮೂರ್ತಿ ಸಾಕಷ್ಟು ಜನ ಸೇರಿಸಿದ್ದರು. ಹನೂರಿನ ಪರಿಮಳಾ ನಾಗಪ್ಪ, ಕಾಮಗೆರೆಯ ಶಿವಕುಮಾರ್ ಮತ್ತು ಕೊಳ್ಳೇಗಾಲದ ಶಾಸಕ ನಂಜುಂಡಸ್ವಾಮಿಯೂ ಸಾಕಷ್ಟು ಓಡಾಡಿದ್ದು ಕಂಡು ಬಂದಿತು.

ಅನಂತಕುಮಾರ್ ಜೋಕ್ಸ್ ಮತ್ತು ಈಶ್ವರಪ್ಪ ಆರ್ಭಟ

ಇತ್ತೀಚೆಗೆ ಅನಂತಕುಮಾರ್ ಸಂಪೂರ್ಣ 'ಜೋಕು' ಮಾರ್ ಸ್ವಾಮಿಯಾಗುತ್ತಿದ್ದಾರೆ. ಅದಕ್ಕೆ ತಕ್ಕಂತೆ ಅವರು ಡಿಕೆಶಿ, ದೇಶಪಾಂಡೆಗಳನ್ನು ಸಂಗ್ಯಾ ಬಾಳ್ಯಾರೆಂತಲೂ, ಸಿದ್ದರಾಮಯ್ಯ ಜೋಕುಮಾರಸ್ವಾಮಿಯೆಂತಲೂ ಪದೇಪದೆ ಜೋಕು ಮಾಡುತ್ತಿದ್ದಾರೆ. ಮೈಸೂರಿನ ಸಮಾವೇಶದಲ್ಲಿ ಅನಂತಕುಮಾರ್ ತಮ್ಮ ಪ್ರತಿಸ್ಪರ್ಧಿಯಾದ ಸಿ.ಎಂ.ಇಬ್ರಾಹಿಂರನ್ನು ಜೋಕರ್ ಎಂತಲೂ ಕರೆಯಬಾರದು, ಅದೂ ಇದೂ ಎಂದು ಸಾಕಷ್ಟು ಹೀಗಳೆದರು. ಸಿ.ಎಂ.ಇಬ್ರಾಹಿಂ ಕಾಂಗ್ರೆಸ್ ಸಮಾವೇಶಗಳಲ್ಲಿ ಜೋಕರ್ ಆಗಿ ಬಳಕೆಯಾಗಿದ್ದೇನೋ ನಿಜ. ಒಂದೇ ವ್ಯತ್ಯಾಸವೆಂದರೆ ಇಬ್ರಾಹಿಂ ಜೋಕುಗಳಿಗೆ ಜನ ನಗುತ್ತಾರೆ. ಅನಂತಕುಮಾರ್ ಜೋಕು ಹೇಳಿ, ಎಲ್ಲಾ ಹಲ್ಲುಗಳನ್ನೂ ಬಿಟ್ಟರೂ ಜನ ಏನು ಮಾಡುವುದೆಂದು ಗೊತ್ತಾಗದೇ ಪಿಳಿಪಿಳಿ ಕಣ್ಣುಬಿಡುತ್ತಿರುತ್ತಾರೆ. ಇದು ಮೈಸೂರು ಸಮಾವೇಶದಲ್ಲೂ ರಿಪೀಟ್ ಆಯಿತು.

ಆದರೆ ಅತಿಭಯಂಕರನಾಗಿ ಆರ್ಭಟಿಸಿದ್ದು ಮಾತ್ರ ಈಶ್ವರಪ್ಪ. ಸಂಘಪರಿವಾರದಲ್ಲಿನ ಸಸ್ಯಾಹಾರಿ ಬ್ರಾಹ್ಮಣ-ಲಿಂಗಾಯತರಿಗಿಂತ ಹೆಚ್ಚಾಗಿ ಗೋ ಹತ್ಯೆ ನಿಷೇಧವನ್ನು ಪ್ರತಿಪಾದಿಸುವ ಉಮೇದಿಗೆ ಈಶ್ವರಪ್ಪ ಬಿದ್ದಿದ್ದಾರೆ. ಹೀಗಾಗಿ ಸಮಾವೇಶದಲ್ಲಿ 'ಕಾಂಗ್ರೆಸ್‌ನವರು ಗೋಹತ್ಯೆ ಕಾಯ್ದೆ ನಿಷೇಧ ಕಾಯ್ದೆ ತಡೆಯಿರಿ ಎಂದು ಚುನಾವಣೆಗೆ ಹೋಗಲಿ, ನಾವು ಗೋಹತ್ಯೆ ನಿಷೇಧ ಕಾಯ್ದೆ ವಿರೋಧಿಸುವವರ ಕೈ ಕಡಿಯಿರಿ ಎಂದು ಓಟು ಕೇಳುತ್ತೇವೆ' ಎಂದು ಈಶ್ವರಪ್ಪ ಅಬ್ಬರಿಸಿದರು. ದಾವಣಗೆರೆ ಸಮಾವೇಶದಲ್ಲಿ ಅರಚಾಡಿದ್ದ ಯಡಿಯೂರಪ್ಪನವರೂ, ಈಶ್ವರಪ್ಪರ ಕಿರುಚಾಟ ನೋಡಿ ಮೆತ್ತಗಾಗಿಬಿಟ್ಟರು.

ಸಮಾವೇಶ ಸಾಧಿಸಿದ್ದೇನು?

ಕೊನೆಗೂ ಉಳಿಯುವುದು ಇದೇ ಪ್ರಶ್ನೆ. ಮೈಸೂರಿನಲ್ಲಿ ಬಿಜೆಪಿ ಮತ್ತಷ್ಟು ವೀಕ್ ಆಗಲು ಈ ಸಮಾವೇಶ ದಾರಿ ಮಾಡಿಕೊಟ್ಟಿತಲ್ಲದೇ ಮತ್ತೇನೂ ಇಲ್ಲ ಎಂಬುದು ಬಿಜೆಪಿಯ ಒಳಗಿನ ಮೂಲಗಳೇ ಮಾತಾಡುತ್ತಿವೆ. ಒಕ್ಕಲಿಗ ನಾಯಕರನ್ನಾಗಿ ಯಾರನ್ನು ಪ್ರೊಜೆಕ್ಟ್ ಮಾಡಬೇಕು? ರೆಡ್ಡಿಗಳನ್ನು ಮುಂದಕ್ಕೆ ತರಬೇಕೋ ಇಲ್ಲವೋ? (ಈ ಸಮಾವೇಶದಲ್ಲಿ ರೆಡ್ಡಿ ಬ್ರದರ್ಸ್‌ಗೆ ಯಾರಿಗೂ ಮಾತಿಗೆ ಅವಕಾಶವಿರಲಿಲ್ಲ) ಹಿಂದುಳಿದ ಸಮುದಾಯಗಳನ್ನು ಅಪ್ಪಿಕೊಳ್ಳಬೇಕೋ, ಇಲ್ಲಾ ಲಿಂಗಾಯತರಿಗೇ ಗಂಟು ಬೀಳಬೇಕೋ? ಕಾಂಗ್ರೆಸ್‌ನ ಯಶಸ್ವಿ ಪಾದಯಾತ್ರೆಗೆ ಯಾವ ರೀತಿ ಉತ್ತರ ಕೊಡುವುದು? ಇತ್ಯಾದಿ ಗೊಂದಲಗಳಲ್ಲಿ ಬಿಜೆಪಿ ಮುಳುಗೇಳುತ್ತಿರುವಂತೆ ಕಾಣುತ್ತಿದೆ. ಅಕ್ರಮ ಗಣಿಗಾರಿಕೆ ವಿಚಾರದಲ್ಲೂ ಬಿಜೆಪಿ ಏನೆಲ್ಲಾ ಸರ್ಕಸ್ ಮಾಡಿದರೂ, ಅದರ ಆರ್ಗ್ಯುಮೆಂಟ್ ದುರ್ಬಲ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತಿದೆ. ಮೈಸೂರಿನ ಸಮಾವೇಶವೂ ಇದಕ್ಕೆ ಹೊರತಾಗಿರಲಿಲ್ಲ ಅಷ್ಟೇ.


ಸಿದ್ದರಾಮಯ್ಯನವರೂ ಈಶ್ವರಪ್ಪನಿಗೆ ಸರಿಸಾಟಿ ಎಂದು ತೋರಿಸುವಷ್ಟಕ್ಕೆ ಸೀಮಿತವಾಗದೇ, ಎಲ್ಲಾ ಜಾತಿಗಳ, ದುರ್ಬಲರ ನಿಜವಾದ ನಾಯಕನಾಗುವ ಛಾತಿ ತೋರಿದರೆ ಇದು ಕಾಂಗ್ರೆಸ್‌ಗೆ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ. ಅಂತಹ ಛಾತಿಯನ್ನು ಸಿದ್ದರಾಮಯ್ಯ ತೋರಿಯಾರೇ? ಆ ರೀತಿ ಅವರು ತೋರಲು ಪುರಾತನ ರೋಗಗಳಿಂದ ಬಳಲುತ್ತಿರುವ ಕಾಂಗ್ರೆಸ್ ಪಕ್ಷ ಮತ್ತು ಅದರ ಇತರ ನಾಯಕರು ಬಿಡುವರೇ ಎಂಬುದಷ್ಟೇ ಈಗ ಇರುವ ಸಂದೇಹ.

• ಲಕ್ಷ್ಮಣ್ ಚೀರನಹಳ್ಳಿ

lakshmancheeranahally@gmail.com

ಅಡ್ಡಕಸುಬಿ ಅಪ್ಪಣ್ಣ

ಸಮಾವೇಶಕ್ಕೆ ಮುಂಚೆಯೇ ಮೈಸೂರಿಗೆ ಬಂದು ಠಿಕಾಣಿ ಹೂಡಿದ ನಂತರ ಶ್ರೀರಾಮುಲು ಮಾಡಿದ ಎರಡು ಘನಂದಾರಿ ಕೆಲಸಗಳೆಂದರೆ ಒಂದು ಚಾಮುಂಡಿ ಬೆಟ್ಟಕ್ಕೆ 'ಗುಂಡು'ಗಳ ಯಾತ್ರೆ, ಎರಡು ಅಡ್ಡಕಸುಬಿ ಅಪ್ಪಣ್ಣನ ಮನೆಯಲ್ಲಿ ತಿಂಡಿ ತಿಂದದ್ದು. ಈ ಅಪ್ಪಣ್ಣ ಹೆಸರಿಗೆ ಅಹಿಂದದ ರಾಜ್ಯ ಯುವ ಅಧ್ಯಕ್ಷ. ಕುರುಬರ ಸಿದ್ದರಾಮಣ್ಣನ ಜೊತೆಗೆ, ಮತ್ತೊಂದು ಬಲಿಷ್ಠ ಹಿಂದುಳಿದ ಕೋಮು ನಾಯಕರ ಪ್ರತಿನಿಧಿಯಾಗಿ ಅಪ್ಪಣ್ಣ ಇರಲಿ ಎಂದು ಅದ್ಯಾವ ತಲೆಗೆ ಹೊಳೆಯಿತೋ, ಅಂದಿನಿಂದ ಅಪ್ಪಣ್ಣನ ಹೆಸರಿಗೆ ಅಹಿಂದವೂ ಅಂಟಿಕೊಂಡಿತು. ಈ ಮಹಾಮಹಿಮನ ಲೀಲೆಗಳೆಲ್ಲಾ ಗೊತ್ತಿದ್ದೂ ಮೈಸೂರಿನ ಪತ್ರಕರ್ತರು 'ಅಪ್ಪಣ್ಣನ ಮನೆಗೆ ಶ್ರೀರಾಮುಲು ಭೇಟಿ' ಎಂದು ಲೀಡ್ ಸುದ್ದಿಗಳನ್ನು ಬರೆದರು.



ಅಪ್ಪಣ್ಣ


ಬಿಜೆಪಿಯಲ್ಲೂ ಒಂದಷ್ಟು ಕಾಲ ಇದ್ದ ಅಪ್ಪಣ್ಣ ಜೆಡಿಎಸ್‌ನಿಂದ ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸಿದ್ದ ಸಿದ್ದರಾಮಯ್ಯನವರ ವಿರುದ್ಧ ನಿಂತಿದ್ದ. ನಂತರ ಉಪಚುನಾವಣೆಯಲ್ಲಿ ಸಿದ್ದರಾಮಯ್ಯರ ಪರವಾಗಿದ್ದು ಕಾಂಗ್ರೆಸ್‌ಗೆ ಬಂದ. ಕಳೆದ ಚುನಾವಣೆಯಲ್ಲಿ ಎಚ್.ಡಿ.ಕೋಟೆ ಎಸ್.ಟಿ. ರಿಸರ್ವ್ ಕ್ಷೇತ್ರಕ್ಕೆ ತನಗೇ ಟಿಕೆಟ್ ಸಿಗಬಹುದೆಂದು ಕಾದುಕೊಂಡಿದ್ದ ಅಪ್ಪಣ್ಣನಿಗೆ ಸಿದ್ದು ಟಿಕೆಟ್ ಕೊಡಿಸಲಾಗಿರಲಿಲ್ಲ. ಅದು ಉದ್ದೇಶಪೂರ್ವಕವೋ ಅಥವಾ ಕಾಂಗ್ರೆಸ್ ಹೈಕಮಾಂಡ್ ಆದೇಶವೋ, ಅಂತೂ ಅಪ್ಪಣ್ಣನಿಗೆ ಟಿಕೆಟ್ ಸಿಗಲಿಲ್ಲ. ಆಗ ಬಂಡಾಯ ಅಭ್ಯರ್ಥಿಯಾಗಿ ಆತ ನಿಂತಾಗ, ಬಹುತೇಕರು ಈತ ಸಿದ್ದು ನಿಲ್ಲಿಸಿದ ಬಂಡಾಯ ಕ್ಯಾಂಡಿಡೇಟ್ ಎಂದೇ ತಿಳಿದರು. ಆದರೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಚಿಕ್ಕಣ್ಣರ ಪರವಾಗಿಯೇ ಕೆಲಸ ಮಾಡಿದರಲ್ಲದೇ ಆತನ ಗೆಲುವಿಗೂ ಕಾರಣರಾದರು. ನಾಯಕರ ಭಾರೀ ಬೃಹತ್ ನಾಯಕ ಅಪ್ಪಣ್ಣ ಅಮೋಘ 3600 ಓಟುಗಳನ್ನು ಪಡೆದುಕೊಂಡು, ಠೇವಣಿಯನ್ನು ಚುನಾವಣಾ ಆಯೋಗಕ್ಕೇ ಬಿಟ್ಟುಕೊಟ್ಟಿದ್ದರು.

ಆ ನಂತರ ಸಿದ್ದರಾಮಯ್ಯರ ಜೊತೆ ಮುನಿಸಿಕೊಂಡಿದ್ದ ಆತ, ಬೇರೆ ಯಾವುದಾದರೂ ಅವಕಾಶ ಸಿಗಬಹುದೇ ಎಂದು ಕಾಯುತ್ತಾ ಕೂತಿದ್ದ. ಅಷ್ಟರಲ್ಲಿ ಬಳ್ಳಾರಿ ದೊರೆ ಶ್ರೀರಾಮುಲು ಅವರ ಸವಾರಿ ಮೈಸೂರಿಗೆ ಬಿಜಯಂಗೈಯಿತು. ಆದರೆ ಶ್ರೀರಾಮುಲುಗಿಂತ ಸಾಕಷ್ಟು ಹೆಸರು ಕೆಡಿಸಿಕೊಂಡು ಕೂತಿದ್ದ ಅಪ್ಪಣ್ಣ ದೊಡ್ಡ ಮೊತ್ತದ ರೊಕ್ಕ ಹಾಗೂ ಟಿಕೆಟ್ ಖಾತರಿಯ ಬೇಡಿಕೆಯನ್ನಿಟ್ಟಿದ್ದರಿಂದ ಬಿಜೆಪಿಯ ನಾಯಕರು ಆತನನ್ನು ಪಕ್ಷದೊಳಕ್ಕೆ ಬಿಟ್ಟುಕೊಳ್ಳಲಿಲ್ಲ ಎಂದು ಹೇಳಲಾಗುತ್ತಿದೆ. ಜೊತೆಗೆ ತನ್ನ ಜಾತಿಯ ಮತ್ತೊಬ್ಬ ವ್ಯಕ್ತಿ ಮೈಸೂರು ಬಿಜೆಪಿಯೊಳಗೆ ಬೆಳೆಯುವುದನ್ನು ಬಿಡುವುದಕ್ಕೆ ಎಂಎಲ್‌ಸಿ ಸಿದ್ದರಾಜು ಸಹ ಸಿದ್ಧರಿರಲಿಲ್ಲ.

ಹೆಚ್ಚೆಂದರೆ ಬನ್ನೂರಿನ ಚಿಕ್ಕವಾದನಾಯ್ಕ, ಎಚ್.ಡಿ.ಕೋಟೆಯ ಬೀಚನಹಳ್ಳಿಯ ಚಿಕ್ಕಣ್ಣರ ಲೆವೆಲ್ಲಿಗೆ ಅಪ್ಪಣ್ಣ ಬರಬಹುದೇ ಹೊರತು, ಜೆಡಿಎಸ್‌ನ ಚಿಕ್ಕಮಾದು ಅಥವಾ ಸಿದ್ದರಾಜು ಸಾಲಿಗೆ ನಿಲ್ಲಬಲ್ಲವನು ಅಲ್ಲವೇ ಅಲ್ಲ. ಹುಣಸೂರು ಚಿಕ್ಕಮಾದುವನ್ನು ಸೆಳೆದು ತರುವ ಶ್ರೀರಾಮುಲು ಪ್ರಯತ್ನಕ್ಕೂ ಸೊಪ್ಪು ಬೀಳಲಿಲ್ಲ.

ರಿಯಲ್ ಎಸ್ಟೇಟ್‌ನಿಂದ ಸಾಕಷ್ಟು ಹಣ ಸಂಪಾದಿಸಿದ್ದ ಅಪ್ಪಣ್ಣ ಎಂದೂ ಮಾಸ್ ಲೀಡರ್ ಆಗಿರಲಿಲ್ಲ. ಈತನ ರಸಿಕತೆಗಳ ಬಗೆಗೆ, ಕೇರಳದ ಮೂಲದ ಕನೆಕ್ಷನ್‌ಗಳ ಬಗ್ಗೆ ಪುಕಾರುಗಳಿದ್ದರೂ ಅದರ ಬಗ್ಗೆ ಆತನ ಆಪ್ತ ವಲಯದಾಚೆ ಖಚಿತ ವರ್ತಮಾನಗಳಿಲ್ಲ. ಇಂತಹ ವ್ಯಕ್ತಿಯು ಸಿದ್ದರಾಮಯ್ಯರನ್ನು ಬಿಟ್ಟು ತೊಲಗಿದ್ದೇನೋ ಒಳ್ಳೆಯದಾಯಿತು ಎನ್ನಬಹುದಾದರೂ, ಇಷ್ಟು ದಿನ ಸಿದ್ದು ಇಂಥವನನ್ನು ಜೊತೆಗಿಟ್ಟುಕೊಂಡಿದ್ದು ಹೇಗೆ ಎಂಬ ಪ್ರಶ್ನೆಯನ್ನಂತೂ ಕೇಳಲೇಬೇಕು. ಏನೇ ಇದ್ದರೂ, ಸಕಲ ದುಷ್ಟತನಗಳಿಗೆ ಪ್ರತೀಕವೆಂಬಂತೆ ಮೇಲೇರುತ್ತಿರುವ ಬಿಜೆಪಿಗೆ ಅತ್ಯಂತ ಫಿಟ್ ಆದ ಅಪ್ಪಣ್ಣ ಜಸ್ಟ್ ಮಿಸ್ ಆದದ್ದು ಮಾತ್ರ ಸೋಜುಗದ ಸಂಗತಿ.

ಈಸ್ಟ್-ವೆಸ್ಟ್ ವಿದ್ಯಾರ್ಥಿ ಸಂಜಯ್ ಹತ್ಯೆ ಬೇಟೆಗೆ ನಿಂತರು ವಿಶ್ವಾ-ಗೋರಿಲ್ಲಾ



ಸಂಜಯ್

ದಿವಂಗತ ಸೋಮಣ್ಣನನ್ನು ಸೋಲಿಸಿ ನೆಲಕಚ್ಚಿಸಿದರೂ ಆತನ ಶನಿ ಸಂತತಿಯಿಂದ ವಿಜಯನಗರಕ್ಕೆ ಮುಕ್ತಿ ಸಿಕ್ಕಿಲ್ಲ ಎಂಬುದಕ್ಕೆ ತಾಜಾ ಉದಾಹರಣೆಯೆಂಬಂತೆ ಈಸ್ಟ್-ವೆಸ್ಟ್ ಕಾಲೇಜು ವಿದ್ಯಾರ್ಥಿ ಸಂಜಯ್‌ಕುಮಾರ್ ಕೊಲೆಯಾಗಿದ್ದಾನೆ.

ಕೊಂದದ್ದು ಹತ ಗೋವಿಂದನ ಶಿಷ್ಯ ತಿಮ್ಮೇನಹಳ್ಳಿ ವಿಶ್ವನ ಗ್ಯಾಂಗು. ಆಗಸ್ಟ್ 15ರ ಬೆಳ್ಳಂಬೆಳಗ್ಗೆ ಎಂ.ಸಿ.ಲೇಔಟಿನ ಆತನ ಮನೆಯಿಂದಲೇ ಸಂಜಯ್‌ನನ್ನು ಎಳೆದೊಯ್ದ ತಿಮ್ಮೇನಹಳ್ಳಿ ವಿಶ್ವ, ಗೋರಿಲ್ಲಾ ಶ್ರೀಧರ ಮತ್ತು ಕಯ್ಯಾ ದಾರಿಯುದ್ದಕ್ಕೂ ಚಿತ್ರಹಿಂಸೆ ಕೊಟ್ಟಿದ್ದಾರೆ. ಪೀಣ್ಯಾ-ದಾಸರಹಳ್ಳಿ ಮಧ್ಯದ ನಿರ್ಮಾಣ ಹಂತದ ಕಟ್ಟಡವೊಂದರ ಎರಡನೇ ಮಹಡಿಗೆ ಸಂಜಯ್‌ನನ್ನು ಕರೆತಂದಿದ್ದೇ ಮೊದಲು ಗಾಂಜಾ ಸೇದಿದ್ದಾರೆ; ಬೆಳಗ್ಗೆಯಿಂದ ಸಂಜೆಯ ತನಕ ಆತನಿಗೆ ಯಾವ ಪರಿ ಹಿಂಸೆ ಕೊಟ್ಟಿದ್ದಾರೆಂದರೆ, ಗೋಡೆಗೆ ಜಜ್ಜಿದ ಏಟಿಗೆ ಸಂಜಯ್‌ನ ತಲೆಯೇ ಸೀಳಿ ಹೋಗಿತ್ತು, ಕೈಕಾಲಿನ ಮೂಳೆ ಮುರಿದು ದೇಹದ ಎಲ್ಲೆಂದರಲ್ಲಿ ಇರಿತದ ಗಾಯಗಳಾಗಿದ್ದವು. ಪಾದದ ಹೆಬ್ಬೆಟ್ಟಿನ ಉಗುರನ್ನು ಕಿತ್ತು ತೆಗೆಯಲಾಗಿತ್ತು.



ತಿಮ್ಮೇನಹಳ್ಳಿ ವಿಶ್ವ

ಸಂಜೆಯಾಗುತ್ತಿದ್ದಂತೆ ಅರೆ ಜೀವವಾಗಿದ್ದ ಆತನನ್ನು ಎರಡನೇ ಮಹಡಿಯಿಂದ ಎಸೆದರು. ಆನಂತರ ತಾವೇ ಒಯ್ದು ಪೀಣ್ಯದ ಆಸ್ಪತ್ರೆಯೊಂದಕ್ಕೆ ಸೇರಿಸಿದ ಗೋರಿಲ್ಲಾ-ವಿಶ್ವ ಸಂಜಯನ ಅಣ್ಣನಿಗೆ ಫೋನ್ ಮಾಡಿ ಸುದ್ದಿ ಮುಟ್ಟಿಸಿ ನಾಪತ್ತೆಯಾದರು. ಅಣ್ಣ ಹೋಗಿ ನೋಡುವ ಹೊತ್ತಿಗೆ ಸಂಜಯ ಮುಕ್ಕಾಲು ಪಾಲು ಹೆಣವಾಗಿದ್ದ. ಮರುದಿನ ಬೆಳಗ್ಗೆ ಆತನನ್ನು ಚಂದ್ರಾಲೇಔಟಿನ ಗುರುಶ್ರೀ ಆಸ್ಪತ್ರೆಗೆ ತಂದರೆ ಅಲ್ಲಿನ ಡಾಕ್ಟರುಗಳು ಕೈಚೆಲ್ಲಿ ನಿಂತುಬಿಟ್ಟರು. ಶೇ0.4ರಷ್ಟು ಜೀವ ಇತ್ತು ಎಂಬುದು ಬಿಟ್ಟರೆ ಸಂಜಯ್ 99 ಪರ್ಸೆಂಟ್ ಸತ್ತೇ ಹೋಗಿದ್ದ. ಅಲ್ಲಿಂದ ಆದಿಚುಂಚನಗಿರಿ ಬಿಜಿಎಸ್ ಆಸ್ಪತ್ರೆಗೆ ಕೊಂಡೊಯ್ದರಾದರೂ ಮಧ್ಯಾಹ್ನದ ಹೊತ್ತಿಗೆ ಸಂಜಯ್ ಹೆಣವಾಗಿದ್ದ.

ಒಮ್ಮೆಗೇ ಕೊಲ್ಲುವ ಬದಲು ದಿನವಿಡೀ ಚಿತ್ರಹಿಂಸೆ ಕೊಟ್ಟು, ಗಾಂಜಾ ಸೇದಿಸಿ, ಇಂಚಿಂಚಾಗಿ ಕೊಂದು, ಎರಡನೇ ಮಹಡಿಯಿಂದ ದಬ್ಬಿ ನಂತರ ತಾವೇ ಆಸ್ಪತ್ರೆಗೊಯ್ದು ಹಾಕಿದ ಗೋರಿಲ್ಲಾ-ವಿಶ್ವರ ಪೈಶಾಚಿಕ ಮನಸ್ಥಿತಿ ಮಾತ್ರ ಭಯಾನಕ!

ಸಂಜಯ್‌ನನ್ನು ಅರೆಜೀವ ಮಾಡಿದ್ದಾರೆಂಬ ಸುದ್ದಿ ಅದ್ಯಾವ ವೇಗದಲ್ಲಿ ವಿಜಯನಗರದುದ್ದಕ್ಕೂ ವ್ಯಾಪಿಸಿತೆಂದರೆ ಕೇವಲ ಅರ್ಧಗಂಟೆಯಲ್ಲೇ ಗುರುಶ್ರೀ ನರ್ಸಿಂಗ್ ಹೋಮಿನ ಮುಂದೆ ಸಾವಿರಕ್ಕೂ ಹೆಚ್ಚು ಪಡ್ಡೆ ಹುಡುಗರಿದ್ದರು. ರೊಚ್ಚಿಗೆದ್ದ ಸಂಜಯನ ಸಹಚರರು ಚೋಳೂರು ಪಾಳ್ಯದ ಕಂಡಕಂಡ ಅಂಗಡಿಗಳ ಮೇಲೆ ದಾಳಿಯಿಟ್ಟರು.


ಅದು ವಿಜಯನಗರದ ಗ್ಯಾಂಗ್‌ವಾರ್. ಸದ್ಯಕ್ಕದು ತಣಿಯುವ ಲಕ್ಷಣಗಳಿಲ್ಲ. ಮೊದಲು ಅರುಣಾ, ನಂತರ ತಮ್ಮಯ್ಯ, ಆನಂತರ ತಿಮ್ಮೇನಹಳ್ಳಿ ಸೂರಿ, ತದನಂತರ ನಾಯಿ ಗೋವಿಂದ, ಆಮೇಲೆ ಮೆಂಟ್ಲು ಪ್ರಕಾಶ, ಅದಾದನಂತರ ಕರಿ ನರಸಿಂಹ; ಹೀಗೆ ಒಬ್ಬೊಬ್ಬರಾಗಿ ಕೊಲೆಯಾಗುತ್ತಲೇ ಬಂದದ್ದು ಈಗ ಸಂಜಯನಂಥ ಇನ್ನೂ ಮೀಸೆ ಮೊಳೆಯದ ಕಾಲೇಜು ವಿದ್ಯಾರ್ಥಿಯ ಹತ್ಯೆಯವರೆಗೆ ಬಂದುನಿಂತಿದೆ.

ತಿಮ್ಮೇನಹಳ್ಳಿ ಗೋವಿಂದನ ಹತ್ಯೆಯ ನಂತರ ಆತನ ಗ್ಯಾಂಗ್‌ಗೆ ಲೀಡರ್ ಆದವನು ತಿಮ್ಮೇನಹಳ್ಳಿ ವಿಶ್ವ. ಇವತ್ತಲ್ಲ, ನಾಳೆ ಗೋವಿಂದನ ದುಷ್ಮನ್ ಮಾರೇನಹಳ್ಳಿ ಜಗ್ಗನನ್ನು ಮುಗಿಸೇ ತೀರುತ್ತೇನೆಂದು ರೌಂಡಿಂಗ್ ಶುರುಹಚ್ಚಿಕೊಂಡ. ಯಾರೋ ಮಾರ್ವಾಡಿಯಿಂದ ಸುಪಾರಿ ಪಡೆದು ತಮಿಳುನಾಡಿಗೆ ಹೋಗಿ ಕೊಲೆ ಮಾಡಿ ವರ್ಷಗಟ್ಟಲೇ ಕೊಯಮತ್ತೂರು ಜೈಲಿನಲ್ಲಿದ್ದ. ಗೋವಿಂದನ ಕೊಲೆಯಾಗಿದ್ದೇ ತಡ ಆತನ ಅಳಿದುಳಿದ ಶಿಷ್ಯರೆಲ್ಲ ಸೇರಿ ವಿಶ್ವನಿಗೆ ಪಟ್ಟಕಟ್ಟಿದರು. ಗೋರಿಲ್ಲಾ, ಕಯ್ಯಾ, ಜಗ್ಗಿ ಮುಂತಾದವರೆಲ್ಲ ಆತನ ಬೆನ್ನಿಗೆ ನಿಂತರು.

ಹಾಗಂತ ಮಾರೇನಹಳ್ಳಿ ಜಗ್ಗ ಸುಲಭಕ್ಕೆ ಸಿಕ್ಕು ಬಿಡುತ್ತಾನಾ? ವಿಜಯನಗರದ ವೀರಪುತ್ರ ಸೋಮಣ್ಣನೇ ಬೆನ್ನಿಗೆ ನಿಂತಿರುವಾಗ ಜಗ್ಗನನ್ನು ಯಾರು ತಾನೇ ಮುಟ್ಟಲು ಸಾಧ್ಯ?

ಇಷ್ಟಾಗ್ಯೂ ಜಗ್ಗನನ್ನ ಬಿಡಲ್ಲ ಎಂದುಕೊಂಡೇ ಓಡಾಡಿದ ವಿಶ್ವನ ತಂಡದಲ್ಲೇ ಒಡಕುಂಟಾಗಿತ್ತು. ಆತನಕ ವಿಶ್ವನ ಬಲಗೈ ಬಂಟನಂತೆ ಪೋಜು ಕೊಡುತ್ತಿದ್ದ ಈಸ್ಟ್-ವೆಸ್ಟ್ ವಿದ್ಯಾರ್ಥಿ ಸಂಜಯ್ ಅಲಿಯಾಸ್ ಚೈನಾ, ಆತನ ಅಣ್ಣ ಕಿರಣ ಕುಮಾರ ಉರ್ಫ್ ದೊಡ್ಡ ಚೈನಾ (ಈತನೂ ಈಸ್ಟ್-ವೆಸ್ಟ್ ವಿದ್ಯಾರ್ಥಿ), ಚೋಳೂರು ಪಾಳ್ಯದ ಕಡ್ಡಿಸೀನ, ಪದ್ದಿ ಮುಂತಾದವರೆಲ್ಲ ಸೇರಿಕೊಂಡು ವಿಶ್ವನ ವಿರುದ್ಧ ಬಂಡೆದ್ದು ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡರು. ಇದಕ್ಕೆ ಕುಮ್ಮಕ್ಕು ಕೊಟ್ಟವನು ವಿಜಯನಗರದ ಕೇಡಿ ಕೌನ್ಸಿಲರ್ ಹೆಚ್. ರವೀಂದ್ರ!

ಕುಡಿದ ಮತ್ತಿನಲ್ಲಿ ವಿಶ್ವ ಅದೊಮ್ಮೆ ಸಂಜಯನನ್ನು ಹಿಡಿದು ಬಡಿದನಂತೆ. ಪೆಟ್ಟು ತಿಂದ ಸಂಜಯ್ ಇದನ್ನೊಯ್ದು ಕೌನ್ಸಿಲರ್ ರವೀಂದ್ರನಿಗೆ ಹೇಳಿದನಂತೆ. ಅವನಿಗೇನೋ ನೀನು ಸಲಾಮು ಹೊಡೆಯೋದು? ನಿನ್ನ ಕೈಲಿ ತಾಕತ್ತಿಲ್ವಾ? ನೀನೂ ಲಡತ್ ಮಾಡು, ಅದೇನೇ ಬಂದ್ರೂ ನಾನು ನೋಡ್ಕೋತೀನಿ ಎಂದದ್ದೇ ರವೀಂದ್ರ ಎತ್ತಿಕಟ್ಟಿದ್ದಾನೆ. ಅಷ್ಟಕ್ಕೇ ಸಂಜಯ್ ತಲೆತಿರುಗಿದೆ. ಮನೆ ಎಂ.ಸಿ.ಲೇಔಟಾದರೂ ಸಂಜಯ್ ಹುಟ್ಟಿ ಬೆಳೆದದ್ದು ಚೋಳೂರು ಪಾಳ್ಯದ ಆತನ ಅಜ್ಜಿ ಮನೆಯಲ್ಲಿ. ಕೌನ್ಸಿಲರ್ ರವೀಂದ್ರನ ಮನೆ ಹಿಂದೇ ಇದ್ದ ತನ್ನ ಅಜ್ಜಿಯ ಮನೆಯನ್ನೇ ಅಡ್ಡೆ ಮಾಡಿಕೊಂಡ ಸಂಜಯ್ ಕ್ರಮೇಣ ಕೌನ್ಸಿಲರ್ ರವೀಂದ್ರನ ಮನೆಯಲ್ಲೇ ಸ್ಕೆಚ್ಚು, ಡೀಲು ಶುರು ಹಚ್ಚಿಕೊಂಡ. ಸಿಕ್ಕಸಿಕ್ಕವರನ್ನು ಅಟ್ಟಾಡಿಸಹತ್ತಿದ.



ಕೌನ್ಸಿಲರ್ ರವೀಂದ್ರನಿಗೆ ಹಿಂದಿನಿಂದಲೂ ರೌಡಿಜಮ್ಮಿನ ಕಾಯಿಲೆಯಿದೆ. ಒಂದಲ್ಲ ಎರಡು ಬಾರಿ ರೌಡಿಗಳ ಕೈಯಲ್ಲೇ ಚಚ್ಚಿಸಿಕೊಂಡು ಕೊಲೆಯಾಗಬೇಕಿದ್ದ ರವೀಂದ್ರನಿಗೆ ಇನ್ನೂ ಬುದ್ಧಿ ಬಂದಂತಿಲ್ಲ. ಇಂಥ ಪಾಖಂಡಿಯನ್ನು ನಂಬಿ ಎಡವಟ್ಟು ಮಾಡಿಕೊಂಡವನು ಸಂಜಯ್. ಹೀಗೊಂದು ತಿಂಗಳ ಹಿಂದೆ ತಿಮ್ಮೇನಹಳ್ಳಿ ವಿಶ್ವನ ಮೇಲೆ ಅಟ್ಯಾಕಾಗಿದೆ. ಅದೃಷ್ಟವಶಾತ್ ಬದುಕುಳಿದ ವಿಶ್ವನ ಬೆನ್ನಿಗೆ ಮಚ್ಚೇಟು ಬಿದ್ದಿತ್ತಾದರೂ ವಿಜಯನಗರದ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲಾಗಲಿಲ್ಲ. ಏಕೆಂದರೆ ಒಂದೆರಡು ಕೇಸಿನಲ್ಲಿ ಆತನನ್ನು ವಿಜಯನಗರ ಪೊಲೀಸರು ಹುಡುಕುತ್ತಿದ್ದರು.


ಯಾವತ್ತು ಅಟ್ಯಾಕಾದ ಸುದ್ದಿ ಬಂತೋ ವಿಜಯನಗರ ಇನ್ಸ್‌ಪೆಕ್ಟರ್ ಜಗನ್ನಾಥ್ ರೈ ವಿಶ್ವನನ್ನು ಹಿಡಿದು ಜೈಲಿಗೆ ಹಾಕಿದ್ದಾರೆ. ಒಂದೇ ವಾರಕ್ಕೆ ಜೈಲಿಂದ ಹೊರಬಿದ್ದ ವಿಶ್ವನಿಗೆ ತನ್ನ ಮೇಲೆ ಅಟ್ಯಾಕ್ ಮಾಡಿಸಿದ್ದೇ ಸಂಜಯ್ ಎಂಬ ಮಾಹಿತಿ ಸಿಕ್ಕಿದೆ. ಕೌನ್ಸಿಲರ್ ರವೀಂದ್ರನ ಕುಮ್ಮಕ್ಕಿನಿಂದಲೇ ಸಂಜಯ್ ಇಷ್ಟೆಲ್ಲಾ ಮಾಡುತ್ತಿದ್ದಾನೆಂದು ನಿರ್ಧರಿಸಿದ್ದೇ ಆಗಸ್ಟ್ 15ರ ಬೆಳಗ್ಗೆ ಸಂಜಯನನ್ನು ಅಪಹರಿಸಿದ್ದಾನೆ. ಪಾತಕಿಗಳಾದ ಗೋರಿಲ್ಲಾ ಮತ್ತು ಕಯ್ಯಾ ಕೂಡ ಕೈಜೋಡಿಸಿದ್ದಾರೆ.

ಹೇಗಿದ್ದರೂ ಸಂಜಯ್‌ನ ಕೊಲೆಕೇಸಲ್ಲಿ ಜೈಲಿಗೆ ಹೋಗಲೇಬೇಕು. ಹೋಗುವ ಮುನ್ನ ಮಾರೇನಹಳ್ಳಿ ಜಗ್ಗನ ಮೇಲೊಂದು ಅಟೆಂಪ್ಟ್ ಮಾಡೇ ಹೋಗ್ತೀನಿ ಎಂದು ಡೈಲಾಗನ್ನೂ ಹೊಡೆದಿದ್ದಾನೆ. ಇತ್ತ ಇನ್ಸ್‌ಪೆಕ್ಟರ್ ಜಗನ್ನಾಥ್ ರೈ ವಿಶ್ವ ಏನಾದರೂ ಸಿಕ್ಕನೆಂದರೆ ಆತನ ಎನ್‌ಕೌಂಟರ್ ಗ್ಯಾರಂಟಿ ಎಂದು ಅರ್ಭಟಿಸತೊಡಗಿದ್ದಾರೆ. ಮತ್ತೊಂದೆಡೆ ಕೊಲೆಯಾದ ಕಾಲೇಜು ವಿದ್ಯಾರ್ಥಿ ಸಂಜಯನ ಹೊಣೆ ಹೊತ್ತು ಪೋಜು ಕೊಟ್ಟ ಕೌನ್ಸಿಲರ್ ರವೀಂದ್ರನ ಕೇಡಿ ಬುದ್ಧಿಗೆ ಜನ ಶಾಪ ಹಾಕುತ್ತಿದ್ದಾರೆ. ಇನ್ನೊಂದೆಡೆ ಸೋಮಣ್ಣನ ಮನೆ ತುಂಬ ಇಂಥ ಕಿರಾತಕರೇ ಇಟ್ಟಾಡುತ್ತಿದ್ದಾರೆ.

ಸೋಮಣ್ಣ ನೆಲಕಚ್ಚಿದರೇನಂತೆ, ಆತನ ಶನಿಸಂತತಿ ನಾಶವಾಗುವುದಿಲ್ಲ, ಅದು ವಿಜಯನಗರದ ದುರಂತ...

• ರಾ.ಸೋ

ಭೂಗಳ್ಳ ಬಚ್ಚೇಗೌಡನ ಗೂಂಡಾ ಸಾಮ್ರಾಜ್ಯ



ಬೆಂಗಳೂರಿನಿಂದ ಕೇವಲ ಇಪ್ಪತ್ತೈದು ಕಿ.ಮಿ. ದೂರದಲ್ಲಿರುವ ಹೊಸಕೋಟೆ ತಾಲ್ಲೂಕು ಪಕ್ಕಾ ಗೂಂಡಾ ಸಾಮ್ರಾಜ್ಯವಾಗಿ ಬದಲಾಗಿದೆ. ಇದರ ಡಾನ್‌ನಂತೆ ವರ್ತಿಸುತ್ತಿರುವ ಕಾರ್ಮಿಕ ಸಚಿವ ಬಚ್ಚೇಗೌಡ ಪಾಳೇಗಾರನ ಗೆಟಪ್ಪಿನಲ್ಲಿ ಮೆರೆದಾಡುತ್ತಾ ತನ್ನ ವಿರುದ್ಧ ದನಿಯೇಳದಂತೆ ಗೂಂಡಾಗಿರಿ ನಡೆಸುತ್ತಾ ಮುಂದುವರೆಯುತ್ತಿದ್ದಾನೆ. ಇದರ ಪರಿಣಾಮವೆಂಬಂತೆ ಹೊಸಕೋಟೆ ತಾಲ್ಲೂಕು ಪುರಾತನ ಪಾಳೇಗಾರಿಕೆ ಹಾಗೂ ಆಂಧ್ರ, ರಾಯಲಸೀಮಾದ ಅಂಧಾದರ್ಬಾರ್‌ಗಳನ್ನು ಮೀರಿಸುವಂತೆ ಕುಲಗೆಟ್ಟು ಹೋಗಿದೆ.

ಈ ಬಚ್ಚೇಗೌಡ ಎಂಥಾ ಸರ್ವಾಧಿಕಾರಿ ಹಾಗೂ ಹಿಟ್ಲರ್‌ನಂಥ ವಿಕೃತ ಮನಸ್ಸು ಹೊಂದಿರುವವನೆಂಬುದಕ್ಕೆ ಸಾಕ್ಷಿಯೆಂಬಂತೆ ರೀಸೆಂಟಾಗೊಂದು ಘಟನೆ ನಡೆದಿದೆ. ಭರತ್ ಗೌಡನೆಂಬ ಉದ್ಯಮಿಯ ಕಾರು ತಾನಿದ್ದ ವಾಹನವನ್ನು ಹಿಂದಿಕ್ಕಿತೆಂಬ ಕ್ಷುಲ್ಲಕ ಕಾರಣಕ್ಕಾಗಿ ಪುಡಿ ರೌಡಿಗಿಂತ ಕಡೆಯಾಗಿ ವರ್ತಿಸಿದ್ದಾನೆ. ಸಾರ್ವತ್ರಿಕವಾಗಿ ಉಗಿಸಿಕೊಂಡದ್ದೂ ಆಗಿದೆ. ಇದರ ಬಗ್ಗೆ ವಿಸ್ತೃತವಾಗಿ ಬರೆಯುವ ಅವಶ್ಯಕತೆಯಿಲ್ಲವಾದರೂ ಈ ಘಟನೆ ಬಚ್ಚೇಗೌಡನ ಇಡೀ ವ್ಯಕ್ತಿತ್ವವನ್ನು ಪ್ರತಿನಿಧಿಸುವಂತಿದೆ. ತನ್ನ ವಾಹನವನ್ನು ಬೇರೊಬ್ಬರು ಓವರ್‌ಟೇಕ್ ಮಾಡುವುದನ್ನೂ ಸಹಿಸಿಕೊಳ್ಳದೆ ಗೂಂಡಾಗಿರಿಗಿಳಿಯುತ್ತಾನೆಂದರೆ, ಬಚ್ಚೇಗೌಡ ಅದಿನ್ನೆಂಥಾ ಸರ್ವಾಧಿಕಾರಿ ಮನಸ್ಥಿತಿ ಹೊಂದಿಬಹುದೋ ಯೋಚಿಸಿ.

ಮೊನ್ನೆಯ ಘಟನೆ ಕಂಡ ಮಂದಿ ಬಚ್ಚೇಗೌಡನನ್ನ ಕೇವಲ ಗೂಂಡಾ ಅಂದುಕೊಂಡಿದ್ದರೆ ಅದು ತಪ್ಪು ತಿಳಿವಳಿಕೆ. ಯಾಕೆಂದರೆ, ಈತ ಭಯಂಕರ ಭೂಗಳ್ಳನೂ ಹೌದು. ಗೂಂಡಾಪಡೆಗಳನ್ನು ತಾಲ್ಲೂಕಿನಾದ್ಯಂತ ಸಾಕಿಕೊಂಡು ತನ್ನ ವಿರುದ್ಧದ ದನಿ ಅಡಗಿಸುತ್ತಾ, ಕೆಲ ಭ್ರಷ್ಟ ಅಧಿಕಾರಿಗಳನ್ನು ಪಳಗಿಸಿಕೊಂಡು ಸರ್ಕಾರಿ ಭೂಮಿ ಕೊಳ್ಳೆ ಹೊಡೆಯುವುದು ಬಚ್ಚೇಗೌಡನ ಹುಟ್ಟು ಜಾಯಮಾನ.

ಇನ್ನೂ ಭೀಕರ ಅಂಶವೆಂದರೆ, ಬಚ್ಚೇಗೌಡನ ವಿರುದ್ಧ ದನಿಯೆತ್ತಿದವರ ಮೇಲೆ ಒಂದೋ ಹಲ್ಲೆಗಳು ನಡೆಯುತ್ತವೆ ಅಥವಾ ಕೊಲೆಯೇ ನಡೆದುಹೋಗುತ್ತದೆ. ಇದಕ್ಕೆ ಪೂರಕವೆಂಬಂತೆ ಹೊಸಕೋಟೆ ತಾಲ್ಲೂಕಿನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಅಖಂಡ ನೂರಾ ಒಂಭತ್ತು ಕೊಲೆಗಳು ನಡೆದಿವೆ! ಇವುಗಳಲ್ಲಿ ಆಸ್ತಿ ವಿವಾದ, ಹಣ-ಹೆಣ್ಣಿನ ವಿಚಾರಕ್ಕೆ ಸಂಬಂಧಿಸಿದ ಕೇಸುಗಳು ಕೆಲವಿದ್ದರೆ, ಮುಕ್ಕಾಲು ಪಾಲು ಕೊಲೆಗಳು ರಾಜಕೀಯ ಪ್ರೇರಿತವಾಗಿ ನಡೆದಿವೆ!

ಇಂಥ ಭಯಾನಕ ವ್ಯಕ್ತಿತ್ವ ಹೊಂದಿರುವ ಬಚ್ಚೇಗೌಡ ಕೋಡಿಹಳ್ಳಿ ಸೊಣ್ಣಪ್ಪ, ಶ್ರೀನಿವಾಸ ರೆಡ್ಡಿ, ಡೈರಿ ಮಂಜ, ಶೇಖರ್ ಗೌಡ ಮುಂತಾದವರನ್ನೊಳಗೊಂಡ ಗೂಂಡಾ ಪಡೆಯೊಂದನ್ನು ರಚಿಸಿಕೊಂಡಿದ್ದಾನೆ. ಇದರೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯ್ತಿ ಸಿಇಓ ಚಿತ್ತರಂಜನ್ ಹಾಗೂ ಹೊಸಪೇಟೆ ತಹಶೀಲ್ದಾರ್ ಭಂಡಾರಿಯಂಥ ಭ್ರಷ್ಟ ಅಧಿಕಾರಿಗಳ ಗ್ಯಾಂಗೂ ಬಚ್ಚೇಗೌಡನ ಸೇವೆಯಲ್ಲಿ ಸಕ್ರಿಯವಾಗಿದೆ.

ಇನ್ನು ಬಚ್ಚೇಗೌಡನ ಭೂಗಳ್ಳತನದ ವಿಚಾರಕ್ಕೆ ಬಂದರೆ, ಕಂಗಾಲಾಗುವಂಥ ದಂಡಿ ದಂಡಿ ವಿವರಗಳು ಎದುರುಗೊಳ್ಳುತ್ತವೆ. ಈತನ ಭೂಹಸಿವಿಗೆ ಅತಿಹೆಚ್ಚು ಬಲಿಯಾದದ್ದು ಸರ್ಕಾರಿ ಗೋಮಾಳಗಳು. ಭ್ರಷ್ಟ ಅಧಿಕಾರಿಗಳ ಮೂಲಕ ಗೋಮಾಳಗಳನ್ನು ಬಚ್ಚೇಗೌಡ ತನ್ನ ನೆಂಟರಿಷ್ಟರು, ಚೇಲಾಗಳ ಹೆಸರಿಗೆ ಮಂಜೂರು ಮಾಡಿಸುತ್ತಾನೆ. ಆನಂತರ ಕನ್ವರ್ಷನ್ ಮಾಡಿ ಮಾರುತ್ತಾನೆ. ನಂತರ ಕೋಟಿ-ಕೋಟಿ ಹಣ ಹೊಡೆದುಕೊಳ್ಳುತ್ತಾನೆ. ಇದು ಬಚ್ಚೇಗೌಡನ ಭೂಗಳವಿನ ಕಾರ್ಯವೈಖರಿ.

ರಾಜಕೀಯವನ್ನು ಸಪೋರ್ಟಿಗೆಂಬಂತೆ ಇಟ್ಟುಕೊಂಡು ಭೂಗಳವನ್ನೇ ಫುಲ್‌ಟೈಂ ನೆಚ್ಚಿಕೊಂಡಿರುವವನು ಬಚ್ಚೇಗೌಡ. ಈತ ತನ್ನ ಚೇಲಾ ಡೈರಿ ಮಂಜನ ಅತ್ತಿಗೆ ಹೆಸರಲ್ಲಿ ಆರು ಎಕರೆಯನ್ನು ಗೊಟ್ಟಿಪುರ ಸರ್ವೆ ನಂ. 50 ರಲ್ಲಿ ಮಂಜೂರು ಮಾಡಿಸಿದ್ದಾನೆ. ಇನ್ನುಳಿದಂತೆ ದಾಸರಹಳ್ಳಿಯಲ್ಲಿ ನಾಗರಾಜ್ ಹೆಸರಿಗೆ 3 ಎಕರೆ, ಗೋವಿಂದಪ್ಪನಿಗೆ ಮೂರು ಎಕರೆ, ಮೀನಾ, ವೆಂಕಟೇಶ್, ವೆಂಕಟರಮಣಪ್ಪ ಮುಂತಾದವರ ಹೆಸರಿಗೂ ಮನಬಂದಂತೆ ಸರ್ಕಾರಿ ಭೂಮಿ ಮಂಜೂರು ಮಾಡಲಾಗಿದೆ.

ಇನ್ನು ಪಿಳ್ಳಗುಂಪೆಯಲ್ಲಿ ನಲವತ್ತು ಎಕರೆ ಗೋಮಾಳ ಹಾಗೂ ಮಂಡ್ಯೂರಿನಲ್ಲಿ ಅರವತ್ತು ಎಕರೆ ಗೋಮಾಳವನ್ನು ಬಚ್ಚೇಗೌಡ ಬಾಯಿಗಿಟ್ಟುಕೊಂಡಾಗಿದೆ. ಇನ್ನುಳಿದಂತೆ ಚಿಕ್ಕ ಹುಲ್ಲೂರಿನ ನೂರೈವತ್ತು ಎಕರೆ, ತೋರನಹಳ್ಳಿಯ ಇಪ್ಪತ್ತೆಂಟು ಎಕರೆ ಗೋಮಾಳವನ್ನು ತಿಂದು ಅರಗಿಸಿಕೊಂಡಿರುವ ಬಚ್ಚೇಗೌಡ, ದೇವನಹಳ್ಳಿ ತಾಲ್ಲೂಕು ಭಿನ್ನಮಂಗಲದಲ್ಲಿ 750 ಎಕರೆ ಗೋಮಾಳ ನುಂಗಲು ಹವಣಿ ಸುತ್ತಿದ್ದಾನೆ. ದೇವನಹಳ್ಳಿಯ ನಾಗೇಶ ಎಂಬ ಬಿಜೆಪಿ ಪುಢಾರಿಯನ್ನು ಮುಂದಿಟ್ಟುಕೊಂಡು ಈ ಕಳ್ಳ ಕಾರ್ಯಾಚರಣೆಗೆ ಬಚ್ಚೇಗೌಡ ಚಾಲನೆ ನೀಡಿದ್ದಾನೆ.

ಬಚ್ಚೇಗೌಡ ಇದುವರೆಗೆ ನುಂಗಿರುವ ಸರ್ಕಾರಿ ಜಮೀನುಗಳಲ್ಲಿ ದೊಡ್ಡ ನಲ್ಲೂರಹಳ್ಳಿಯ ಸರ್ವೆ ನಂ. 10ರಲ್ಲಿರುವ 167 ಎಕರೆ ಗೋಮಾಳ ಪ್ರಮುಖವಾದುದು. ಇದನ್ನು ಸಹ ಚೇಲಾಗಳ ಹೆಸರಿಗೆ ಮಂಜೂರು ಮಾಡಿಸಿದ ಗೌಡ ಜಾಕೋಬ್ ಎಂಬಾತನಿಗೆ ಮಾರಿದ. ಈ ಜಾಕೋಬ್ ಇಡೀ ರಾಜ್ಯವನ್ನೇ ಕಂಗೆಡಿಸಿದ್ದ ಕಿಡ್ನಿ ದಂಧೆಯ ಪ್ರಮುಖ ಆರೋಪಿ!

ಈ ರೀತಿ ಸರ್ಕಾರಿ ಜಮೀನನ್ನು ಮಸಾಲದೋಸೆಯಂತೆ ಬಾಯಿಗಿಟ್ಟು ಅರಗಿಸಿಕೊಂಡಿರುವ ಬಚ್ಚೇಗೌಡ ತನ್ನ ಸ್ವಂತ ಗ್ರಾಮ ಬೆಂಡಗಾನಹಳ್ಳಿಯನ್ನು ಸಂಪೂರ್ಣ ಹಾಳುಗೆಡವಿದ್ದಾನೆ. ಇಲ್ಲಿ ಇಂದಿಗೂ ಯಾವ ಪರಿ ಸರ್ವಾಧಿಕಾರ ಜಾರಿಯಲ್ಲಿದೆಯೆಂದರೆ, ಇಲ್ಲಿ ಎಲೆಕ್ಷನ್ನೂ ಇಲ್ಲ ವಿರೋಧ ಪಕ್ಷವೂ ಇಲ್ಲ! ಬಚ್ಚೇಗೌಡನ ನೆಂಟರಿಷ್ಟರು, ಚೇಲಾಗಳದ್ದೇ ಸಾಮ್ರಾಜ್ಯ. ಈ ದುಷ್ಟತನದ ಬಗ್ಗೆ ಯಾರಾದರೂ ತಿರುಗಿಬಿದ್ದರೆ ಅವರ ತಲೆ ಉರುಳುವುದು ಗ್ಯಾರಂಟಿ.

ಇದನ್ನೆಲ್ಲ ಗಮನಿಸಿದರೆ ಈ ಕಾಲದಲ್ಲೂ ಹೀಗೆಲ್ಲಾ ನಡೆಯಬಹುದೇ ಅಂತೊಂದು ಆತಂಕಪೂರಿತ ಆಶ್ಚರ್ಯ ಹುಟ್ಟಿಕೊಳ್ಳುತ್ತದೆ. ಕಳ್ಳ ಬಚ್ಚೇಗೌಡ ಮಾತ್ರ ತನಗಾಗದವರನ್ನು ಸಂಹರಿಸುತ್ತಾ ಸರ್ಕಾರಿ ಭೂಮಿ ನುಂಗುತ್ತಾ ಹಾಯಾಗಿದ್ದಾನೆ. ಇಂಥಾ ಭೂಗಳ್ಳನಿಗೆ ಯಡಿಯೂರಪ್ಪ ಕಾರ್ಮಿಕ ಖಾತೆ ಕೊಟ್ಟು ಸಲಹುತ್ತಿರುವುದು ವಿಪರ್ಯಾಸ.

ಬಚ್ಚೇಗೌಡ ಎಗರಾಟಗಳಿಗೊಂದು ಮುಕ್ತಿ ಕಾಣಿಸದಿದ್ದರೆ ಸರ್ಕಾರಿ ಜಾಗ, ಜನರಿಗೆ ಖಂಡಿತವಾಗಿಯೂ ಉಳಿಗಾಲವಿಲ್ಲ.

• ಬಾಗಿಲಗದ್ದೆ

...ಕ್ಷುಕರನ್ನೂ ಬಿಡದೇ ಕಿತ್ತು ತಿಂದವರು

...ಸ್ಟ್ 17 ರ ಮಂಗಳವಾರ ಹತ್ತು ಮಂದಿ!
...ರನೇ ದಿನ ಅಂದರೆ ಆಗಸ್ಟ್ 18 ರ ಬುಧವಾರ ...ರಡು ಮಂದಿ!
...ತ್ತು ಅಂದರೆ ಗುರುವಾರ ಆಗಸ್ಟ್ 19 ರಂದು ...ಲ್ಕು ಮಂದಿ!
...ಲ ಮೂರು ದಿನದ ಅವಧಿಯಲ್ಲಿ ಒಟ್ಟು 16 ...ನ್ನು ಸಾವು ನುಂಗಿ ಹಾಕಿದೆ.

...ವರೆಲ್ಲ ಭಿಕ್ಷುಕರೆಂಬುದು ಎಷ್ಟು ಸತ್ಯವೋ ...ವನ್ನೂ ಸರ್ಕಾರವೇ ಹಿಡಿದು ತಂದು ಕೂಡಿಟ್ಟು ...ಟ್ಟಿತ್ತೆಂಬುದೂ ಅಷ್ಟೇ ಸತ್ಯ. ಅದು ಬೆಗ್ಗರ್ಸ್ ...ನಿ. ಅಂದರೆ ನಿರಾಶ್ರಿತರ ಪರಿಹಾರ ಕೇಂದ್ರ. ...ಯನ್ನು ನಿರ್ಮೂಲನಗೊಳಿಸಲೆಂದು ಕಂಡಕಂಡ ...ನ್ನೆಲ್ಲ ಹಿಡಿದು ತಂದು ಅವರಿಗೆ ಪುನರ್ವಸತಿ ...ವೇ ಸರ್ಕಾರ ನಡೆಸುವ ಈ ನಿರಾಶ್ರಿತರ ಕೇಂದ್ರದಲ್ಲಿ ...ಸತ್ತವರ ಸಂಖ್ಯೆ ಹದಿನಾರಕ್ಕೇರಿದೆ. ಇನ್ನೆರಡು ...ಳಗೆ ಅದು ಇನ್ನೆಷ್ಟಾಗುತ್ತೋ!

ಬೇಡಿ ಬದುಕುತ್ತಿದ್ದವರನ್ನು ಹಿಡಿದು ತಂದು ... ಉದ್ಧಾರ ಮಾಡಹೊರಟ ಬಿಜೆಪಿ ಸರ್ಕಾರದ ... ಬೆಗ್ಗರ್ಸ್ ಕಾಲೋನಿಯ ಕೊಳಕೇ ಸಾಕಷ್ಟು ಪುರಾವೆ ...ದೆ. ಗರುಡ ಪುರಾಣದ ನರಕದ ಪರಿಕಲ್ಪನೆಯನ್ನೇ ...ದಂತೆ ನಾರುವ ಭಿಕ್ಷುಕರ ಕೇಂದ್ರದ ದೃಶ್ಯವಾದರೂ ...

...ದೇ ಮಾತಲ್ಲಿ ಹೇಳಬೇಕೆಂದರೆ ಅದೊಂದು ...ದಿ. ಮಾನಸಿಕ ಅಸ್ವಸ್ಥರಿಗೆಂದೇ ಒಂದು ವಾರ್ಡು, ...ಲರಿಗೆಂದು ಮತ್ತೊಂದು ವಾರ್ಡು, ಮಕ್ಕಳಿಗೆಂದು, ...ದುರಿಗೆಂದು; ಹೀಗೆ ಭಿಕ್ಷುಕರ ವಿವಿಧ ವರ್ಗಗಳಿ... ಹತ್ತಕ್ಕೂ ಹೆಚ್ಚು ವಾರ್ಡುಗಳಿವೆ. ಪ್ರತಿ ವಾರ್ಡಿನಲ್ಲೂ ...ತಿ ನೂರು ಮಂದಿಯನ್ನಿಡಬೇಕು. ಪ್ರತಿನಿತ್ಯ ಅವರಿಗೆ ...ಾಡಿಸಬೇಕು. ಕನಿಷ್ಠ ಎರಡು ದಿನಕ್ಕಾದರೂ ಒಗೆದ ...ಡಬೇಕು. ಪೌಷ್ಟಿಕ ಆಹಾರವಲ್ಲದೇ ಹೋದರೂ ...ದ್ಧವಾದ ಊಟ ಕೊಡಬೇಕು. ದಿನಂಪ್ರತಿ ಅವರ ...ಗ್ಯ ತಪಾಸಣೆ ಮಾಡಬೇಕು. ಅದಕ್ಕೆಂದೇ ಪ್ರತ್ಯೇಕ ...ಜಿದೆ. ಅದಕ್ಕೆ ಡಾಕ್ಟರುಗಳು ನರ್ಸುಗಳು ಎಲ್ಲಾ ...ವನ್ನೂ ಸರ್ಕಾರ ಕಲ್ಪಿಸಿದೆ.

...ರ್ಕಾರ ಇದ್ಯಾವುದನ್ನೂ ಸಾಲ ತಂದಾಗಲಿ, ಹೊಟ್ಟೆ ...ಗಲಿ ತರಬೇಕಿಲ್ಲ. ಪ್ರತಿ ಕಾರ್ಪೋರೇಷನ್ ಪುರಸಭೆ, ...ಿ ಮಟ್ಟದ ನಗರಗಳಲ್ಲೂ ಇದಕ್ಕೆಂದೇ ಪ್ರತ್ಯೇಕ ...ನ್ನು ವಿಧಿಸಲಾಗುತ್ತದೆ. ಅದು ಭಿಕ್ಷುಕರ ಕರ. ... ಯಾವುದೇ ಪುರಸಭೆ, ನಗರಸಭೆ ಪಾಲಿಕೆಗಳಿಗೆ ...ನೂರು ರೂಪಾಯಿ ತೆರಿಗೆ ಕಟ್ಟಿದ್ದರೆಂದರೆ ಅದರಲ್ಲಿ ...ು ರೂಪಾಯಿ ಭಿಕ್ಷುಕರ ಪುನರ್ವಸತಿಗೆ ...ಾಗಬೇಕು. ರಾಜ್ಯಾದ್ಯಂತ ಇಂಥ ಹದಿನಾಲ್ಕು ಭಿಕ್ಷುಕರ ...ಳಿವೆ. ಈ ಪೈಕಿ ಅತೀ ದೊಡ್ಡದು ಮತ್ತು ಅಧಿಕ ...ಟಿನದ್ದು ಬೆಂಗಳೂರಿನ ಬೆಗ್ಗರ್ಸ್ ಕಾಲೋನಿ. ...ೊಂದು ಕಾಲಕ್ಕೆ ಮುನ್ನೂರು ಎಕರೆಗಳಷ್ಟಿದ್ದ ಈ ... ಈಗ ನೂರೈವತ್ತು ಎಕರೆಗೆ ಬಂದು ನಿಂತಿದೆ. ನೆಲಗಳ್ಳರಿಂದಾಗಿ ಇದರ ಅರ್ಧಕ್ಕರ್ಧ ಭೂಮಿ ಶ್ರೀಮಂತರ ಸೊತ್ತಾಗಿದೆ.

ಓಕೆ; ಭಿಕ್ಷುಕರ ಭೂಮಿಯನ್ನೇನೋ ಮಾರಿ ಕೊಂಡಾಯ್ತು, ಕನಿಷ್ಠ ಭಿಕ್ಷುಕರನ್ನಾದರೂ ನೆಟ್ಟಗೆ ನೋಡಿಕೊಳ್ಳ ಬೇಕಲ್ಲವೆ? ಬೆಂಗಳೂರಿನ ಬೆಗ್ಗರ್ಸ್ ಕಾಲೋನಿಗೆ ವರ್ಷವೊಂದಕ್ಕೆ ಕನಿಷ್ಠ ಮೂರೂವರೆ ಕೋಟಿ ರೂಪಾಯಿ ಗಳಷ್ಟನ್ನು ಪಾಲಿಕೆ ಪಾವತಿ ಮಾಡುತ್ತದೆ. ಅದು ಭಿಕ್ಷುಕರ ಕರದಿಂದ ಸಂಗ್ರಹವಾದ ಬಾಬತ್ತು. ನ್ಯಾಯವಾಗಿ ಅದು ಹತ್ತು ಕೋಟಿಯನ್ನೂ ಮೀರಬೇಕಿತ್ತು. ದುರಂತವೆಂದರೆ ಭಿಕ್ಷುಕರ ಸೆಸ್ ಅನ್ನೂ ಪಾಲಿಕೆ ಅಧಿಕಾರಿಗಳು ನುಂಗಿ ಹಾಕುತ್ತಾರೆ! ಅಥವಾ ದುಡ್ಡು ದೋಚುವ ಬೋಗಸ್ ಬಿಲ್ ಕಾಮಗಾರಿಗಳ ಹೆಸರಲ್ಲಿ ಕಬಳಿಸುತ್ತಾರೆ.

ಹಾಗಿದ್ದೂ ವರ್ಷವೊಂದಕ್ಕೆ ಬರುವ ಮೂರೂವರೆ ಕೋಟಿಯಾದರೂ ನೆಟ್ಟಗೆ ಭಿಕ್ಷುಕರ ಉದ್ಧಾರಕ್ಕೆ ಬಳಕೆಯಾಗುತ್ತಾ?

ಈ ಪೈಕಿ ಒಂದು ಭಾಗ ಇಲ್ಲಿನ ಸಿಬ್ಬಂದಿಗಳ ಸಂಬಳಕ್ಕೆ ಬಳಕೆಯಾಗುತ್ತದೆ. ಉಳಿಕೆ ದುಡ್ಡಾದರೂ ಪ್ರಾಮಾಣಿಕವಾಗಿ ಭಿಕ್ಷುಕರ ಪಾಲಾಗಿದ್ದರೆ ಇವತ್ತು ಇಂಥದೊಂದು ದುರಂತ ಸಂಭವಿಸುತ್ತಿರಲಿಲ್ಲ. ತರಕಾರಿಯಲ್ಲಿ ಲೂಟಿ, ಅಕ್ಕಿಯಲ್ಲಿ ಮೋಸ, ಹಾಲು, ಸೋಪು, ರೇಷನ್ನು, ಬಟ್ಟೆ ಫಿನಾಯಿಲ್ಲು, ಔಷಧಿ ಎಲ್ಲದರಲ್ಲೂ ಗೋಲ್‌ಮಾಲ್ ನಡೆಯುತ್ತದೆ. ಇಂಥ ದುರಾಚಾರದ ಫಲವೇ ಈಗ ಭಿಕ್ಷುಕರ ನಿಗೂಢ ಸಾವಿನ ಮೂಲಕ ಸ್ಫೋಟಿಸಿದೆ. ಪ್ರತಿ ವಾರ್ಡಿನಲ್ಲೂ ನೂರು ಮಂದಿ ಭಿಕ್ಷುಕರ ಬದಲಾಗಿ ಇನ್ನೂರೈವತ್ತು ಮಂದಿಯನ್ನು ತುರುಕುತ್ತಾರೆ. ಒಟ್ಟು 900 ಮಂದಿಗಷ್ಟೇ ಇರುವ ಸ್ಥಳಾವಕಾಶದಲ್ಲಿ ಎರಡೂವರೆ ಸಾವಿರ ಮಂದಿಯನ್ನು ತುರುಕಿದರೆ ಏನಾಗುತ್ತದೋ ಈಗ ಅದೇ ಸಂಭವಿಸಿದೆ.

ಇಷ್ಟೊಂದು ಮಂದಿಯನ್ನು ನಿಭಾಯಿಸುವಷ್ಟು ಸಿಬ್ಬಂದಿಗಳೇ ಇಲ್ಲಿಲ್ಲ. ಎರಡೂವರೆ ಸಾವಿರ ಮಂದಿಗೆ ಒಬ್ಬನೇ ಡಾಕ್ಟರ್. ಇಬ್ಬರು ನರ್ಸ್‌ಗಳ ಪೈಕಿ ಒಬ್ಬಳು ಶಾಶ್ವತ ಚಕ್ಕರ್. ಆಸ್ಪತ್ರೆಯಲ್ಲಿರುವ ಔಷಧಿಗಳೂ ಪ್ರಯೋಜನಕ್ಕೆ ಬಾರದವು. ಅಮಾವಾಸ್ಯೆಗೋ ಹುಣ್ಣಿಮೆಗೋ ಒಮ್ಮೆ ಬರುವ ಡಾಕ್ಟರ್. ಔಷಧಿಯಿದ್ದರೆ ಡಾಕ್ಟರ್ ಇಲ್ಲ, ಡಾಕ್ಟರ್ ಬಂದರೆ ನರ್ಸು ಪತ್ತೆಯಿಲ್ಲ; ಇದು ಇಲ್ಲಿನ ಆಸ್ಪತ್ರೆಯ ಪಾಡಾದರೆ, ಭಿಕ್ಷುಕರ ದುರ್ಗತಿಯಂತೂ ಯಾವ ಪಾಪಿಗೂ ಬೇಡ.

ಇಲ್ಲಿನ ನೀರಿನ ತೊಟ್ಟಿಯನ್ನು ತೊಳೆದು ಯಾವ ಕಾಲವಾಗಿದೆಯೊ, ನಲ್ಲಿ ತಿರುವಿದರೆ ಕೆಲವೊಮ್ಮೆ ಅಸಹ್ಯದ ಹುಳುಗಳು ಉದುರುತ್ತವೆ. ನೀರೇ ಕೊಳಕೆಂದ ಮೇಲೆ ಇನ್ನು ಪರಿಸರ ಹೇಗಿರಬೇಡ? ನೆಲ ತೊಳೆದು ಯಾವ ಕಾಲವಾಗಿದೆಯೊ. ಭಿಕ್ಷುಕರ ಮಲ ಮೂತ್ರ, ಚೆಲ್ಲಿದ ಅನ್ನ, ಸಾಂಬಾರು, ತುಳಿದು ತಂದ ಮಣ್ಣು ಮತ್ತು ಬಿದ್ದ ಕಸ ಸೇರಿಯೇ ನೆಲ ಪಾಚಿ ಕಟ್ಟಿದೆ. ಗೋಡೆಗಳು ಗಬ್ಬು ನಾರುತ್ತವೆ. ಉಗಿದ ಕಫ, ಮೈಕೊಳೆ ಇತ್ಯಾದಿಗಳೆಲ್ಲ ಸೇರಿ ಗೋಡೆಗಳೆಲ್ಲ ವಿಚಿತ್ರ ಬಣ್ಣಕ್ಕೆ ತಿರುಗಿವೆ.

ಇನ್ನು ಶೌಚಾಲಯದ ಸ್ಥಿತಿ ಹೇಳಲು ಅಸಾಧ್ಯ. ಫರ್ಲಾಂಗ್ ದೂರದಿಂದಲೇ ಹೊಲಸು ವಾಸನೆ ಹೊಡೆಯುವ ಶೌಚಾಲಯಗಳೆಲ್ಲ ಹಳದಿ ಬಣ್ಣಕ್ಕೆ ತಿರುಗಿ ಯಾವುದೋ ಕಾಲವಾಗಿದೆ. ಈ ವರದಿಗಾರನೇ ಕಣ್ಣಾರೆ ಕಂಡಂತೆ ಶೌಚಾಲಯದಿಂದ ಹರಿದಾಡುವ ವಿಚಿತ್ರ ಕ್ರಿಮಿಗಳು ಗೋಡೆಯ ಮೂಲಕ ಭಿಕ್ಷುಕರನ್ನು ಕೂಡಿಟ್ಟ ಹಾಲ್‌ಗಳತ್ತ ಹರಿಯುತ್ತಿದ್ದವು.

ಭಿಕ್ಷುಕನಿಗೂ ರೋಗಿಗೂ ವ್ಯತ್ಯಾಸವಿದೆ. ಅದೆಂಥ ಆರೋಗ್ಯವಂತ ಭಿಕ್ಷುಕನೇ ಬಂದರೂ ಇಲ್ಲಿ ರೋಗಿಯಾಗುವುದು ಗ್ಯಾರಂಟಿ. ಇಲ್ಲಿ ಅಡುಗೆ ಮನೆಗೂ ಶೌಚಾಲಯಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ. ಕೆಲವು ಕಬ್ಬಿಣದ ಪಾತ್ರೆಗಳು. ಉಳಿದ ಅಲ್ಯೂಮಿನಿಯಂ ಪಾತ್ರೆಗಳ ಸುತ್ತ ಕರ್ರಗಿನ ಮಸಿ ಗೋಡೆ, ಸ್ಟೀಲಿನ ಬಕೀಟುಗಳು, ಊಟದ



ತಟ್ಟೆ, ಲೋಟ ಎಲ್ಲವೂ ಜಿಡ್ಡು ಜಿಡ್ಡು. ನೀರೇ ಕೊಳಕೆಂದ ಮೇಲೆ ಪಾತ್ರೆಗಳು ಹೇಗೆ ಶುಚಿಯಾಗಿರಲು ಸಾಧ್ಯ?

ಹೆಸರಿಗಷ್ಟೇ ಇಲ್ಲಿ ಅಡುಗೆ ಸಿಬ್ಬಂದಿಗಳಿದ್ದಾರೆ. ಗಟ್ಟಿಮುಟ್ಟಾದ ಭಿಕ್ಷುಕರನ್ನೇ ಆಯ್ದು ಅವರಿಂದಲೇ ಅಡುಗೆ ಮಾಡಿಸುತ್ತಾರೆ. ಎರಡೂವರೆ ಸಾವಿರ ಜನಕ್ಕೆ ಅಡುಗೆಯೆಂದರೆ ಸಣ್ಣ ಮಾತೆ? ಮೂಟೆ ಮೂಟೆ ಅಕ್ಕಿಯನ್ನು ತೊಳೆಯದೇ ನೇರವಾಗಿ ಪಾತ್ರೆಗೆ ಹಾಕಿ ಕುದಿಸುತ್ತಾರೆ. ತರಕಾರಿಯೂ ಅಷ್ಟೇ, ತೊಳೆಯದೇ ಹಾಗೇ ಕತ್ತರಿಸಿ ಹಾಕುತ್ತಾರೆ. ರುಚಿಯ ಮಾತಿರಲಿ ಕೆಟ್ಟ ವಾಸನೆ ಬರದಿದ್ದರೇನೇ ಪುಣ್ಯ ಎಂದು ವಿಧಿಯಿಲ್ಲದೇ ಭಿಕ್ಷುಕರು ತಿನ್ನುತ್ತಾರೆ.

ಹಿಂದೆ ಧರ್ಮಸಿಂಗ್ ಸರ್ಕಾರವಿದ್ದ ಕಾಲಕ್ಕೆ ಪದ್ಮಾನಾಯಕ್ ಎಂಬ ಪ್ರಜ್ಞಾವಂತ ಮಹಿಳೆ ಇದಕ್ಕೆ ಅಧ್ಯಕ್ಷಳಾಗಿದ್ದ ಕಾಲವೇ ಕೊನೆ. ಯಡ್ಡಿ ಸರ್ಕಾರ ಬಂದಿದ್ದೇ ಕೃಷ್ಣೇಗೌಡ ಎಂಬ ತಿಂಡಿಪೋತನನ್ನು ತಂದು ಇದರ ಕಾರ್ಯದರ್ಶಿಯನ್ನಾಗಿ ನೇಮಿಸಿತು. ಸಾಕಷ್ಟು ರೊಕ್ಕ ಕೊಟ್ಟೆ ಬೆಗ್ಗರ್ಸ್ ಕಾಲೋನಿಯನ್ನು ಹಿಡಿದಿದ್ದ ಕೃಷ್ಣೇಗೌಡ ಫಿನಾಯಿಲ್ಲು, ಸೋಪು, ಬಟ್ಟೆ, ರೇಷನ್ನು ಯಾವುದನ್ನೂ ಬಿಡದೇ ನುಂಗಲಾರಂಭಿಸಿದ. ಈತ ಕಾರ್ಯದರ್ಶಿಯಾದರೆ ಅಧ್ಯಕ್ಷನಾಗಿ ನೇಮಕಗೊಂಡವನು ಮೈಸೂರಿನ ಬಿಜೆಪಿ ಪುಢಾರಿ ಮಂಜೇಗೌಡ.

ಬೆರಳು ತೋರಿಸಿದರೆ ಹಸ್ತ ನುಂಗಬಲ್ಲ ಹಲಾಲು ಟೋಪಿ. ಹಿಂದೆ ಕಾಂಗ್ರೆಸ್ಸಿನಲ್ಲಿದ್ದು ಜಿ.ಟಿ. ದೇವೇಗೌಡರ ಜೊತೆ ಬಿದ್ದು ಬಿಜೆಪಿಗೆ ಬಂದ. ಕಳೆದ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸತ್ಯನಾರಾಯಣರ ವಿರುದ್ಧ ಬಿಜೆಪಿಯಿಂದ ನಿಂತು ಸೋತಿದ್ದ. ಅದಕ್ಕೂ ಮುನ್ನ ರಿಯಲ್ ಎಸ್ಟೇಟ್ ವಂಚನೆಯಲ್ಲಿ ಮಂಜೇಗೌಡ ಹೆಸರು ಗಳಿಸಿದ್ದ. ಒಂದೇ ಸೈಟನ್ನು ಏಳೆಂಟು ಜನಕ್ಕೆ ಮಾರಿ ವಂಚನೆಯನ್ನೇ ಹೊಟ್ಟೆಪಾಡನ್ನಾಗಿ ಮಾಡಿಕೊಂಡಿದ್ದ ಮಂಜೇಗೌಡನನ್ನು ನಿರಾಶ್ರಿತರ ಪರಿಹಾರ ಮಂಡಳಿಗೆ ತಂದು ಅಧ್ಯಕ್ಷನನ್ನಾಗಿ ಮಾಡಿದರೆ ಏನಾಗುತ್ತದೋ ಅದೇ ಆಯಿತು.

ಒಂದೆಡೆ ಮಂಜೇಗೌಡ ದೋಚಲಾರಂಭಿಸಿದರೆ ಮತ್ತೊಂದೆಡೆ ಸೆಕ್ರೆಟರಿ ಕೃಷ್ಣೇಗೌಡ ಬಾಚಲಾರಂಭಿಸಿದ. ನೀರಿನ ತೊಟ್ಟಿ ಶುಚಿಗೊಳಿಸುವ ಲೆಕ್ಕ, ಫಿನಾಯಿಲ್ಲಿನ ಲೆಕ್ಕ, ಸೋಪಿನ ಲೆಕ್ಕ, ಬ್ಲೀಚಿಂಗ್ ಪೌಡರಿನ ಲೆಕ್ಕ, ಅಕ್ಕಿಗೊಂದು ಲೆಕ್ಕ, ತರಕಾರಿಗೊಂದು ಲೆಕ್ಕ, ಔಷಧಿಗೊಂದು ಲೆಕ್ಕ, ಪಾತ್ರೆಗೊಂದು ಲೆಕ್ಕ, ಕಟ್ಟಡ ರಿಪೇರಿಯ ಲೆಕ್ಕ, ಹೀಗೆ ಲೆಕ್ಕ ಬರೆದು ಬರೆದೇ ಇಬ್ಬರೂ ದುಡ್ಡು ಹೊಡೆದರು.

ಬುದ್ಧಿಮಾಂದ್ಯ, ಮಾನಸಿಕ ಅಸ್ವಸ್ಥ ಭಿಕ್ಷುಕರನ್ನು ವಿಶೇಷ ಕಾಳಜಿಯಿಂದ ನೋಡಬೇಕು. ಅದಕ್ಕೆಂದೇ ಪ್ರತ್ಯೇಕ ಸಿಬ್ಬಂದಿ ಬೇಕು. ಸಂಬಳದ ಪುಸ್ತಕದಲ್ಲಷ್ಟೇ ಶುಶ್ರೂಷಕರ ಹೆಸರಿತ್ತೇ ಹೊರತು ಮಾಮೂಲಿನ ಗಾರ್ಡುಗಳೇ ದೊಣ್ಣೆ ಹಿಡಿದು ಬಡಿದು ಭಿಕ್ಷುಕರನ್ನು ನಿಯಂತ್ರಿಸುತ್ತಿದ್ದರು. ಕೆಲವೊಮ್ಮೆ ಮಾನಸಿಕ ಅಸ್ವಸ್ಥ ರೋಗಿಗಳೇ ಹೊಡೆದಾಡಿಕೊಳ್ಳುತ್ತಾರೆ. ಹಾಗೇ ಹೊಡೆದಾಡಿ ಸತ್ತವರನ್ನು ಮರುದಿನ ಕ್ಷುಲ್ಲಕವೆಂಬಂತೆ ಇದೇ ಕಾಲೋನಿ ಆವರಣದಲ್ಲಿ ಹೂತು ಹಾಕುತ್ತಾರೆ.

ಇಲ್ಲಿ ಜೀವಕ್ಕೆ ಬೆಲೆಯಿಲ್ಲ. ಸಾವು ಇಲ್ಲಿ ಸರ್ವೇಸಾಮಾನ್ಯ. ಇಂಥ ನರಕಸದೃಶ ಪರಿಸ್ಥಿತಿ ಏಕಾಏಕಿ ಉಲ್ಬಣಿಸಿದ್ದು ಆಗಸ್ಟ್ 17 ರ ಮಂಗಳವಾರದಂದು. ಮಾಮೂಲಿನಂತೆ ಬದನೆಕಾಯಿ, ಬೇಳೆಸಾರು, ಮುದ್ದೆ, ಮಜ್ಜಿಗೆ ಉಂಡು ಮಲಗಿದ ಭಿಕ್ಷುಕರಿಗೆ ರಾತ್ರಿಯಾಗುತ್ತಿದ್ದಂತೆ ವಾಂತಿ ಬೇದಿ ಶುರುವಾಗಿದೆ. ಆ ರಾತ್ರಿಯೇ 8 ಮಂದಿ ಸತ್ತಿದ್ದಾರೆ. ಮಾರನೇ ದಿನ ನಾಲ್ಕು ಮಂದಿಯ ಹೆಣ ಬಿದ್ದಿದೆ. ಗುರುವಾರದ ಹೊತ್ತಿಗೆ ಸತ್ತವರ ಸಂಖ್ಯೆ ಹದಿನೇಳಕ್ಕೇರಿತ್ತು.

ದುರಂತವೆಂದರೆ ಸತ್ತವರನ್ನು ಸಣ್ಣದೊಂದು ಪೋಸ್ಟ್ ಮಾರ್ಟಂ ಕೂಡ ಇಲ್ಲದೇ ಯಡ್ಡಿ ಸರ್ಕಾರ ಸುಟ್ಟು ಹಾಕಿತ್ತು. ಸಮಾಜ ಕಲ್ಯಾಣ ಮಂತ್ರಿ ಸುಧಾಕರ್ ಪಾಲಿಗೆ ಭಿಕ್ಷುಕರ ಸಾವು ಲೆಕ್ಕಕ್ಕೇ ಇಲ್ಲ. ಈ ಬಗ್ಗೆ ತನಿಖೆಗೆ ಸರ್ಕಾರ ಆದೇಶಿಸಿದೆಯಾದರೂ ತನಿಖೆ ಮಾಡುವಾತ ಮಂತ್ರಿ ಸುಧಾಕರ್‌ನ ವಿನಮ್ರ ಸೇವಕ. ದುಃಖ, ನೋವು, ಹಸಿವಿದ್ದಲ್ಲಿ ದೇವರಿರುತ್ತಾನಂತೆ. ಬಿಜೆಪಿ ಸರ್ಕಾರ ಅಯೋಧ್ಯೆಯಲ್ಲಿ ರಾಮನದೇವಸ್ಥಾನ ಕಟ್ಟಿಸಲು ಪಣ ತೊಟ್ಟಿದೆಯಂತೆ. ಸತ್ತ ಭಿಕ್ಷುಕರನ್ನು ಕಂಡು ರಾಮ ಅಳುತ್ತಿರಬೇಕಲ್ಲವೇ?

ನಿರ್ಗತಿಕ ಭಿಕ್ಷುಕರನ್ನು ಕಿತ್ತು ತಿಂದವರನ್ನು ಸಾಕ್ಷಾತ್ ಶ್ರೀರಾಮನೂ ಕ್ಷಮಿಸಲಾರ.


• ರಾ. ಸೋಮನಾಥ್
ra.somanath2010@gmail.com

ಬಳ್ಳಾರಿ: ಕಳ್ಳ ಮಿತ್ತಲ್‌ಗಾಗಿ ಸರ್ಕಾರದ ಭೂ ಲೂಟಿ

...ಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ...ಅಡಗಿದ ಭೂತ ಈಗ ಭೂದರೋಡೆಯ ರೂಪದಲ್ಲಿ ... ಎದುರು ನಿಂತಿದೆ.

...ರೆ ಪ್ರವಾಹದಿಂದ ನಜ್ಜುಗುಜ್ಜಾದ ಹಳ್ಳಿಗಳ ಸ್ಥಳಾಂತರ ...ು ಅಗತ್ಯವಿರುವ ಭೂಮಿಯನ್ನು ಇನ್ನೂ ಸ್ವಾಧೀನ ...ಕೊಳ್ಳಲಾಗದ ದ್ರೋಹಿ ಸರ್ಕಾರ, ಮಿತ್ತಲ್ ...ವಾಳ ಹೂಡಿಕೆ ಸಮಾವೇಶ ಮುಗಿಸಿ ಹೋಗಿ ... ತಿಂಗಳು ಕಳೆಯುವ ಮುನ್ನವೇ 5 ಸಾವಿರ ...ಭೂಮಿಯ ಸ್ವಾಧೀನಮಾಡಿಕೊಳ್ಳಲು ಶರವೇಗದಲ್ಲಿ ...ತ್ತಿದೆ. ಕೃಷಿಯೋಗ್ಯ ಭೂಮಿಯನ್ನು ಲಡಕಾಸು ಬೆಲೆಗೆ ...ರಿಸುತ್ತಿರುವ ಸರ್ಕಾರ ಅದನ್ನು ...ಲ್, ಟಾಟಾಗಳ ಪಾದಗಳಿಗೆ ...ರ್ಪಿಸಲು ತರಾತುರಿಯ ತಯಾರಿ ...ದೆ.

...ಡೀರ್ ಎಂದು ಅಧಿಸೂಚನೆ, ... ಹಿಂದೆಯೇ ನೋಟೀಸ್ ಪಡೆದ ...ಮೂಹ ಎಚ್ಚೆತ್ತುಗೊಂಡು ಸರ್ಕಾರದ ... ಲೂಟಿಯನ್ನು ವಿರೋಧಿಸುತ್ತಿದೆ. ...ರಿ ಸುತ್ತಲಿನ ರೈತರು ಟಾಟಾ ...ಸ್‌ಗೆ ತಮ್ಮ ಕೃಷಿಯೋಗ್ಯ ...ಮಿಯನ್ನು ಯಾವ ಕಾರಣಕ್ಕೂ ...ಡಲಾರೆವು ಎಂದು ಸ್ಪಷ್ಟವಾಗಿ ...ತ್ತಿದ್ದಾರೆ. ಇನ್ನೊಂದು ಕಡೆ ಬಳ್ಳಾರಿ ತಾಲ್ಲೂಕು ...ತಿನಿ, ಹರಗಿನ ದೋಣಿ ರೈತರು ಸರ್ಕಾರ ರಾತ್ರೋರಾತ್ರಿ ... ಭೂಮಿಗೆ ನಿಗದಿಪಡಿಸಿರುವ ಚಿಲ್ಲರೆ ಮೌಲ್ಯದ ...ದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಈಗಾಗಲೇ ವಿಮಾನ ...ಕ್ಕೆಂದು ಸಿರಿವಾರ-ಚಾಗನೂರುಗಳ ನೀರಾವರಿ ...ಮಿಯನ್ನೇ ಒತ್ತಾಯಪೂರ್ವಕವಾಗಿ ...ನಮಾಡಿಕೊಳ್ಳುತ್ತಿರುವ ಬಳ್ಳಾರಿ ರೆಡ್ಡಿಗಳು ಈಗ ಮಿತ್ತಲ್ ಮಡಿಲಿಗೆ ಐದು ಸಾವಿರ ಎಕರೆ ಭೂಮಿಯನ್ನು ತುರ್ತಾಗಿ ಹಾಕುವಂತೆ ಜಿಲ್ಲಾಡಳಿತಕ್ಕೆ ಆದೇಶ ನೀಡಿದ್ದಾರೆ.



15 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಕುಡುತಿನಿ, ಹರಗಿನಡೋಣಿ ಗ್ರಾಮಗಳಲ್ಲಿ ದಲಿತರು, ಹಿಂದುಳಿದವರೇ ಹೆಚ್ಚಾಗಿದ್ದು ಅವರು ತಲೆತಲಾಂತರದಿಂದ ಕೃಷಿಯನ್ನೇ ಆಧರಿಸಿ ಬದುಕು ಸಾಗಿಸುತ್ತ ಬಂದಿದ್ದಾರೆ. ಮೊದಲಿಗೆ ಭೂಸ್ವಾಧೀನಕ್ಕೆ ಒಪ್ಪದಿದ್ದ ಈ ರೈತಾಪಿ ಜನ ಇತ್ತೀಚೆಗೆ ಒಪ್ಪಿಕೊಂಡಿದ್ದಾರೆ. ಆದರೆ ತಮ್ಮ ಕೃಷಿಯೋಗ್ಯ ಭೂಮಿಗೆ ಸರಿಯಾದ ದರ ನಿಗದಿ ಮಾಡಬೇಕೆಂದು ಪಟ್ಟು ಹಾಕಿದ್ದಾರೆ. ಮೊದಲು ಇದಕ್ಕೆ ಜಿಲ್ಲಾಡಳಿತ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಮತ್ತು ಮಿತ್ತಲ್‌ನ ಆರ್ಸೆಲ್ಲಾರ್ ಸ್ಟೀಲ್ ಕಂಪೆನಿಗಳು ಒಪ್ಪಿದ್ದವು. ಆದರೆ ಇತ್ತೀಚೆಗೆ ರೈತರ ಗಮನಕ್ಕೆ ತರದೇ ಸಭೆ ನಡೆಸಿದ ಕೆಐಎಡಿಬಿ ಮತ್ತು ಜಿಲ್ಲಾಡಳಿತ ರೈತರ ಭೂಮಿಗೆ ಜುಜುಬಿ ಬೆಲೆ ನಿಗದಿ ಮಾಡಿ ಏಕಾಏಕಿ ಭೂಸ್ವಾಧೀನಕ್ಕೆ ಮುಂದಾಗಿ ದ್ರೋಹ ಬಗೆಯುತ್ತಿವೆ.

ಕೃಷಿಭೂಮಿಗೆ ಎಕರೆಗೆ 16 ಲಕ್ಷ, ಕೃಷಿಯೇತರ ಭೂಮಿಗೆ ಎಕರೆ 8 ಲಕ್ಷ ರೂ. ನಿಗದಿ ಮಾಡಿರುವುದು ರೈತರನ್ನು ಕೆರಳಿಸಿದೆ. ಏಕೆಂದರೆ ಇತ್ತೀಚೆಗಷ್ಟೇ ಇಲ್ಲಿಯ ಭೂಮಿ ಎಕರೆಗೆ 60 ಲಕ್ಷಕ್ಕೆ ಮಾರಾಟವಾದ ಉದಾಹರಣೆಗಳು ಸಾಕಷ್ಟಿವೆ. ಹೀಗಾಗಿ ತಮ್ಮ ಜೀವನಾಧಾರವನ್ನೇ ಕಳೆದುಕೊಳ್ಳಲಿರುವ ಇಲ್ಲಿನ ರೈತರು ನ್ಯಾಯಯುತ ದರ ಕೇಳುವುದು ಅನಿವಾರ್ಯವಾಗಿದೆ. ಕೇಂದ್ರಿಯ ಮೌಲ್ಯಮಾಪನ ಸಮಿತಿ ಬಳ್ಳಾರಿ ಜಿಲ್ಲೆಯಲ್ಲಿ ನಿಗದಿಪಡಿಸಿರುವ ಮೌಲ್ಯ ದರದ ಪ್ರಕಾರ; ಕುಡುತಿನಿ, ಹರಗಿನಡೋಣಿಯ ಭೂಮಿ ಎಕರೆಗೆ 70 ಲಕ್ಷ ಬಾಳುತ್ತದೆ. ಆದರೆ ಜನದ್ರೋಹಿ ಸರ್ಕಾರ 8, 16 ಲಕ್ಷ ಫಿಕ್ಸ್ ಮಾಡಿ ಭೂಸ್ವಾಧೀನಕ್ಕೆ ಕೈಹಾಕಿದೆ.

ಕಳ್ಳ ರೆಡ್ಡಿಗಳ ಏರ್‌ಪೋರ್ಟ್ ನಿರ್ಮಿಸಲು ತೆವಲಿಗೆಂದು ಸಿರಿವಾರ-ಚಾಗನೂರುಗಳಲ್ಲಿ ಎಕರೆಗೆ 14 ಲಕ್ಷ ಪರಿಹಾರ ನೀಡಲಾಗಿದೆ. ಉಪನೋಂದಣಾಧಿಕಾರಿ ಕಚೇರಿಯಲ್ಲಿ ಈ ಜಮೀನುಗಳ ಬೆಲೆಯು ಕೆಐಎಡಿಬಿಯ ಶಾಸನಬದ್ಧ ಸೌಲಭ್ಯದಡಿ 1.38 ಲಕ್ಷ ರೂ.ಗಳು. ಈಗ ಸಿರಿವಾರ-ಚಾಗನೂರು ರೈತರಿಗೆ ಇದರ ಹತ್ತುಪಟ್ಟು ಪರಿಹಾರ ನೀಡಲಾಗಿದ್ದು, ಕುಡುತಿನಿ, ಹರಗಿನಡೋಣಿ ಭೂಸ್ವಾಧೀನಕ್ಕೆ ಈ ಸೂತ್ರ ಅಳವಡಿಸದೇ ಕೆಐಎಡಿಬಿ ದ್ರೋಹ ಬಗೆಯುತ್ತಿದೆ. ಕುಡುತಿನಿ ಭಾಗದ ಭೂಮಿಗೆ ಮಂಡಳಿಯ ಶಾಸನಬದ್ಧ ಸೌಲಭ್ಯದಡಿ ಎಕರೆಗೆ 7.7 ಲಕ್ಷ ರೂ.ಗಳ ಮೌಲ್ಯವಿದೆ. ಇದನ್ನು ಹತ್ತುಪಟ್ಟು ಹೆಚ್ಚಿಸಿದರೆ ನ್ಯಾಯಯುತವಾಗಿ 77 ಲಕ್ಷ ಕೊಡಲೇಬೇಕಾಗುತ್ತದೆ. ಆದರೆ ಯಡಿಯೂರಪ್ಪನ ಬೇಕೂಫ್ ಸರ್ಕಾರ ಮಿತ್ತಲ್ ಎಂಬ ಇಂಟರ್‌ನ್ಯಾಷನಲ್ ಕಳ್ಳನಿಗಾಗಿ ನಮ್ಮ ರೈತರನ್ನು ವಂಚಿಸುತ್ತಿದೆ.

ಉಕ್ಕುವಲಯದಲ್ಲಿ ಬರುವ ಭೂಮಿಗೆ ಜಾಸ್ತಿ ಮೌಲ್ಯ ಬರುವುದು ಸಹಜವಾಗಿದೆ. ರಾಜ್ಯದ ಅದಿರು ಲೂಟಿ ಮಾಡಿ, ಇಲ್ಲೇ ಉಕ್ಕು ತಯಾರಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಲಕ್ಷಾಂತರ ಕೋಟಿ ಕಬಳಿಸಲಿರುವ ಮಿತ್ತಲ್‌ಗ್ಯಾಕೆ ಸರ್ಕಾರ ಉಚಿತವಾಗಿ ಭೂಮಿ ಕೊಡಬೇಕು ಎಂಬ ಮೂಲಪ್ರಶ್ನೆಯನ್ನು ನಾಡಿನ ಜನ ಎತ್ತಬೇಕಾಗಿದೆ. ಹಾಗೆ ನೋಡಿದರೆ ಕೈಗಾರಿಕೆ ನೆಪದಲ್ಲಿ ರಿಯಲ್ ಎಸ್ಟೇಟನ್ನೂ ಮಾಡುವ ಬಂಡವಾಳಶಾಹಿ ಕಂಪೆನಿಗಳಿಗೆ ರೈತರಿಂದ ಭೂಮಿ ಕಿತ್ತುಕೊಡುವುದೇ ಮಹಾದ್ರೋಹ. ಆದರೆ, ರೈತರೇ ಭೂಮಿ ಕೊಡಲು ಒಪ್ಪಿದಾಗ, ರೈತರೇ ನಿಗದಿಪಡಿಸುವ ದರವನ್ನು ಫಿಕ್ಸ್ ಮಾಡಿ, ಆ ಹಣವನ್ನು ಮಿತ್ತಲ್, ರೆಡ್ಡಿಗಳಿಂದ ವಸೂಲಿ ಮಾಡಬೇಕೇ ಹೊರತು ಸರ್ಕಾರ ಭರಿಸುವುದಲ್ಲ.

ಆದರೇನು ಮಾಡುವುದು? ಜಾಗತೀಕರಣದ ನಂತರ, 18ನೇ ಶತಮಾನದ ಪುರಾತನ ಭೂಸ್ವಾಧೀನ ಕಾಯ್ದೆಯನ್ನು ಬಳಸಿ, ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸುತ್ತ ಬರಲಾಗಿದೆ. ಪ್ರತಿರೋಧ ಒಡ್ಡಿದ ರೈತರು, ಆದಿವಾಸಿಗಳನ್ನು ಮೃಗಗಳಂತೆ ಬೇಟೆಯಾಡಲಾಗುತ್ತಿದೆ. ಇದಕ್ಕೆ, ಕಳೆದ ವಾರ ಉತ್ತರಪ್ರದೇಶದಲ್ಲಿ ಪ್ರತಿಭಟಿಸುತ್ತಿದ್ದ ಮೂವರು ರೈತರನ್ನು ಗುಂಡುಹಾರಿಸಿ ಕೊಂದದ್ದೇ ಸಾಕ್ಷಿಯಾಗಿದೆ.

ಕುಡುತಿನಿ ಭಾಗದ ರೈತರು ಈಗ ನ್ಯಾಯಯುತ ಬೇಡಿಕೆಯನ್ನೇ ಮುಂದಿಟ್ಟಿದ್ದಾರೆ. ಸರ್ಕಾರಕ್ಕೆ ಅದನ್ನು ಪೂರೈಸಲಾಗದಿದ್ದರೆ, ಭೂಸ್ವಾಧೀನವನ್ನೇ ನಿಲ್ಲಿಸಲಿ. ಕಳ್ಳ ಖದೀಮ ಮಿತ್ತಲ್‌ನ ಆರ್ಸೆಲ್ಲಾರ್ ಕಂಪೆನಿ ಇಲ್ಲಿಗೆ ಬರುವುದೇನೂ ಅಗತ್ಯವಿಲ್ಲ. ಅಷ್ಟಕ್ಕೂ ಆರ್ಸೆಲ್ಲಾರ್ ಇಲ್ಲಿ ಬಂದು ನಮ್ಮದೇ ಅದಿರು ಕದ್ದು ಸ್ಟೀಲ್ ತಯಾರಿಸುವುದರಿಂದ ಈ ರಾಜ್ಯಕ್ಕೆ ನಷ್ಟವೇ ಹೊರತು ಲಾಭವಿಲ್ಲ ಅಲ್ಲವೇ?

• ಪಿ.ಕೆ.ಮಲ್ಲನಗೌಡರ್

ಕಿ.ರಂ. ಜೊತೆಯಲ್ಲಿ

• ಬಿ.ಚಂದ್ರೇಗೌಡ

ನಾನು ಮೊಟ್ಟಮೊದಲು ಕಿ.ರಂ. ನಾಗರಾಜ ಅವರನ್ನು ನೋಡಿದ್ದು ಶಿವಮೊಗ್ಗದ ಹರಿಸರ ಸಾಹಿತ್ಯ ವೇದಿಕೆ ಗೆಳೆಯರು ಏರ್ಪಡಿಸಿದ್ದ ಒಂದು ಸಾಹಿತ್ಯ ಗೋಷ್ಠಿಯಲ್ಲಿ, ಮಧುರಚೆನ್ನ, ಗಂಗಾಧರ ಚಿತ್ತಾಲ, ಸು.ರಂ.ಎಕ್ಕುಂಡಿಯವರ ಕಾವ್ಯದ ಬಗ್ಗೆ ಏರ್ಪಡಿಸಿದ್ದ ಆ ಗೋಷ್ಠಿಯ ಉದ್ಘಾಟನೆಗೆ ಅಂದಿನ ಕುವೆಂಪು ವಿವಿಯ ಉಪಕುಲಪತಿಗಳಾದ ಶಾಂತಿನಾಥ ದೇಸಾಯಿ ಬಂದಿದ್ದರು. ಅವರನ್ನು ನೋಡಿದ್ದೂ ಅದೇ ಮೊದಲು.

ಕಿ.ರಂ. ಪರಿಚಯಕ್ಕೆ ಯಾವ ಹೊಸತನವೂ ಇರುತ್ತಿರಲಿಲ್ಲ, ಪ್ರಥಮ ಭೇಟಿಯೂ ಕೂಡಾ ಹಳತಾಗಿರುತ್ತಿತ್ತು, ಈ ತರದ ಇನ್ನೋರ್ವ ವ್ಯಕ್ತಿಯೆಂದರೆ ಕಡಿದಾಳು ಶಾಮಣ್ಣನವರು. ಪಕ್ಕದಲ್ಲಿ ಕುಳಿತ ಹೊಸಬರ ಜೊತೆಯಲ್ಲೂ ಕೂಡ ಊರುಕೇರಿ, ಕುಲಗೋತ್ರ ವಿಚಾರಿಸದೆ ಬಿಟ್ಟ ಮಾತನ್ನ ಮತ್ತೆ ಮುಂದುವರೆಸುವಷ್ಟು ಸಲೀಸಾಗಿ ಮಾತಿಗಾರಂಭಿಸುವಂತಹ ಅಪರೂಪದವರು.

ಆ ದಿನವೂ ಹಾಗೆಯೇ ಆಯ್ತು, ಗೋಷ್ಠಿಯಲ್ಲಿ ಮಾತನಾಡಿದವರ ಬಹುಮುಖ್ಯ ವಿಷಯಗಳನ್ನ ಕಿ.ರಂ. ಸಾಹಿತ್ಯದ ವಿದ್ಯಾರ್ಥಿಯಂತೆ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಪತ್ರಿಕೆಗೆ ಬರೆಯುವ ಸಲುವಾಗಿ ನಾನೂ ಟಿಪ್ಪಣಿಗಳನ್ನು ಕೆರೆದುಕೊಳ್ಳುತ್ತಿದ್ದೆ. ನಂತರ ಕಿ.ರಂ. ಟಿಪ್ಪಣಿಗಳನ್ನು ಕೇಳಿ ಈಸಿಕೊಂಡೆ. ಆದರೆ ಕಾವ್ಯದ ಬಗ್ಗೆ ತುಂಬ ಅಜ್ಞಾನಿಯಾದ ನಾನು ಸದರಿ ಗೋಷ್ಠಿಗಳ ಬಗ್ಗೆ ವರದಿಯನ್ನೇ ಮಾಡದೇ ಸುಮ್ಮನಾದೆ.

ಆ ದಿನ ಸಂಜೆ ಹೆಚ್.ಇಬ್ರಾಹಿಂ ಸಾಹೇಬರ ಮನೆಯಲ್ಲಿ ಭರ್ಜರಿ ಪಾರ್ಟಿಯಿತ್ತು, ಅದಕ್ಕಾಗಿಯೇ ಅವರ ಮನೆ ಮೇಲೆ ಜಮಖಾನ ಹಾಸಿ, ದೀಪಹಚ್ಚಿ ರೆಡಿಮಾಡಿದ್ದರು. ತಮಗೆ ಬೇಕಾದ ಐಟಂಗಳನ್ನು ಬಗ್ಗಿಸಿಕೊಂಡು ಬೇಕಾದಷ್ಟು ಕುಡಿಯಲು ಯಾರ ನಿರ್ಬಂಧವೂ ಅಲ್ಲಿರಲಿಲ್ಲ, ಆದ್ದರಿಂದ ನಾವೆಲ್ಲಾ ಬಹಳ ಬೇಗ ಔಟಾದೆವು. ರೆಹಮತ್ ತರೀಕೆರೆಯ ಬಿಯರ್ ಗ್ಲಾಸ್‌ಗೆ ಯಾರೋ ವಿಸ್ಕಿ ಸುರಿದಿದ್ದರಿಂದ ಆತ ಇಹಲೋಕವನ್ನೇ ತ್ಯಜಿಸುವಂತಾಡತೊಡಗಿದ. ಆದರೆ ಕಿ.ರಂ. ಮಾತ್ರ ಬಹಳ ಸಂಯಮದಿಂದ ಹಾರ್ಮೋನಿಯಮ್ ಮುಂದೆ ಕುಳಿತ ನಾಟಕದ ಮೇಷ್ಟ್ರರಂತೆ. ಜಮಖಾನದ ಮೇಲೆ ಕುಳಿತಿದ್ದರು. ಅವರ ಗುಂಗುರು ಕೂದಲು ಭುಜಕ್ಕೆ ಎಟುಕಿಸುತ್ತಿತ್ತು, ಅವರ ಎದುರು ಇಬ್ರಾಹಿಂ ಸಾಹೇಬರು ವಿಧೇಯ ವಿದ್ಯಾರ್ಥಿಯಂತೆ ಕುಳಿತು ಕಿ.ರಂ. ಮಾತನ್ನು ಕೇಳಿಸಿಕೊಳ್ಳುತ್ತಿದ್ದರು.

ಆಗ ನಾನು "ಸಾರ್, ಎಸ್.ಎಲ್.ಭೈರಪ್ಪನವರ 'ಪರ್ವ'ದ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದೆ.

"ಅದು ಅವರ ಇನ್ನೊಂದು ಕಾದಂಬರಿ ಅಷ್ಟೆ. ಅವರ ಕಾದಂಬರಿ ಸಂಖ್ಯೆಯನ್ನು ಹೆಚ್ಚಿಸಿದ ಇನ್ನೊಂದು ಕೃತಿ" ಎಂದು ಚುಟುಕಾಗಿ ಉತ್ತರಿಸಿದರು.


ಆಗ ಅವರ ಅಭಿಪ್ರಾಯದ ಮುಂದುವರಿಕೆ ಎಂಬಂತೆ ಪುರುಷೋತ್ತಮ ಬಿಳಿಮಲೆ ಅದ್ಭುತವಾಗಿ ಮಾತನಾಡುತ್ತಿರ ಬೇಕಾದರೆ, ಏನು ಮಾಡಿದರೂ ನಮ್ಮ ತಲೆ ಭುಜದ ಮೇಲೆ ನಿಲ್ಲದೆ ಹಗ್ಗದಿಂದ ಆತ್ಮಹತ್ಯೆ ಮಾಡಿಕೊಂಡಂತೆ ವಾಲುತ್ತಿದ್ದವು.

ಪ್ರತಿಯೊಬ್ಬರೂ ಮಾತನಾಡುತ್ತ ಕೇಳುಗರೇ ಇಲ್ಲದಂತಾದ ಆ ಪಾರ್ಟಿಯಿಂದ ಇಬ್ರಾಹಿಂ ಸಾಹೇಬರು ಭ್ರಮನಿರಸಗೊಂಡರೇನೋ? ಏಕೆಂದರೆ ಅಂತದ್ದೊಂದು ಪಾರ್ಟಿ ಮುಂದೆಂದೂ ಇಬ್ರಾಹಿಂ ಸಾಹೇಬರ ಮನೆಯಲ್ಲಿ ನಡೆಯಲಿಲ್ಲ, ಬೆಂಗಳೂರಿಂದ ಬರುವ ಸಾಹಿತಿಗಳು ಮತ್ತು ಸುಗಮ ಸಂಗೀತದ ಕಲಾನಿಧಿಗಳ ಪಾನಗೋಷ್ಠಿಗಳು ಮುನೀರ್ ಮನೆಯಲ್ಲಿ ನಡೆಯುವಂತೆ ಇಬ್ರಾಹಿಂ ಸಾಹೇಬರು ಏರ್ಪಾಟು ಮಾಡಿದ್ದರಿಂದ ಸಾಹಿತ್ಯ ಮತ್ತು ಸುಗಮ ಸಂಗೀತ ಲೋಕಗಳಲ್ಲಿ ಮುನೀರ್ ಹೆಸರಾಂತ ವ್ಯಕ್ತಿಯಾದರು!

ಆ ಸಮಯದಲ್ಲೇ ಲಂಕೇಶರು ಪ್ರಗತಿರಂಗ ಸ್ಥಾಪಿಸಿ, ನಾಡಿನಾದ್ಯಂತ ಸಭೆ ಏರ್ಪಡಿಸಿ, ಕಡೆಗೆ ಅದನ್ನ ಬೆಂಗಳೂರಲ್ಲಿ ನಡೆದ ಜಾಗೃತ ಸಾಹಿತ್ಯ ಸಮಾವೇಶದಲ್ಲಿ ಅಂತ್ಯಗೊಳಿಸಿದರು. ಆ ಜಾಗೃತ ಸಾಹಿತ್ಯ ಸಮ್ಮೇಳನದ ರೂವಾರಿಗಳಲ್ಲಿ ಕಿ.ರಂ. ಕೂಡಾ ಒಬ್ಬರು. ಆಗ ನಾನು ಕಿ.ರಂ.ರನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರು ಒಂದಿಷ್ಟು ಅಮಲಿನಲ್ಲೇ ಇದ್ದುದು ಕಂಡುಬಂತು.

ಒಮ್ಮೆ ನಾನು ಲಂಕೇಶ್ ಎದುರು ಕೂತಿದ್ದಾಗ ಕಿ.ರಂ. ತಮ್ಮದೇ ಹೆಸರಿನ ತರುಣ ಕವಿಯೊಂದಿಗೆ ಪ್ರವಾಹದಿಂದ ಕೊಚ್ಚಿಸಿಕೊಂಡು ದಡ ತಲುಪಿದವರಂತೆ ಆಫೀಸಿಗೆ ನುಗ್ಗಿದರು. ಲಂಕೇಶರಿಗೆ ಸಿಟ್ಟು ಬಂತು. ಸುಮ್ಮನೆ ಹೋಗಲು ಹೇಳಿದರು. ಕಿ.ರಂ. ನನ್ನ ಭುಜ ಹಿಡಿದು "ಮೇಷ್ಟ್ರೇಕೆ ಈ ತರ ಮಾತಾಡ್ತರೆ? ಚರ್ಚೆ ಮಾಡಕ್ಕೂ ಅವಕಾಶ ಇಲ್ವೇ?" ಎಂದರು. ಆಗ ಲಂಕೇಶ್ ಮತ್ತೂ ಗದರಿದರು. ನಾನು ಉಪಾಯದಲ್ಲಿ ಕಿ.ರಂ. ಮತ್ತವರ ಶಿಷ್ಯನನ್ನ ಕಳುಹಿಸಿದೆ. ಆಗ ಲಂಕೇಶ್ "ನೋಡಯ್ಯ ಈ ನಾಗರಾಜನಿಗೆ ನಾನು ಜೋರು ಮಾಡಿದ್ದರಿಂದ ಸುಧಾರಿಸಿಗಳಕ್ಕೆ ಒಂದು ವಾರ ಬೇಕಾಯ್ತದೆ" ಎಂದರು. ಅನಂತರ ಅದೇನೋ ನೆನೆಸಿಕೊಂಡಂತೆ ತಮ್ಮ ಕೈಚೀಲ ತೆಗೆದುಕೊಂಡು "ಈಗ ಬೇಗ ನಡಿ, ಹೋಗನ. ಅವ್ರುರು ಇಲ್ಲೆ ಎಲ್ಲೋ ಮತ್ತೆ ಕುಡಕಂಡು ಬಂದುಬುಡ್ತರೆ" ಎಂದು ತರಾತುರಿಯಿಂದ ಹೊರಟುಬಿಟ್ಟರು.

ಒಂದಷ್ಟು ಜಾಸ್ತಿ ಕುಡಿದಾಗ ಕಿ.ರಂ. ಜೊತೆ ಮಾತನಾಡಲು ಅಳುಕುತ್ತಿದ್ದ ಲಂಕೇಶ್ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕ್ಕಿ.ರಂ. ಕುಡಿದಿದ್ದಾಗ ಅವರ ಮಾತನ್ನ ಕೇಳಲು ಹಾತೊರೆಯುತ್ತಿದ್ದರು.



ಶಿವಮೊಗ್ಗದ ಕರ್ನಾಟಕ ಸಂಘದವರು ಲಂಕೇಶ್‌ಗೆ ಸದಸ್ಯತ್ವ ಕೊಟ್ಟು ಅವರ ಹೆಸರಿನಲ್ಲಿ ಪ್ರಶಸ್ತಿ ಪ್ರಾರಂಭಿಸಿದ್ದಲ್ಲದೆ, ಲಂಕೇಶರ ಸಾಹಿತ್ಯ ಕುರಿತು ಒಂದು ದಿನದ ಗೋಷ್ಠಿ ಏರ್ಪಡಿಸಿದರು. ಲಂಕೇಶರ ಕಾವ್ಯ ಕುರಿತ ಉಪನ್ಯಾಸಕ್ಕೆ ಕಿ.ರಂ. ಬಂದಿದ್ದರು. ಎಂದಿನಂತೆ ಅದ್ಭುತವಾಗಿ ಮಾತನಾಡಿದರು. ಅಪ್ಪಟ್ಟ ಕಾವ್ಯಜೀವಿಯಾದ ಕಿ.ರಂ. ಮಾತನಾಡಿದ ಮೇಲೆ ಇನ್ನಾರ ಮಾತೂ ಬೇಕಾಗುವುದಿಲ್ಲ.

ಅವರ ಉಪನ್ಯಾಸದಿಂದ ಸ್ಫೂರ್ತಿಗೊಂಡ ಸಾಹಿತ್ಯಾಸಕ್ತ ಜೀವಿಯೊಂದು ಕಿ.ರಂ.ಗೆ ಪ್ರಶ್ನೆ ಕೇಳಲು ರೆಡಿಯಾಗಿ ಬಂತು. ಅಷ್ಟರಲ್ಲಾಗಲೇ ಕರ್ನಾಟಕ ಸಂಘದವರು ಕೊಟ್ಟ ಬಿಸಿಬೇಳೆ ಬಾತು ನಮ್ಮ ಕೈಲಿತ್ತು, ಅದು ಉದಕದಷ್ಟು ಬಿಸಿಯಿತ್ತು. ಆದರೆ ಸಾಹಿತ್ಯಾಸಕ್ತ ಜೀವಿ ಇದಾವುದನ್ನು ಲೆಕ್ಕಿಸದೆ ಒಂದು ಚಮಚ ಬಗೆದು ಬಾಯಿಗಿಟ್ಟುಕೊಂಡು, ಅದನ್ನು ಕೂಡಲೇ ತಟ್ಟೆಗೆ ಉಗಿದು, ಗಾಳಿಗೆ ಬಾಯೊಡ್ಡಿತು. ನಗು ಅದುಮಿಟ್ಟುಕೊಂಡ ನಾನು, "ಅಂತೂ ನೀವು ಅಸಂಬದ್ಧ ಪ್ರಶ್ನೆಯಿಂದ ಬಚಾವಾದ್ರಿ" ಎಂದೆ. ಕಿ.ರಂ. ಹಳ್ಳಿಗನಂತೆ ನಗುತ್ತ "ಚೊಬ್ಬೆ ಗಿಬ್ಬೆ ಬಂತೇನ್ರಿ? ನಿಧಾನಕ್ಕೆ ತಿನ್ನಿ" ಎಂದರು. ಆದರೂ ಆತ ಇದರ ಸಹವಾಸವೇ ಬೇಡ ಎಂಬಂತೆ ಕೈಲಿಡಿದು ಕಿ.ರಂ.ಗೆ ಕಾವ್ಯಕುರಿತ ಪ್ರಶ್ನೆಗಳ ಮಳೆಗರೆದ.

ಆ ದಿನ ಸಂಜೆ ನಡೆದ ಸಮಾರೋಪ, ಸನ್ಮಾನವನ್ನೆಲ್ಲಾ ಮುಗಿಸಿಕೊಂಡು ಲಂಕೇಶ್ ಸರ್ಕಿಟ್ ಹೌಸಿಗೆ ಬಂದಾಗ ಕಿ.ರಂ. ಮಾಡಿದ ಅದ್ಭುತ ಭಾಷಣದ ಬಗ್ಗೆ ಹೇಳಿದೆ. ಆಗ ಲಂಕೇಶ್ "ನೀನೊಂದು ಕೆಲಸ ಮಾಡಯ್ಯ ಹೋಗಿ ಕಿ.ರಂ.ಕರಕೊಂಡು ಬಾ. ಒಂದೇ ಒಂದು ಸಿಕ್ಸ್‌ಟಿ ಕೊಡು. ನಂತರ ನಾನು ಸೂಚನೆ ಕೊಟ್ಟಾಗ ಕರಕೊಂಡು ಹೋಗು" ಎಂದರು. ನಾನು ಕಿ.ರಂ ಕರೆತರಲು ಹೋದಾಗ ಅವರನ್ನಾಗಲೇ ಮುನೀರ್ ಹಾರಿಸಿಕೊಂಡು ಹೋಗಿದ್ದು ಗೊತ್ತಾಯಿತು. ನಾನು ನಿರಾಶೆಯಿಂದ ಬರುವಷ್ಟರಲ್ಲಿ ಲಂಕೇಶ್ ಎದುರು ಶೂದ್ರ ಶ್ರೀನಿವಾಸರ ಗೆಳೆಯರು ಜಮಾಯಿಸಿದ್ದರು.

ಮರುದಿನ ಕಿ.ರಂ.ಅವರನ್ನು ಕಳುಹಿಸಲು ರಾತ್ರಿ ಹನ್ನೊಂದರ ಹೊತ್ತಿನಲ್ಲಿ ಬಸ್ಸ್ಟಾಂಡಿಗೆ ಹೋದೆವು. ಅವರನ್ನು ರಾತ್ರಿ ವೇಳೆ ಕಳುಹಿಸಿಕೊಡುವುದೇ ಒಂದು ಸಂಭ್ರಮವಾಗುತ್ತಿತ್ತು. ನಾವು ದಿನವೂ ನೋಡಿದ ಊರು ರಾತ್ರಿಯಲ್ಲಿ ವಿಶೇಷವಾಗಿ ಕಾಣುತ್ತಿತ್ತು. ಹಗ್ಗ ಮೂಗುದಾರವಿಲ್ಲದ ಆಕಳಿನಂತೆ ಅವರು ಸಿಕ್ಕಸಿಕ್ಕ

ಕಿ.ರಂ. ಸಂಸ್ಕಾರ ಹೇಗಾಯಿತು? ಯಾಕೆ ಹೀಗಾಯಿತು?


ನಿರೀಶ್ವರವಾದಿಗಳನ್ನು ಕುರಿತಂತೆ ಸಂಪ್ರದಾಯಸ್ಥರು ಹೇಳುವ ಒಂದು ಗೇಲಿಯ ಮಾತು ಹೀಗಿದೆ-

A philosopher has never killed any priests.

whereas the priest has killed a great many philosophers..

-ಕನ್ನಡ ಸಾಹಿತ್ಯದ ಬಹಳ ದೊಡ್ಡ ಮನುಷ್ಯರಾಗಿದ್ದ ಕಿ.ರಂ.ನಾಗರಾಜರ ಅಂತ್ಯಸಂಸ್ಕಾರಕ್ಕೆಂದು ಅಂದು ನಾವೆಲ್ಲಾ ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ನೆರೆದಿದ್ದಾಗ ಈ ಮೇಲಿನ ಮಾತುಗಳನ್ನು ಮತ್ತೆ ಸಾಬೀತುಪಡಿಸುವಂತೆ ಘಟನೆಗಳು ನಡೆದುಹೋದವು.

ಕಿ.ರಂ.ರಿಗೆ ಬ್ರಾಹ್ಮಣ ಜಾತಿಯ ವಿಧಿವಿಧಾನಗಳ ಪ್ರಕಾರ ಕೆಲಧಾರ್ಮಿಕ ಆಚರಣೆಗಳನ್ನು ಅವರ ಸಮೀಪ ಬಂಧುಗಳು ಮಾಡಿ ಪೂರೈಸಿದ್ದರು. ನಮಗೆಲ್ಲ ಅಲ್ಲೊಂದು ವಿಪರ್ಯಾಸ ಕಾಣಿಸಿತು. ಕಳೆದ ಮೂರ್ನಾಲ್ಕು ದಶಕಗಳಿಂದ ಕರ್ನಾಟಕದ ಜನತೆಗೆ ಸೇರಿದವರೆಂಬಂತೆ ಬದುಕಿದ ಕಿ.ರಂ. ಜಾತಿವಾದಿ ಅಥವಾ ಸಂಪ್ರದಾಯವಾದಿ ಎರಡೂ ಆಗಿರಲಿಲ್ಲ, ಅವರು ತೀರಿಕೊಂಡ ನಂತರ ಅಂತ್ಯಸಂಸ್ಕಾರದ ನಡುವಿನ ಅವಧಿಯಲ್ಲೂ ಕಿ.ರಂ. ಅವರ ಪ್ರೀತಿಪಾತ್ರರ ಅಭಿಮಾನಿಗಳ ವಶದಲ್ಲೇ ಇದ್ದರು. ಕಿ.ರಂ. ಮನೆಯಲ್ಲಾಗಲೀ, ಸಂಸ ಬಯಲುರಂಗಮಂದಿರದಲ್ಲಾಗಲಿ ಬಂದವರು ಕಿ.ರಂ.ರ ವ್ಯಕ್ತಿತ್ವ ಬಲ್ಲವರಾಗಿದ್ದರು. ಆ ಹಂತದವರೆಗೂ ಯಾವುದೋ ಒಂದು ನಿರ್ದಿಷ್ಟ ಜಾತಿಯ ಸಂಪ್ರದಾಯ ಅಲ್ಲಿ ಪಾಲನೆಯಾಗಲಿಲ್ಲ, ಬಂದಿದ್ದ ಜನಕ್ಕೆ ಅದು ಬೇಕಿರಲೂ ಇಲ್ಲ, ಸ್ವತಃ ಕಿ.ರಂ.ರನ್ನೇ ಕೇಳಿದ್ದಿದ್ದರೂ ಬಹುಶಃ ಇದೇ ಉತ್ತರ ಸಿಕ್ಕಿರುತ್ತಿತ್ತು, ಆದರೆ ಬನಶಂಕರಿ ಚಿತಾಗಾರದಲ್ಲಿ ಕಿ.ರಂ.ರ ಮೃತದೇಹವನ್ನಿರಿಸಿಕೊಂಡು



ಬ್ರಾಹ್ಮಣ ವಿಧಾನಗಳಂತೆ ಕೆಲವು rituals ನಡೆಸಲಾಯಿತು. ಕಿ.ರಂ. ನಂಬಿರದಿದ್ದ ಈ ಆಚರಣೆಗಳು ಯಾವುದೇ ಅಡೆತಡೆಯಿಲ್ಲದಂತೆ ನಡೆದವು. ಅಲ್ಲಿ ಕಿ.ರಂ.ರ ದೇಹವನ್ನು ಸಂಪ್ರದಾಯವಾದಿಗಳು ವಶಪಡಿಸಿಕೊಂಡಿದ್ದರು. ಯಾವುದು ಅಗತ್ಯ ಇನ್ಯಾವುದು ಅನಗತ್ಯವೆಂದು ಹೇಳಬಲ್ಲ ದಿಟ್ಟರ್ಯಾರು ಅಲ್ಲಿರಲಿಲ್ಲ. ಅದಕ್ಕೂ ಮೊದಲು ಹೇಳಬೇಕೆಂದರೆ ಸ್ವತಃ ಕಿ.ರಂ. ಸಹ ಆ ಬಗ್ಗೆ ಯೋಚಿಸಿರಲೂ ಇಲ್ಲ. ತಮ್ಮ ಸಮೀಪವರ್ತಿಗಳಿಗೆ ಸೂಚಿಸಿರಲೂ ಇಲ್ಲ, ಇಂತದ್ದೇ ಪ್ರಸಂಗಗಳ ಇನ್ನೊಂದು ಆಯಾಮ ಹೀಗಿದೆ-

ಪ್ರೊ.ಕೆ.ರಾಮದಾಸ್ ತೀರಿಕೊಳ್ಳುವ ಮೊದಲೇ ತಮ್ಮ ಕುಟುಂಬದವರನ್ನು ಎದುರಿಗೆ ಕೂರಿಸಿಕೊಂಡು ತಮ್ಮ ಮೃತದೇಹದ ವಿಲೇವಾರಿ (ಕ್ಷಮಿಸಿ ಈ ಪದ ಒರಟಾಗಿದೆ) ಹೇಗಾಗಬೇಕೆಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದರು. ಅದರಂತೆಯೇ ನಾಸ್ತಿಕರಾಗಿದ್ದ ರಾಮದಾಸರನ್ನು ಬೀಳ್ಕೊಡಲಾಯಿತು. ರಾಮದಾಸರಿಗೆ ಕ್ಯಾನ್ಸರ್ ಉಲ್ಬಣಾವಸ್ಥೆಗೆ ತಲುಪಿದ ಕಾರಣ ಅವರಿಗೆ ಮರಣದ ಸಂಭಾವ್ಯತೆ ಗೋಚರಿಸಿತ್ತು. ಹಾಗಾಗಿ ಅವರು ಮುಂದಿನದನ್ನು ಮೊದಲೇ ಯೋಚಿಸಿ ಏನಾಗಬೇಕು ಏನಾಗಬಾರದು ಎಂದು ಹೇಳಿದ್ದರು.

ಮತ್ತೊಂದೆಡೆ ಚಿ.ಶ್ರೀನಿವಾಸರಾಜುರವರು ಅನಿರೀಕ್ಷಿತವಾಗಿ ಹೃದಯಾಘಾತದಿಂದ ತೀರಿಕೊಂಡಾಗಲೂ ಅಂತ್ಯಸಂಸ್ಕಾರದ ಬಗ್ಗೆ ಗೊಂದಲಗಳಿರಲಿಲ್ಲ, ಏಕೆಂದರೆ ತಮ್ಮ ಅಂತ್ಯ ಸಂಸ್ಕಾರದ ವೇಳೆ ಧಾರ್ಮಿಕ ಅಥವಾ ಜಾತಿಯ ಆಚರಣೆಗಳಿರಬಾರದೆಂತಲೂ ಹಾಗೂ ತಮ್ಮ ಮೃತದೇಹವನ್ನು ವೈದ್ಯಕೀಯ ಸಂಶೋಧನೆಗಾಗಿ ದಾನ ನೀಡಬೇಕೆಂತಲೂ ಅವರು ಮೊದಲೇ ನಿರ್ಧರಿಸಿಕೊಂಡು, ಹಾಗೆಂದು ಕುಟುಂಬದವರಿಗೆ ತಿಳಿಸಿಯೂ ಇದ್ದರು.

ಇದೇ ಸಂದರ್ಭದಲ್ಲಿ ನನಗೆ ಲಂಕೇಶರ ಸಂಸ್ಕಾರದ ವೇಳೆಯಲ್ಲಿ ಏನಾಯಿತೆಂದು ನೆನಪಾಗುತ್ತಿದೆ. ಲಂಕೇಶರು ದೇವರು, ಜಾತಿ ಹಾಗೂ ಧಾರ್ಮಿಕ ಆಚರಣೆಗಳಿಂದ ದೂರವಿದ್ದವರು. ಆದರೆ ಅವರ ಅಂತ್ಯಸಂಸ್ಕಾರದ ಸಮಯದಲ್ಲಿ ಅಲ್ಲಿ ಕಾಣಿಸಿಕೊಂಡ ಕೆಲವು ಬಂಧುಗಳು ಏಕಾಏಕಿ ಲಿಂಗಾಯತ ಆಚಾರಗಳನ್ನು ಮಾಡಲು ಪ್ರಾರಂಭಿಸಿಬಿಟ್ಟರು. ಆದರೆ ಅಲ್ಲಿದ್ದ ಗೌರಿ ಹಾಗೂ ಕವಿತಾ ತಮ್ಮೆಲ್ಲಾ ದುಃಖಸಂಕಟಗಳ ನಡುವೆಯೇ ಮಧ್ಯೆ ಪ್ರವೇಶಿಸಿ ಅವನ್ನೆಲ್ಲಾ ತಡೆದು ನಿಲ್ಲಿಸಿದರು. ಆದರಿಂದ ನಮಗಂತೂ ಸಮಾಧಾನವಾಯಿತು.

ಕಿ.ರಂ. ವಿಚಾರದಲ್ಲಿ ಹಾಗಾಗಲಿಲ್ಲ. ಜಾತಿ ಚೌಕಟ್ಟಿನಿಂದ, ಧಾರ್ಮಿಕ ಆಚರಣೆ, ಸಂಪ್ರದಾಯಗಳ ಹಂಗಿನಿಂದ ಎಂದೋ ಆಚೆ ಬಂದಿದ್ದ ಕಿ.ರಂ. ಎಂದೂ ಅವುಗಳ ಹಿಡಿತಕ್ಕೆ ಸಿಕ್ಕಿರಲಿಲ್ಲ. ಆದರೆ ಅವರು ಉಸಿರು ಚೆಲ್ಲಿದ ನಂತರ ಅವರ ಬದುಕು ಹಾಗೂ ನಂಬಿಕೆಗಳಿಂದ ಆಚೆಯಿದ್ದ ಜನ ಏಕಾಏಕಿ ಕಿ.ರಂ. ದೇಹದ ಮೇಲೆ ತಮ್ಮ ಹಕ್ಕು ಸ್ಥಾಪಿಸಿದ್ದು, ಅಲ್ಲಿದ್ದ ನೂರಾರು ಜನರಿಗೆ

ವಲ್ಲಿ ನುಗ್ಗಿ ನಿಂತು ಮಾತನಾಡುತ್ತಿದ್ದರು. ನಾವು ೀವಿಯ ಮಕ್ಕಳಂತೆ ಅವರನ್ನು ಹಿಂಬಾಲಿಸಿ ಮುತ್ತಿ ತು ಅಂತೂ ಅವರನ್ನೂ ಬಸ್ಸತ್ತಿಸುತ್ತಿದ್ದೆವು.

ಮ್ಮೆ ಬಸ್ಸಾಂಡಿನಲ್ಲಿ ಸಿಕ್ಕ ನನ್ನ ಸಹಪಾಠಿ, ಡ್ರೈವರ್, ರ್‌ಗಳ ಜೊತೆಯಲ್ಲೂ ಅವರ ಸಂಬಂಧಿಯಂತೆ ನಾಡಿ ಅವರ ಮನಸ್ಸು ಗೆದ್ದಿದ್ದರು. ಅನಂತರ ಅಲ್ಲಿ ಸಿಕ್ಕುತ್ತಿದ್ದ ಅವರು ಕಿ.ರಂ. ಬಗ್ಗೆ ಕೇಳುತ್ತಿದ್ದರು. ಯಾರನ್ನೇ - ನಾವು ಕಿ.ರಂ.ಗೆ ಪರಿಚಯ ಮಾಡಿಕೊಡಬಹುದಿತ್ತು.

ಾರಿ ಲಂಕೇಶ್ ಹೊಸ ಪತ್ರಿಕೆ ತಂದಾಗ ಅದರ ಡೆ ಕಾರ್ಯಕ್ರಮಕ್ಕೆ ನಾವು ಶಿವಮೊಗ್ಗದಿಂದ 'ಧನ್ವಂತರಿ ' ಎಂಬ ನಾಟಕ ತೆಗೆದುಕೊಂಡು ಹೋಗಿದ್ದೆವು. ಲ್ಲಿ ಹರಿಕಥೆ ದಾಸನ ಪಾತ್ರ ಮಾಡಿದ್ದ ನನ್ನನ್ನು ಿ ನಕ್ಕ ಕಿ.ರಂ. "ಚಂದ್ರೇಗೌಡ್ರೇ ಯಾಕೆ ನೀವು ಹರಿ ಶುರುಮಾಡಬಾರ್ದು? ನಶಿಸಿ ಹೋಗ್ತಾಯಿರೋ ಜೀವಕೊಟ್ಟಂಗೂ ಆಗುತ್ತೆ ಮತ್ತೆ ನಿಮ್ಮ ಜೀವನಾನು ಮುತ್ತೆ" ಎಂದು ಅದೇ ಹಳ್ಳಿಗನ ಮುಗ್ಧ ನಗುವನ್ನು ು ತುಂಬಾ ನಕ್ಕಿದ್ದರು.

ಾಗಮಂಗಲದಲ್ಲಿ ನಡೆದ ತಾಲ್ಲೂಕು ಸಾಹಿತ್ಯ ಳನಕ್ಕೆ ಕಿ.ರಂ. ಅವರನ್ನು ಕರೆಸಿದ್ದೆ. ನಮ್ಮ ತಾಲ್ಲೂಕಿನವ ರಾಮಚಂದ್ರ ಶರ್ಮರ ಕಾವ್ಯ ಕುರಿತು ಮಾತನಾಡಲು ಬಿಟ್ಟರೆ ಇನ್ನಾರಿಗೂ ಸಾಧ್ಯವಿಲ್ಲವೆಂದು ಒಂದು ಅವರಿಗೆ ಫೋನ್ ಮಾಡಿದೆ. ಅದು ಬಿಟ್ಟರೆ ಅವರಿಗೆ ನ ಪತ್ರಿಕೆಯನ್ನೂ ಕಳಿಸಿರಲಿಲ್ಲ. ಆದರೂ ನಟರಾಜ್ ಯಾರ್ ಜೊತೆ ಬಂದರು. ನನ್ನಂಥವರಿಗೇ ಇನ್ನೂ ರ ಕಾವ್ಯ ಅರ್ಥವಾಗಿಲ್ಲ, ಇನ್ನ ನಾಗಮಂಗಲದ ಅರ್ಥವಾಗುವುದುಂಟೇ? ಆದರೂ ಕಿ.ರಂ. ಅದ್ಯಾವು ಲೆಕ್ಕಿಸದೆ ಎಂದಿನ ಸ್ಫೂರ್ತಿಯಲ್ಲಿ ಮಾತನಾಡಿದರು.

"ನಾನು ಧಾರವಾಡಕ್ಕೆ ಹೋಗಬೇಕಿದೆ. ಅದಾಗಲೇ ಲ್ಲಿ ನನ್ನ ಸೀಟ್ ಬುಕ್ಕಾಗಿದೆ. ಅದನ್ನ ತಿಪಟೂರಿನಲ್ಲೋ ಾ ಅರಸೀಕೆರೆಯಲ್ಲೋ ಹಿಡಿದು ನನ್ನ ಸೀಟಿನಲ್ಲಿ ಗಿಬಿಡಬೇಕು" ಎಂದು ಹೊರಡಲನುವಾದರು. ನನಗೆ ರ್ಚವಾಯ್ತು. ಇನ್ನಾರೇ ಆಗಿದ್ದರೂ ಇಂತಹ ದರೆಯನ್ನು ತೆಗೆದುಕೊಳ್ಳದೆ, ಆಹ್ವಾನ ಪತ್ರಿಕೆಯನ್ನೂ ದ ನಮಗೆ ಸರಿಯಾಗಿ ಕೈಕೊಡುತ್ತಿದ್ದರು. ಆದರೆ ಶರ್ಮರ ಕಾವ್ಯದ ಬಗ್ಗೆ ಅರ್ಥವಾಗದ ಜನಕ್ಕೆ ಸಲು ತೆಗೆದುಕೊಂಡ ಶ್ರಮನೋಡಿ ದಂಗುಬಡಿಯು ಯಿತ್ತು.

ಅವರು ಹೊರಟ ಗಡಿಬಿಡಿಯಲ್ಲಿ ಅವರಿಗೆ ಕೊಟ್ಟ ಂಟೋ, ಗಂಧದ ಹಾರ, ಶಾಲು ಎತ್ತ ಹೋದವೋ ೇ? ಅಂತೂ ಬೆಂಗಳೂರಿಂದ ಹೊರಟ ರೈಲನ್ನು ಮಧ್ಯದಲ್ಲಿ ಹಿಡಿದು ತಮ್ಮ ಕಾಯ್ದಿರಿಸಿದ ಜಾಗ ಕುವ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಳ್ಳದೆ ದುವಾಗಿಯೇ ಹೊರಟ ಕಿ.ರಂ. ಕೈಬೀಸಿದ್ದು ಬದುಕಿಗೆ ಯ ಹೇಳುವಂತಹ ಕಡೆಯ ನೋಟ ಎಂಬುದು ಹೇಗೆ ಗೊತ್ತಾಗಬೇಕು.

ಬೆನಸಿಕೊಂಡಷ್ಟೂ ಜೀವ ಹಿಂಡುವ ಇಂತಹ ಅನೇಕ ಗಗಳು ಈಗ ಬೆನ್ನ ಹತ್ತಿವೆ. ●

ಮಾಧಾನ ತಂದಿತ್ತು. ಬಹುಶಃ ಪ್ರಶ್ನಿಸುವ ಸಮಯ ಗಿರಲಿಲ್ಲ.

ಏನೇ ಆಗಲಿ ಇದೊಂದು ಸೂಕ್ಷ್ಮ ವಿಚಾರ. ರೀತಿಯಲ್ಲಿ ನಾಸ್ತಿಕವಾದಿಯೊಬ್ಬರ ನಂಬಿಕೆಯು ಯೂ ಹೌದು. ಬದುಕಿದ್ದಾಗ ಪ್ರತಿಪಾದಿಸುತ್ತಿದ್ದ ಕೆ-ವಿಚಾರಗಳೆಲ್ಲಾ ದೇಹ ಸ್ತಬ್ಧವಾಗುವ ಗಳಿಗೆಯಲ್ಲೇ ಅಪ್ರಸ್ತುತವಾಗುವುದು ಸೋಜಿಗ ಸುತ್ತದೆ.

ಇದಕ್ಕೊಂದೇ ಪರಿಹಾರ

ವಿಚಾರವಾದಿಗಳು, ಜಾತಿ, ಧರ್ಮ ಸಂಪ್ರದಾಯಗಳನ್ನ ರಿಸಿ ಬದುಕು ನಡೆಸುವವರು, ತಮ್ಮ ನಿರ್ಜೀವ ದ ಮೇಲೂ ಸಂಪ್ರದಾಯ ಇತ್ಯಾದಿಗಳು ಲಂಗ್ಯ ಸಾಧಿಸಲು ಅವಕಾಶ ಸಿಗದಂತೆ ದಿಕೊಳ್ಳಬೇಕಲ್ಲವೇ?

ನಾವೀಗ ಯಾವುದೇ ವಯಸ್ಸಿನಲ್ಲಿರಲಿ, ಾನಂತರ ಏನೇನು ನಡೆಯಬೇಕೆಂಬುದನ್ನು ಆಪ್ತರಿಗೆ ಇಟ್ಟಿರುವುದು ಸರಿ ಅಲ್ಲವೇ?

ಕನ್ನಡ ಸಾಂಸ್ಕೃತಿಕ ಜಗತ್ತಿನಲ್ಲಿ 'ಸಂಸ್ಕಾರ'ದ್ದು ಹಳೆಯ ್ಯ, ಜಾತಿಭ್ರಷ್ಟ ನಾರಣಪ್ಪ ಸತ್ತಾಗ ಅವನ ಸಂಸ್ಕಾರಕ್ಕೆ ಗೆ ಸಂಪ್ರದಾಯವಾದಿಗಳೇ ಹೊರಡಬೇಕಾಗಿ ತ್ತವೆ. ಆದರೆ ಕಾಲ ಬದಲಾಗಿದೆ

ನಮಗೀಗ ಸಂಪ್ರದಾಯ ವಿರೋಧಿ ಮದುವೆಗಳ ಸಿದ್ಧಿಸಿದೆ. ಸರಳ ಮದುವೆ, ರಿಜಿಸ್ಟರ್ ಮದುವೆ, ತ್ರ, ಮಾಂಗಲ್ಯಗಳ ವಿಧಾನಗಳ ಆಯ್ಕೆ ನಮಗಿದೆ. ರೀತಿ ಅಂತ್ಯಸಂಸ್ಕಾರ ಕುರಿತಂತೆಯೂ ಒಂದು ದಾಯ ವಿರೋಧಿ ವಿಧಾನ ಬೇಕೆನಿಸುತ್ತಿದೆ ಅಲ್ಲವೇ?

● ಪಾರ್ವತೀಶ

ಮತ್ತೆ ಪಟ್ಟಾಭಿಯವರ "ಕಿರಿಕಿರಿ"

ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಇಂಗ್ಲಿಷ್ ಅಧ್ಯಾಪಕ ಪಟ್ಟಾಭಿರಾಮ ಸೋಮಯಾಜಿ, ಕಳೆದ ವಾರ, ಮತ್ತೆ ಸಂಘ ಪರಿವಾರವನ್ನು ಕೆರಳಿಸಿದ್ದಾರೆ. ಎಬಿವಿಪಿಗೆ ಸೇರಿದ ಕಾಲೇಜು ವಿದ್ಯಾರ್ಥಿಗಳು ಅವರ ವಿರುದ್ಧ ಒಂದು ದಿನದ ಬಲಾತ್ಕಾರದ ತರಗತಿ ಬಂದ್ ನಡೆಸಿದ್ದಾರೆ. ಕಾಲೇಜು ಪ್ರಿನ್ಸಿಪಾಲರು ಪಟ್ಟಾಭಿಯವರಿಗೆ ತನ್ನ 'ಕೃತ್ಯ'ದ ಕುರಿತು ವಿವರಣೆ ನೀಡುವಂತೆ ಬರಹ ಮೂಲಕ ಕೇಳಿ ಪಟ್ಟಾಭಿಯವರ ವಿವರಣೆಯನ್ನು ಪಡೆದುಕೊಂಡು ಅದನ್ನು ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ಫಾರ್ವರ್ಡ್ ಮಾಡಿದ್ದಾರೆ. ಉಪಕುಲಪತಿಗಳು ಅದನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ಮುಂದೆ ಇಡಲಾಗುವುದು ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಪಟ್ಟಾಭಿ ಈಗ ತಾನು ಪಾಠ ಮಾಡುತ್ತಿರುವ ಕಾಲೇಜಿನ ಪ್ರಿನ್ಸಿಪಾಲರು ಮತ್ತು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಬಗೆಹರಿಸ ಬೇಕಾಗಿರುವ ಒಂದು ಸಮಸ್ಯೆಯಾಗಿದ್ದಾರೆ. ಮಂಗಳೂರಿನಲ್ಲಿ ಸಂಘ ಪರಿವಾರದ ರಾಜಕೀಯವನ್ನು ವಿರೋಧಿಸುವ ದುಸ್ಸಾಹಸಕ್ಕೆ ತೊಡಗಿದಂದಿನಿಂದ, ಯಾಕೆ, ಅದಕ್ಕೂ ಮೊದಲು ಕೊಜೆಂಟ್ರಿಕ್ಸ್ ಎಂಬ ಅಮೆರಿಕದ ದಗಲ್ಬಾಜಿ ಕಂಪನಿಯ ವಿರುದ್ಧ ದನಿ ಎತ್ತಿದಂದಿನಿಂದ ಪಟ್ಟಾಭಿ, ವಿಶ್ವವಿದ್ಯಾಲಯದ "ಸಂಬಂಧಪಟ್ಟವರಿಗೆ" ಒಂದು ಸಮಸ್ಯೆಯಾಗಿದ್ದಾರೆ. ಬಡವರ ಹಸಿವಿನ ಹಾಗೆ ಪಟ್ಟಾಭಿಯವರ ಈ ಕಿರಿಕಿರಿ; ಅದು ಮುಗಿಯುವುದಂತೆಯೇ ಇಲ್ಲ.



ವಿಚಿತ್ರವೆಂದರೆ ಈ ಕಿರಿಕಿರಿ ಪಟ್ಟಾಭಿ ತಾನಾಗಿ ಮೈಮೇಲೆ ಎಳೆದುಕೊಂಡದ್ದಲ್ಲ. ದೇಶದ ಕಾನೂನನ್ನಾಗಲೀ, ಸಮಾಜದ ಶಿಷ್ಟಾಚಾರವನ್ನಾಗಲೀ ಅವರು ಯಾವತ್ತೂ ಮೀರಿ ವರ್ತಿಸಿಲ್ಲ, ಹಾಗಿದ್ದೂ ತನ್ನ ಬಗ್ಗೆ ಮೇಲಿನವರಿಗೆ ವಿವರಣೆ ಕೊಡಬೇಕಾದ ಅನಿವಾರ್ಯತೆಯನ್ನು ಯೂನಿವರ್ಸಿಟಿ ಕಾಲೇಜಿನಲ್ಲಿ ಪಟ್ಟಾಭಿ ಇದೀಗ ಮತ್ತೆ ಎದುರಿಸುತ್ತಿದ್ದಾರೆ. ಮೊನ್ನೆ, ಅಂದರೆ ಇದೇ ಆಗಸ್ಟ್ 9, ಸೋಮವಾರದಂದು ಪಟ್ಟಾಭಿ ಮಂಗಳೂರಿನಲ್ಲಿ ಪಾಪ್ಯುಲರ್ ಫ್ರಂಟ್ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದರು. ಅವರ ಮೇಲೆ ಹೊರಿಸಲಾಗಿರುವ ಆರೋಪ ಕೂಡ ಇದೇ. ಆ ದಿನ ಕಾಲೇಜಿಗೆ ವರ್ಕಿಂಗ್ ಡೇ. ಆದರೆ ಸೋಮಯಾಜಿ ಭಾಷಣ ಮಾಡಿದ್ದು ಅವತ್ತು ಸಂಜೆ 5.30 ರ ಸುಮಾರಿಗೆ. ಅದೊಂದು ರಹಸ್ಯ ಸಭೆಯೂ ಆಗಿರಲಿಲ್ಲ, ಮಂಗಳೂರು ಜಿಲ್ಲಾಧಿಕಾರಿಗಳ ಕಚೇರಿಯ ಎದುರು, ಸಾಕಷ್ಟು ಪೊಲೀಸು ಬಂದೋಬಸ್ತಿನಲ್ಲಿ, ಸೂಕ್ತ ಪರವಾನಗಿಯೊಡನೆ ನಡೆದ ಸಾರ್ವಜನಿಕ ಸಭೆ ಅದು. ದೇಶದಲ್ಲಿ ಇತ್ತೀಚೆಗೆ ಮಾಲೆಗಾಂವ್, ಅಜ್ಮೇರ್ ದರ್ಗಾ, ಹೈದರಾಬಾದಿನ ಮಕ್ಕಾ ಮಸೀದಿ, ಸಮ್ಝೋತಾ ಎಕ್ಸ್‌ಪ್ರೆಸ್, ಗೋವಾ ಮೊದಲಾದ ಕಡೆಗಳಲ್ಲಿ ನಡೆದ ಬಾಂಬ್ ಸ್ಫೋಟಗಳ ಆರೋಪಿಗಳ ವಿಚಾರಣೆ ತ್ವರಿತವಾಗಿ ನಡೆದು ಅಪರಾಧಿಗಳಿಗೆ ಶೀಘ್ರದಲ್ಲಿ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಲು ಏರ್ಪಡಿಸಿದ್ದ ಸಭೆ ಅದು. ಅದರಲ್ಲಿ ಭಾಗವಹಿಸುವುದರ ಮೂಲಕ ಪಟ್ಟಾಭಿ ದೇಶದ ಯಾವ ಕಾನೂನನ್ನು ಉಲ್ಲಂಘಿಸಿರಲಿಲ್ಲ, ವಾಸ್ತವವಾಗಿ ಅದು ಅವರ ಸಂವಿಧಾನ ದತ್ತವಾದ ಹಕ್ಕು. ಆದರೂ ವಿಶ್ವವಿದ್ಯಾಲಯ ಕಾಲೇಜಿನ ಎಬಿವಿಪಿ ಘಟಕ, ಕಾಲೇಜು ಪ್ರಿನ್ಸಿಪಾಲರಿಗೆ "ಕರ್ತವ್ಯದ ಅವಧಿಯಲ್ಲೇ ಪಾಪ್ಯುಲರ್ ಫ್ರಂಟ್‌ನ ಸಭೆಯಲ್ಲಿ ಭಾಗವಹಿಸಿ ಭಾಷಣ ಮಾಡಿದ್ದಾರೆ" ಎಂದು ಪಟ್ಟಾಭಿಯವರ ವಿರುದ್ಧ ತಾ. 10.8.10 ರಂದು ಲಿಖಿತ ದೂರು ನೀಡಿತು. ಎತ್ತು ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು ಎಂದ ಹಾಗೆ ಪ್ರಿನ್ಸಿಪಾಲರು, ಆ ದೂರನ್ನು ಸ್ವೀಕರಿಸಿ, ಪಟ್ಟಾಭಿಯವರಿಂದ ಆ ಬಗ್ಗೆ ಲಿಖಿತ ವಿವರಣೆ ಕೇಳಿದರು. ಪಟ್ಟಾಭಿ ಆ ಬಗ್ಗೆ ಸೂಕ್ತ ವಿವರಣೆಯನ್ನು ಅದೇ ದಿನವೇ ಕೊಟ್ಟಿದ್ದಾರೆ.

ಆದರೂ ಪಟ್ಟಾಭಿಯವರ ವಿರುದ್ಧ ಕಾಲೇಜು 'ಸೂಕ್ತ ಕ್ರಮ' ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ, ಎಬಿವಿಪಿ ಬಲಾತ್ಕಾರವಾಗಿ ತರಗತಿಗಳನ್ನು ಬಂದ್ ಮಾಡಿತು. ಇದನ್ನು ವಿರೋಧಿಸಿದ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಎಂಬ ಸಂಘಟನೆಯ ಮುಸ್ಲಿಮ್ ವಿದ್ಯಾರ್ಥಿಗಳ ಮೇಲೆ ಎಬಿವಿಪಿಯ ವಿದ್ಯಾರ್ಥಿಗಳು ಕೈಮಾಡಿದರು; ಜೊತೆಗೆ ಶಿಕ್ಷಣ ಕ್ಷೇತ್ರದ ಖಾಸಗೀಕರಣ, ವಿದೇಶಿ ಬಂಡವಾಳ ಹೂಡಿಕೆ ಮುಂತಾದವುಗಳನ್ನು ಪ್ರತಿಭಟಿಸುವ ಕರಪತ್ರಗಳನ್ನು ಹಂಚುತ್ತಿದ್ದ ಎಸ್‌ಎಫ್‌ಐ ಸಂಘಟನೆಯ ಹುಡುಗರಿಗೂ ಹೊಡೆದರು. ಆ ವೇಳೆಗೆ ಕಾಲೇಜಿನ ಆವರಣದೊಳಗೆ ಧಾವಿಸಿ ಬಂದ ಪೊಲೀಸರು, ಅಲ್ಲಿದ್ದ ಮುಸ್ಲಿಮ್ ಹುಡುಗರನ್ನೆಲ್ಲ ಗದರಿಸಿ ಕಾಂಪೌಂಡಿನ ಹೊರಗೆ ಹೋಗಲು ಹೇಳಿದರು.

ಪಟ್ಟಾಭಿಯವರಿಗೆ ಇದನ್ನು ನೋಡಿ ಸುಮ್ಮನಿರಲು ಸಾಧ್ಯವಾಗಲಿಲ್ಲ. "ನೀವು ಈ ಹುಡುಗರನ್ನು ಮಾತ್ರ ಯಾಕೆ ಹೊರಗೆ ಕಳುಹಿಸುತ್ತಿದ್ದೀರಿ? ಇವರು ಈ ಕಾಲೇಜು ವಿದ್ಯಾರ್ಥಿಗಳು. ಹೊರಗೆ ಕಳುಹಿಸುವುದಾದರೆ ನೀವು ಎಲ್ಲರನ್ನೂ ಕಳುಹಿಸಿ, ಅವರನ್ನೂ ಕಳುಹಿಸಿ" ಎಂದು ಎಬಿವಿಪಿ ವಿದ್ಯಾರ್ಥಿಗಳ ಗುಂಪನ್ನು ತೋರಿಸಿದರು. ಆಗ ಪೊಲೀಸರು ಸ್ವಲ್ಪ ಮೆತ್ತಗಾದರು. ಎಬಿವಿಪಿ ವಿದ್ಯಾರ್ಥಿಗಳಿಂದ ಪೆಟ್ಟು ತಿಂದ ಮುಸ್ಲಿಂ ಹುಡುಗರಲ್ಲಿ ಕೆಲವರು ಗಾಯಗೊಂಡಿದ್ದರು. ಆದರೂ ಪೊಲೀಸರ ಕಣ್ಣಲ್ಲಿ ಅವರೇ ಅಪರಾಧಿಗಳಾಗಿದ್ದರು. ಪೆಟ್ಟು ಕೊಟ್ಟವರೇ ಪೊಲೀಸರಿಗೆ ದೂರು ಕೊಡುವುದು ಮತ್ತು ಆಸ್ಪತ್ರೆಗೆ ದಾಖಲಾಗುವುದು ಕರಾವಳಿಯಲ್ಲಿ ಮಾಮೂಲು ವಿದ್ಯಮಾನ. ಯೂನಿವರ್ಸಿಟಿ ಕಾಲೇಜಿನಲ್ಲಿಯೂ ಮೊನ್ನೆ ಹಾಗೆಯೇ ಆಯಿತು. ಮುಸ್ಲಿಮ್ ಹುಡುಗರಿಗೆ ಕಾಲೇಜು ಆವರಣದೊಳಗೆ ಹೊಡೆದ ಹುಡುಗರು 'ಅಡ್ಮಿಟ್' ಆಗಲು ಕಾಲೇಜಿನ ಪಕ್ಕದಲ್ಲಿಯೇ ಇರುವ ವೆನ್ಲಾಕ್ ಆಸ್ಪತ್ರೆಗೆ ಓಡಿದರು. ಆದರೆ ಆಸ್ಪತ್ರೆಯ ಗೇಟಿನಲ್ಲೇ ಪಾಂಡೇಶ್ವರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಇವರನ್ನು ಹಿಡಿದು ಠಾಣೆಗೆ ಒಯ್ದರು. ಮಂಗಳೂರಿನ ಪೊಲೀಸರು ನ್ಯಾಯವಾಗಿ ಕರ್ತವ್ಯ ನಿರ್ವಹಿಸಿದ ಅಪರೂಪದ ಪ್ರಸಂಗಗಳಲ್ಲಿ ಇದೂ ಒಂದು. ಯೂನಿವರ್ಸಿಟಿ ಕಾಲೇಜಿನಲ್ಲಿ ಎಬಿವಿಪಿ ಪ್ರೇರಿತ ತರಗತಿ ಬಂದ್‌ನ ನಂತರ ಕಳೆದ ವಾರಾಂತ್ಯದವರೆಗೆ ಭಾರೀ ಪೊಲೀಸು ಬಂದೋಬಸ್ತಿನಲ್ಲಿ ಕಾಲೇಜಿನ ಪಾಠ ಪ್ರವಚನ ನಡೆದಿದೆ.

ಮಂಗಳೂರು ಯೂನಿವರ್ಸಿಟಿ ಕಾಲೇಜಿನಲ್ಲಿ ಈಗ ಎಬಿವಿಪಿ ಪ್ರಬಲ ವಿದ್ಯಾರ್ಥಿ ಸಂಘಟನೆಯಾಗಿ ಬೆಳೆದು ನಿಂತಿದೆ. ಪಟ್ಟಾಭಿಯವರನ್ನು ಟಾರ್ಗೆಟ್ ಮಾಡಿಕೊಂಡು, ತರಗತಿಗಳ ಹೊರಗೆ ಗಲಾಟೆ ಮಾಡುವುದು ಹಾಗೂ ಮುಸ್ಲಿಮ್ ವಿದ್ಯಾರ್ಥಿಗಳನ್ನು ಅವಮಾನಿಸುವುದು, ಆ ಕಾಲೇಜಿನ ವರಾಂಡಗಳಲ್ಲಿ ಎಬಿವಿಪಿಯ ಪ್ರತಿನಿತ್ಯದ ಕಾರ್ಯಕ್ರಮವಾಗಿದೆ. ಪಟ್ಟಾಭಿ ಪಾಪ್ಯುಲರ್ ಫ್ರಂಟ್‌ನ ಸಭೆಯಲ್ಲಿ ಭಾಷಣ ಮಾಡಿದ ದಿನ ಕೂಡ ಎಬಿವಿಪಿ ವಿದ್ಯಾರ್ಥಿಗಳು, ಕಾಲೇಜು ಆವರಣದೊಳಗೆ, ಮುಸ್ಲಿಮ್ ವಿದ್ಯಾರ್ಥಿಗಳನ್ನು ಥಳಿಸಿದ್ದರು. ಇದನ್ನು ಕಣ್ಣಾರೆ ಕಂಡ ಪಟ್ಟಾಭಿ ಆ ಬಗ್ಗೆ ಸಂಬಂಧಪಟ್ಟವರಿಗೆ ಲಿಖಿತ ದೂರು ಸಹ ಕೊಟ್ಟಿದ್ದರು. ಈ ಅಧಿಕ ಪ್ರಸಂಗವೆಲ್ಲ ಪಟ್ಟಾಭಿಯವರಿಗೆ ಯಾಕೆ ಬೇಕು ಎಂದು ಯಾರಿಗಾದರೂ ಅನ್ನಿಸುವುದು ಸಹಜವೇ. ಆದರೆ ಕಾಲೇಜು ಆವರಣದೊಳಗೆ ಎಬಿವಿಪಿಯಂತಹ ಸಂಘಟನೆ ಅಸಹಾಯಕ ವಿದ್ಯಾರ್ಥಿಗಳ ಮೇಲೆ ಗುಂಪು ಹಲ್ಲೆ ನಡೆಸುವುದು ಸಹಜವೋ? ನ್ಯಾಯವೋ? ಎಂಬ ಪ್ರಶ್ನೆಯನ್ನು ಸಜ್ಜನರು ಇನ್ನಾದರೂ ಕೇಳಿಕೊಳ್ಳಬೇಕು. ಪಟ್ಟಾಭಿ, ಮಂಗಳೂರಿನ ಪಾಪ್ಯುಲರ್ ಫ್ರಂಟ್‌ನ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ, "ಹಿಂದೂ ಭಯೋತ್ಪಾದಕರ ಬಗ್ಗೆಯೂ ಸೂಕ್ತ ಕ್ರಮ ತೆಗೆದುಕೊಂಡು ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎನ್ನುವ ಸಂವಿಧಾನದ ತತ್ವವನ್ನು ಎತ್ತಿ ಹಿಡಿಯಬೇಕು" ಎಂದು ಹೇಳಿದ್ದು ಮತ್ತು ತನ್ನದೇ ಕಾಲೇಜಿನ ಆವರಣದಲ್ಲಿ ಎಬಿವಿಪಿ ನಡೆಸಿದ ಹಿಂಸಾಕೃತ್ಯಗಳನ್ನು ವಿರೋಧಿಸಿದ್ದು, ಮೂಲಭೂತವಾಗಿ ಒಂದೇ ಬಗೆಯ ಕ್ರಿಯೆ. ಅವರ ಈ ಕಾಳಜಿ ಕಾಲೇಜಿನ ಪ್ರಿನ್ಸಿಪಾಲರು ಮತ್ತು ವಿಶ್ವವಿದ್ಯಾಲಯಕ್ಕೆ "ಸಮಸ್ಯೆ" ಅನ್ನಿಸಕೂಡದು; ಸಮಾಜ ಇದನ್ನು "ಕಿರಿಕಿರಿ" ಎಂದು ಭಾವಿಸಕೂಡದು. ನ್ಯಾಯವಿಲ್ಲದ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ. ಪೊಲೀಸು ಬಂದೋಬಸ್ತಿನಲ್ಲಿ ಕಾಲೇಜು ತರಗತಿಗಳು ನಡೆಯುವುದು ತರವಲ್ಲ. ಆದರೆ ಅದನ್ನು ತಪ್ಪಿಸಬೇಕಾದರೆ ಮಂಗಳೂರಿನಲ್ಲಿಯೂ, ವಿಶ್ವವಿದ್ಯಾಲಯ ಕಾಲೇಜು ಆವರಣದೊಳಗೂ ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ತತ್ವ ಜಾರಿಗೆ ಬರಬೇಕು. ಎಬಿವಿಪಿ ತನ್ನ ಹಿಂಸಾಕೃತ್ಯಗಳಿಗೆ ಯೂನಿವರ್ಸಿಟಿ ಕಾಲೇಜಿನಲ್ಲಿ ಪಡೆದುಕೊಳ್ಳುತ್ತಿರುವ ವಿನಾಯಿತಿಗಳು ತಕ್ಷಣ ನಿಲ್ಲಬೇಕು.

● ಜಿ. ರಾಜಶೇಖರ

ಜೀವಂತ ಕಲಾದೇವರು

ಕಿ.ರಂ. ತೀರಿಕೊಂಡರಾ?!
ನಂಬುವುದಿಲ್ಲ ನಾನು
ಬಂದ ಸುದ್ದಿ ಸುಳ್ಳಾಗಬೇಕು
ಕಿ.ರಂ. ತೀರಿಹೋದರಾ?
ನಂಬಲಾರೆ ನಾನು
ಜೀವಂತ ಕಲಾದೇವರವರು

ಶಬ್ದಗಳ ಸುಗಂಧ
ಅಕ್ಷರಗಳ ಮುಗುಳ್ನಗೆ
ಭಾಷೆಯೇ ರೂಪವಾಗಿ
ಮೆಲುಗಾಳಿ ಜುಮುರು ಮಳೆ
ಧಗೆಯಿರದ ದಿವಾಕರ
ಕನ್ನಡದ ಚಂದಿರ

ಸಾವೇ,
ಇಂಥವರ ಇನ್ನಿಲ್ಲವಾಗಿಸಿದೆಯಾ?
ನಿನಗೆ ಬರೋದಿಲ್ಲವೋ
ಬರಬಾರದ ಸಾವು?
ಕಾಲೆಡರಿ ಬೀಳಲ್ಲವೋ
ವಿಧಿಯ ಕೈಯಲಿ ನೀನು?

ಎಮ್ಮ ಕಂಗಳಲಿ ಕಣ್ಣೀರು ತಂದ
ನಿನ್ನ ಕಣ್ಣುಗಳು ನಾಶವಾಗುವುದ
ನಮ್ಮ ಕಣ್ಣು ಕಾಣಲ್ಲವೋ?

ಕಿ.ರಂ.ಭಾಷಣ
ಕಾವ್ಯ ಸಗ್ಗದ ಮೆಟ್ಟಿಲು
ಆಡಂಬರವಿರದೆ
ಅಲಂಕಾರವಿರದೆ
ಸರಳ ಹೃದಯಂಗಳಿಗೆ ಕಲಾ
ಸಮುದ್ರದಿ
ಅಲೆಗಳೆದುರು ಈಜುವುದನು
ಸುಂಕವಿಲ್ಲದೆ ಕಲಿಸಿಕೊಟ್ಟ
ಕಾವ್ಯಗುರು


ಕಾವ್ಯಲೋಕದ ವೇದಿಕೆಯಲಿ ನಿಂತು
ಭೂತಕ್ಕೆ ಮಾತು ಬರಿಸಿ
ವರ್ತಮಾನಕ್ಕೆ ರಭಸ ನೀಡಿ
ಭವಿಷ್ಯವ ಹಳಗಿಸಿದವರು

"ನನ್ನ ಕುರಿತು ಮಾತಾಡಿ,
ನನ್ನ ಕುರಿತು ಮಾತಾಡಿ" ಎಂದು
ದುಂಬಾಲು ಬೀಳುತ್ತಿದ್ದವು
ಭೂತ ವರ್ತಮಾನ ಭವಿಷತ್‌ಗಳು
ಅವರ್‍ಯಾವ ಕಾಲದ ಕುರಿತೇ
ಮಾತಾಡಲಿ
ಜೀವ ತುಂಬಿದ್ದು ಮಾತ್ರ
ಈ ಕಾಲಕ್ಕೆ

ನಿಸರ್ಗವೂ ಅರಿಯದ
ಮಾತುಗಾರಿಕೆಯ ಅಕ್ಷಯ ಪಾತ್ರೆ
ಕಿ.ರಂ.ತೀರಿಹೋದರೇ?
ನಂಬಲಾರೆ ನಾನು
ಜೀವಂತ ಕಲಾದೇವರವರು


ಮುಖಾಮುಖಿ ಗೆಲ್ಲಲಾರೆನೆಂದು
ಕರೆದ ಕಾರಣವನೂ ತಿಳಿಸದೆ
ಯಾರಿಗೂ ಸುಳಿವು ನೀಡದೆ
ದಾರಿಕಳ್ಳನಂತೆ ಕತ್ತಲಲಿ ಬಂದು
ಸಾವ ತಂದ ಸಾವೇ
ನಿಂಗೂ ಸಾವು ಬರೋದಿಲ್ಲವೇ?

ಕಿ.ರಂ. ತೀರಿಕೊಂಡರೇ?
ನಂಬುವುದಿಲ್ಲ ನಾನು
ಬಂದ ಸುದ್ದಿ ಸುಳ್ಳಾಗಬೇಕು
ಜೀವಂತ ಕಲಾದೇವರವರು.



● ಎಸ್.ಶಿವಲಿಂಗಂ

'ಮದನಿ ಬಂಧನ' ಒಂದು ಸಂಚಿನ ಕತೆ!



ಇವತ್ತು ಇಡೀ ದಕ್ಷಿಣ ಇಂಡಿಯಾದಲ್ಲೇ ಮದನಿ ಒಬ್ಬ ಪಾಪ್ಯುಲರ್ ಅಂಡ್ ಪವರ್‌ಫುಲ್ ಮುಸ್ಲಿಂ ನಾಯಕ. ಮದನಿಯ ರಾಜಕೀಯ ಪಕ್ಷವು ಕೇರಳದ ಪೊಲಿಟಿಕಲ್ ಈಕ್ವೇಷನ್‌ಗಳನ್ನೆಲ್ಲಾ ಬದಲಿಸಿಬಿಟ್ಟಿದೆ. ಪ್ರಸ್ತುತ ಅಲ್ಲಿ ಆರೆಸ್ಸೆಸ್ ಹಾಗೂ ಕಮ್ಯೂನಿಸ್ಟರ ಬೀದಿ ಕಾಳಗ ನಡೆದಿದೆ. ನಿತ್ಯ ಕೊಲೆಗಳಾಗುತ್ತಿವೆ. ಮತ್ತೊಂದೆಡೆ ಮದನಿಯ ಹಿಂದೆ ಲಕ್ಷಾಂತರ ಮುಸ್ಲಿಂ, ದಲಿತ, ಹಿಂದುಳಿದವರು, ಬಡವರು, ಕ್ರಿಶ್ಚಿಯನ್ನರು ಸೇರುತ್ತಿದ್ದಾರೆ. ಕಾಂಗ್ರೆಸ್, ಬಿಜೆಪಿಯಾದಿಯಾಗಿ ಎಲ್ಲರಿಗೂ ಈಗ ಮದನಿ ನುಂಗಲಾರದ, ಅರಗಿಸಿಕೊಳ್ಳಲಾಗದ ರಾಜಕೀಯ ನಾಯಕನಾಗಿ ಬೆಳೆದುಬಿಟ್ಟಿದ್ದಾರೆ.

ಮದನಿ ಈಗ ಬಂಧಿ

2008ರಲ್ಲಿ ಹಿಂದೂ ಟೆರರಿಸ್ಟರು ಅಥವಾ ಮುಸ್ಲಿಂ ಉಗ್ರರು ನಡೆಸಿರಬಹುದಾದ ಬೆಂಗಳೂರು ಸರಣಿ ಸ್ಫೋಟದಲ್ಲಿ ಮದನಿಯನ್ನು ಶಂಕಿತ ಆರೋಪಿಯನ್ನಾಗಿಸಲಾಗಿದೆ.

ಕರ್ನಾಟಕ ಪೊಲೀಸರು ಇದುವರೆಗೂ ನೂರಾರು ಮುಸ್ಲಿಂ ಯುವಕರನ್ನು ಬಂಧಿಸಿ ಟೆರರಿಸ್ಟ್ ಎಂದು ಮೀಡಿಯಾಗಳಲ್ಲಿ ಬಿಂಬಿಸುತ್ತಾ ಬಂದಿದ್ದಾರೆ. ಅಂಥವರ ಪೈಕಿ ಕೆಲವರಿಗೆ ನಿಜಕ್ಕೂ ಕೆಲ ಉಗ್ರ ಸಂಘಟನೆಗಳ ಸಂಪರ್ಕವಿದ್ದುದು ನಿಜವಾಗಿತ್ತು, ಉಳಿದಂತೆ ಬಹುತೇಕ ಬಂಧಿತರು ಅಮಾಯಕರಾಗಿದ್ದವರು. ರಾಜ್ಯ ಪೊಲೀಸ್ ಇಲಾಖೆಯಲ್ಲಿರುವ ಚೂರು ಅತ್ಯುತ್ಸಾಹ, ಎದ್ದು ಕಾಣುತ್ತಿರುವ ಮುಸ್ಲಿಂ ದ್ವೇಷ ಹಾಗೂ ಆಳುವ ಪಕ್ಷ ಕೋಮುವಾದಿ ಬಿಜೆಪಿಯಾಗಿರುವುದೇ ಇದಕ್ಕೆಲ್ಲಾ ಕಾರಣವಾಗಿದೆ.

ಆದರೆ ಮದನಿಯ ಬಂಧನ ಸಲೀಸಾದ ಪ್ರಕರಣವಲ್ಲ.

ಹೀಗೆ ಮದನಿಯನ್ನು ಬಾಂಬ್ ಸ್ಫೋಟದ ಕೇಸಿನಲ್ಲಿ ಫಿಕ್ಸ್ ಮಾಡುವ ಮೂಲಕ ಬೆಂಗಳೂರು ಪೊಲೀಸರು ಅತ್ಯಂತ ಕ್ಲಿಷ್ಟಕರವಾದ ಕೇಸೊಂದನ್ನು ತಮ್ಮ ಮೈಮೇಲೆಳೆದುಕೊಂಡಿದ್ದಾರೆ. ಮದನಿಯ ಬಂಧನ ರಾಜಕೀಯಪ್ರೇರಿತವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬಹುತೇಕ ಈ ಮದನಿ ಎಂಬ ಕಡುಬನ್ನು ರಾಜ್ಯ ಪೊಲೀಸರ ಗಂಟಲಲ್ಲಿ ತುರುಕುತ್ತಿರುವುದು ಹಿಂದೂ ಉಗ್ರ ಸಂಘಟನೆಗಳ ನಾಯಕರಿರಬಹುದು.

ಮದನಿಯನ್ನು ಬಂಧಿಸುವುದೆಂದರೆ ಯಾರೋ ತಬ್ಬಲಿ ಹುಡುಗನನ್ನು ಎಳೆತಂದು ಲಾಕಪ್‌ನಲ್ಲಿ ರುಬ್ಬುತ್ತಿದ್ದರಲ್ಲ ಹಾಗಲ್ಲ. ಅವರು ಕೇರಳ ರಾಜ್ಯದ ದೊಡ್ಡ ರಾಜಕೀಯ ಪಕ್ಷ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಯ ನಾಯಕ. ಶಕ್ತಿ ಸಾಮರ್ಥ್ಯದಲ್ಲಿ ಈ ಪಿಡಿಪಿಯು ಕರ್ನಾಟಕದ ಜೆಡಿಎಸ್‌ನಂತೆ ಎಂದುಕೊಳ್ಳಬಹುದು. ಈ ಮದನಿ ಭಾಷಣಕ್ಕೆ ಬಂದರೆ ಲಕ್ಷಾಂತರ ಜನ ಸೇರುತ್ತಾರೆ. ಪ್ರತಿಭಟನೆಗೆ ಕರೆ ನೀಡಿದರೆ ಅರ್ಧ ಕೇರಳ ಬಂದ್ ಆಗುತ್ತದೆ. ಸ್ವಂತ ಬಲದಲ್ಲಿ ಒಂದು ಪಾರ್ಲಿಮೆಂಟ್ ಅಥವಾ ಅಸೆಂಬ್ಲಿ ಸೀಟ್ ಗೆಲ್ಲಲಾಗದಿದ್ದರೂ ನೂರಾರು ವಿರೋಧಿ ಅಭ್ಯರ್ಥಿಗಳನ್ನು ಮದನಿ ಸೋಲಿಸಿದ್ದಾರೆ.

ಈ ಮಟ್ಟದ ಬಲಿಷ್ಠ ರಾಜಕೀಯ ನಾಯಕನೊಬ್ಬನಿಗೆ 'ನೀನು ಬೆಂಗಳೂರಿನ ಮೇಲೆ ಬಾಂಬ್ ಹಾಕಿದೆ' ಎಂದು ಆರೋಪಿಸಿ ಅರೆಸ್ಟು ಮಾಡಬೇಕೆಂದರೆ ಅದು ಸೈಕಲ್ ಕಳ್ಳನನ್ನು ಹಿಡಿದಂತಲ್ಲ.

ಮದನಿ ಬಗ್ಗೆ ಇಷ್ಟು ವಿವರ ಹೇಳಿದ್ದು ಅವರನ್ನು ವೈಭವೀಕರಿಸಲು ಅಲ್ಲ. ರಾಜ್ಯ ಪೊಲೀಸರ 'ಹಿಂದೂ ಕೋಮುವಾದಿ ಪೊಲೀಸ್ ರಾಜಕೀಯ' ಯಾವ ರೂಪ ಪಡೆಯುತ್ತಿದೆ ಎನ್ನಲು... ಈ ಕೇಸಿನ ಸಂಕೀರ್ಣತೆ ಬಗ್ಗೆ ಹೇಳಲು...

ಒಂದು ಉದಾಹರಣೆಯ ಮೂಲಕ ನೋಡೋಣ.

ಈ ಮದನಿಗೆ ಕೇರಳ ಸರ್ಕಾರ 'ಬಿ' ಕೆಟಗರಿ ಸೆಕ್ಯುರಿಟಿ ನೀಡಿದೆ. ಅಂದರೆ ದಿನದ 24 ಗಂಟೆ, ವಾರದ ಏಳೂ ದಿನ, ವರ್ಷವಿಡೀ ಮದನಿಯೊಂದಿಗೆ ಐವರು ಪೊಲೀಸರಿರುತ್ತಾರೆ. ಅವರ ಪೈಕಿ ಇಬ್ಬರು ಆಫೀಸರ್ ಗ್ರೇಡಿನವರು. ಮದನಿ ಎಲ್ಲಿಗೆ ಹೋದರೂ ಅವರಿದ್ದಲ್ಲಿಗೆ ಯಾರೇ ಬಂದರೂ ಅದು ಮೊದಲು ಸೆಕ್ಯುರಿಟಿ ಪೊಲೀಸರ ಗಮನಕ್ಕೆ ಬರುತ್ತದೆ.



ಇಂಥ ಮದನಿ ಒಂದು ಸಾರಿ ಕೊಡಗಿಗೆ ಬಂದು ಉಗ್ರಗಾಮಿ ನಜೀರ್‌ನನ್ನು ಭೇಟಿಯಾಗಿ ಬಾಂಬ್ ಹಾಕುವ ಸಂಚು ರೂಪಿಸಿ ಹೋಗಿದ್ದಾರೆಂದು ರಾಜ್ಯ ಪೊಲೀಸರು ಹೇಳುತ್ತಿದ್ದಾರೆ...

ಇದಕ್ಕೆ ಏನೆನ್ನುತ್ತೀರಿ?

ಪೊಲೀಸರನ್ನು ಪೊಲೀಸರಾಗಿಯೇ ಇರಲು ಬಿಟ್ಟರೆ ಇಂತಹ ಯಡವಟ್ಟುಗಳಾಗುವುದಿಲ್ಲ. ಅದರಬದಲು ರಾಜಕೀಯ ಲೆಕ್ಕಾಚಾರ, ಕೋಮುವಾದಿ ಅಜೆಂಡಾಗಳಿಗೆ ಒಂದು ಅಸ್ತ್ರವಾಗಿಸಿಕೊಂಡರೆ ಸುಸ್ತಾಗಿ ಬಸವಳಿಯುವವರು ಪೊಲೀಸರೇ ಆಗಿರುತ್ತಾರೆ.

ಆಗಲೇ ಇಂತಹ ಕಲ್ಪಿತ ಆರೋಪಗಳು ಚಾರ್ಜ್‌ಶೀಟ್‌ಗಳಾಗಿ ಬೆಳೆಯುತ್ತವೆ.

ಬಾಂಬ್ ಹಾಕಿದ್ದು ಇವನಾ? ಅವನಾ?

ಬೆಂಗಳೂರು ಪೊಲೀಸರು ಕೇರಳಕ್ಕೆ ಹೋಗಿ ಅಬ್ದುಲ್ ನಾಸರ್ ಮದನಿಯನ್ನು ಹಿಡಿದು ತರುವಾಗ,

'ನಾನು ಮತ್ತೆ ಕೇರಳಕ್ಕೆ ವಾಪಸ್ ಬರುವ ಸಾಧ್ಯತೆ ಕಡಿಮೆ' ಅಂತ ಮದನಿ ಹೇಳಿಕೆ ನೀಡಿಯೇ ಇಲ್ಲಿಗೆ ಬಂದಿರುವುದೊಂದು ಗಮನಾರ್ಹ ಸಂಗತಿ. ಬೆಂಗಳೂರು ಸರಣಿ ಸ್ಫೋಟದ 32ನೇ ಆರೋಪಿಯಾಗಿರುವ ಮದನಿಗೆ ಸದ್ಯದ ಭವಿಷ್ಯದಲ್ಲಿ ಜಾಮೀನು ಸಿಗುತ್ತದೋ ಇಲ್ಲವೋ ಅದು ಬೇರೆ ವಿಚಾರ. ಆದರೆ ಪೊಲೀಸರ ಶಿಕಾರಿಯಿಂದ, ಚೇಸ್‌ನಿಂದ ಮದನಿ ಬಚಾವಾಗುತ್ತಾರಾ? ಎಂಬುದೇ ಈಗಿನ ಪ್ರಶ್ನೆ.

"ನಾನು ಈ ಕೇಸಿನಲ್ಲಿ ನಿರ್ದೋಷಿ ಎಂದು ತೀರ್ಮಾನವಾದರೂ ಮರುಕ್ಷಣವೇ ಗುಜರಾತ್ ಸ್ಫೋಟ, ಅಮೆರಿಕಾದ 9/11 ಅವಳಿಗೋಪುರ ನಾಶದ ಕೇಸ್‌ಗಳಲ್ಲೂ ನನ್ನನ್ನು ಫಿಕ್ಸ್ ಮಾಡುತ್ತಾರೆ ಬಿಡಿ" ಎಂಬ ಮದನಿಯ ಹತಾಶ ಹೇಳಿಕೆಗಳನ್ನು ನಾವೊಮ್ಮೆ ಗಮನಿಸಲೇಬೇಕು.

ಇದು ಸಿಂಪಲ್ ಕೇಸ್ ಅಲ್ಲ, ಕೇವಲ ಸಿಸಿಬಿ ಪೊಲೀಸರ ತನಿಖೆ, ನಜೀರ್ ಎಂಬುವನ ಹೇಳಿಕೆಗಳಿಗೆ ಸೀಮಿತವಾಗಿ ನಡೆದಿರುವ ಮದನಿಯ ಬಂಧನವೂ ಅಲ್ಲ ಎಂಬುದು ಇತ್ತೀಚಿನ ಘಟನಾವಳಿಗಳಿಂದ ಗೊತ್ತಾಗುತ್ತಿದೆ.

ಕರ್ನಾಟಕದ ಕೆಲವು ಮೀಡಿಯಾಗಳು ಮದನಿಯನ್ನು ಈಗಾಗಲೇ ಟೆರರಿಸ್ಟರ ಲಿಸ್ಟಿಗೆ ಸೇರಿಸಿ ಅವರಿಗೆ ಶಿಕ್ಷೆಯಾಗುವುದನ್ನೇ ಕಾಯುತ್ತಿರುವಂತಿದೆ. ಅದೊಂದೆಡೆ ಇರಲಿ, ಆದರೆ ಈ ವಿಚಾರ ಅಷ್ಟು ಸಲೀಸಾಗಿಲ್ಲ. ಬಿಜೆಪಿ ಸರ್ಕಾರವಿರುವಾಗಲೇ 2008ರ ಜುಲೈ 25ರಂದು ಬೆಂಗಳೂರಿನ ಮಡಿವಾಳ, ಮೈಸೂರು ರಸ್ತೆ, ಆಡುಗೋಡಿ, ಕೋರಮಂಗಲ, ವಿಠಲ ಮಲ್ಯ ರಸ್ತೆ, ಲ್ಯಾಂಗ್‌ಫೋರ್ಡ್ ರೋಡ್ ಹಾಗೂ ರಿಚ್‌ಮಂಡ್ ಟೌನ್ ಈ ಏಳು ಕಡೆ Low inteneity ಬಾಂಬ್ ಸ್ಫೋಟಗಳಾದವು. ಎಂಟನೇ ಬಾಂಬ್ ಜುಲೈ 26ರಂದು ಕೋರಮಂಗಲದ ಫೋರಂಮಾಲ್ ಬಳಿ ಸ್ಫೋಟಕ್ಕೂ ಮೊದಲೇ ಪತ್ತೆಯಾಗಿ ಡಿಫ್ಯೂಸ್ ಆಯಿತು. ಇದೊಂದು ದೊಡ್ಡ ಸುದ್ದಿಯಾಗಿದ್ದಾಗಲೇ ಅದರ ಮಾರನೆಯ ದಿನವೇ ಬಿಜೆಪಿ ಆಡಳಿತವಿರುವ ಗುಜರಾತ್‌ನಲ್ಲೂ ಕೆಲ ಸ್ಫೋಟಗಳಾದವು. ಇದಕ್ಕೆ ಕೇವಲ ಒಂದು ತಿಂಗಳ ಹಿಂದೆ ಅಂದರೆ 2008ರ ಮೇನಲ್ಲಿ ರಾಜಸ್ಥಾನದ ಜೈಪುರದಲ್ಲೂ ಇದೇ ರೀತಿಯ ಸರಣಿ ಸ್ಫೋಟಗಳಾಗಿದ್ದವು.

ಮೇಲ್ನೋಟಕ್ಕೆ ಸಿಂಪಲ್ ಲಾಜಿಕ್ ಪ್ರಕಾರ ಹೇಳಬೇಕೆಂದರೆ ಕೋಮುವಾದಿ ಹಾಗೂ ಮುಸ್ಲಿಂ ದ್ವೇಷಿ ಬಿಜೆಪಿ ಸರ್ಕಾರಗಳಿದ್ದ ಈ ಮೂರು ರಾಜ್ಯಗಳಲ್ಲಿ ಜನರಿಗೆ ಪಾಠ ಕಲಿಸಲು ಮುಸ್ಲಿಂ ಉಗ್ರರು ಬಾಂಬ್ ಹಾಕಿದರೆಂದು ಹೇಳಿಬಿಡಬಹುದು. ಹಾಗೆಂದು ಅನೇಕರು ನಂಬಿಯೂ ಇದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಇನ್ನೊಂದು ಸಾಧ್ಯತೆಯೂ ಇತ್ತು.

ಅದು,

ಹಿಂದೂ ಭಯೋತ್ಪಾದಕ ಗುಂಪುಗಳೇ ತಮ್ಮ ಪಕ್ಷದ ಆಡಳಿತವಿರುವೆಡೆ (ಪರೋಕ್ಷ ಕುಮ್ಮಕ್ಕಿನೊಂದಿಗೆ!) ಬಾಂಬ್ ಸ್ಫೋಟಿಸಿ ಅದರ ಆರೋಪವನ್ನು ಮುಸ್ಲಿಮರ ಮೇಲೆ ಹೊರಿಸಿಬಿಡುವ ಸಾಧ್ಯತೆ!

ವಾಸ್ತವವಾಗಿ 2008ರ ಬೆಂಗಳೂರು ಹಾಗೂ ಗುಜರಾತ್ ಸ್ಫೋಟಗಳ ಹಿಂದೆ ಹಿಂದೂ ಭಯೋತ್ಪಾದಕ ಗುಂಪುಗಳ ಕೈವಾಡವಿರುವ ಬಗ್ಗೆಯೇ ಜನಸಾಮಾನ್ಯರು ಅನುಮಾನ ಪಟ್ಟಿದ್ದರು. ಈ ಅನುಮಾನವನ್ನು ತಣ್ಣಗಾಗಿಸುವ ಉದ್ದೇಶದಿಂದಲೇ ಇರಬೇಕು ಬೆಂಗಳೂರು ಪೊಲೀಸರು, ತಮ್ಮ ತನಿಖೆಯನ್ನು ನಿಧಾನಗೊಳಿಸಿಬಿಟ್ಟರು. ಜನ ನಿಧಾನವಾಗಿ ಇದನ್ನೆಲ್ಲಾ ಮರೆತಂತಾದಾಗ ಪೊಲೀಸರು ಚುರುಕಾದರು. ಆಶ್ಚರ್ಯ ಏನೆಂದರೆ ಅಷ್ಟರಲ್ಲಾಗಲೇ ಹಿಂದೂ ಭಯೋತ್ಪಾದಕರು ಹುಬ್ಬಳ್ಳಿ ಕೋರ್ಟ್‌ನಲ್ಲೇ ಬಾಂಬ್ ಸ್ಫೋಟಿಸಿದ್ದರು. ನಂತರ ಕೆಲ ಆರೆಸ್ಸೆಸ್‌ನವರು ಸಿಕ್ಕು ಬಿದ್ದರು. ಆಮೇಲೆ ಮಾಲೆಗಾಂವ್, ಹೈದರಾಬಾದ್‌ನ ಮೆಕ್ಕಾ ಮಸೀದಿ ಸ್ಫೋಟಗಳಲ್ಲೂ ಹಿಂದೂ ಟೆರರಿಸ್ಟರ ಕೈವಾಡವಿದ್ದ ಬಗ್ಗೆ ಸಾಕ್ಷಿ ಪುರಾವೆಗಳೂ ಸಿಕ್ಕವು. ಕರ್ನಲ್ ಪುರೋಹಿತ್, ಸಾಧ್ವಿ ಪ್ರಗ್ಯಾಸಿಂಗ್‌ರಂತಹ ಆರೆಸ್ಸೆಸ್ ಎಲಿಮೆಂಟುಗಳ ಬಂಧನವೂ ಆಯಿತು. ಆದರೆ ಬೆಂಗಳೂರು ಪೊಲೀಸರು ಅಪ್ಪಿತಪ್ಪಿಯೂ ಬೆಂಗಳೂರು ಸ್ಫೋಟದಲ್ಲಿ ಹಿಂದೂ ಭಯೋತ್ಪಾದಕರ ಕೈವಾಡ ಇದ್ದಿರಬಹುದಾ ಎಂದು ಅನುಮಾನ ಪಡಲೇ ಇಲ್ಲ. ಇವತ್ತಿನ ಟ್ರೆಂಡ್ ಏನಿದೆಯೋ ಅದೇರೀತಿ ಅಂದರೆ ಅನಿಷ್ಟಕ್ಕೆಲ್ಲಾ ಶನೇಶ್ವರನೇ ಕಾರಣ ಎನ್ನುವಂತೆ ಅವರು 'ಮುಸ್ಲಿಂ' ಆರೋಪಿಗಳಿಗಾಗಿ ಕಾಯುತ್ತಿದ್ದಂತಿತ್ತು.

RSS ಬಿತ್ತಿದ ಬೆಳೆ ಮದನಿ

ಈ ಮದನಿಯ ಹಿನ್ನೆಲೆ ಕುತೂಹಲಕಾರಿ. 1965ರಲ್ಲಿ ಅಬ್ದುಲ್‌ಸಮದ್ ಮಾಸ್ಟರ್‌ರ ಮಗನಾಗಿ ಹುಟ್ಟಿದ ಅಬ್ದುಲ್ ನಾಸರ್ ನಂತರ 'ಮದನಿ'ಯಾದರು. ಕೊಲ್ಲಂನ ಅರ್ರ್ಯಾಬಿಕ್ ಕಾಲೇಜಿನಲ್ಲಿ ಓದಿ ಪಡೆದ ಡಿಗ್ರಿಯೇ ಈ 'ಮದನಿ' ಎಂಬ ಪದ. ಮೊದಲು ಧಾರ್ಮಿಕ ಪ್ರವಚನ ನೀಡುತ್ತಾ ಕೊಲ್ಲಂ ಹಾಗೂ ತಿರುವನಂತಪುರಂ ಜಿಲ್ಲೆಗಳಲ್ಲಿ ಮದನಿ ಪ್ರಖ್ಯಾತರಾಗಿದ್ದರು. ಸೂಫಿಯಾ ಅವರ ಪತ್ನಿ. ಮುಂದೆ ಮದನಿ ಇಸ್ಲಾಮಿಕ್ ಸ್ವಯಂ ಸೇವಕ್ (ISS) ಸ್ಥಾಪಿಸಿದರು. ಮುಸ್ಲಿಂ ಯುವಕರಿಗೆ, ಆತ್ಮರಕ್ಷಣೆಯ ಮಾರ್ಷಿಯಲ್ ಆರ್ಟ್ಸ್ ಅನ್ನು ಕಲಿಸಿದರು.

ಇವತ್ತಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ದಲಿತ ಹಾಗೂ ಮುಸ್ಲಿಮರಿಗೂ ಇದರ ಅಗತ್ಯವಿದೆ ಬಿಡಿ.

1992 ರಲ್ಲಿ RSS ಭಯೋತ್ಪಾದಕರು ಬಾಂಬ್ ಸಿಡಿಸಿ ಮದನಿಯ ಕೊಲೆಗೆ ಯತ್ನಿಸಿದರು. ಮದನಿ ಪಾರಾದರಾದರೂ ಅವರ ಒಂದು ಕಾಲು ಹೋಯಿತು. ಅದೇ ಸಮಯದಲ್ಲಿ ಸರ್ಕಾರ ISS ಅನ್ನು ಬ್ಯಾನ್ ಮಾಡಿತು. ಆದರೆ RSS ಅನ್ನು ನಿಷೇಧಿಸಲಿಲ್ಲ. ಕೊಯಮತ್ತೂರು ಸ್ಫೋಟದ ಕೇಸ್‌ನಲ್ಲಿ ಪೊಲೀಸರು ಮದನಿಯನ್ನು ಸಿಕ್ಕಿಸಿದರಾದರೂ ಕೋರ್ಟ್‌ನಲ್ಲಿ ಸಾಬೀತು ಮಾಡಲಾಗಲಿಲ್ಲ. 2007 ರಲ್ಲಿ ಜೈಲಿನಿಂದ ಹೊರಬಂದ ಮದನಿ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ ಸ್ಥಾಪಿಸಿದರು. ಅದಕ್ಕೂ ಮುನ್ನ ಕೇರಳ ವಿಧಾನಸಭೆಯೇ ಮದನಿ ಬಿಡುಗಡೆಗೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಿತ್ತು.

ರಾಜಕೀಯ ಪಕ್ಷದ ಸ್ಥಾಪನೆ ಮದನಿಯ ಜೀವನದ ಪ್ರಮುಖ ಹಂತವಾಗಿತ್ತು. ಆತ ಆವೇಶಭರಿತ ಭಾಷಣ, ರೋಷಾವೇಶದ ಮಿಲಿಟೆಂಟ್ ಪ್ರತಿಕ್ರಿಯೆಗಳಿಂದ shift ಆಗಿ ಮುಖ್ಯವಾಹಿನಿಯ ರಾಜಕೀಯಕ್ಕೆ ಕಾಲಿರಿಸಿದ್ದ. ಸೈದ್ಧಾಂತಿಕವಾಗಿ ಬದಲಾಗಿದ್ದ. ಅದೊಂದು apolitical to political person ಆಗುವ ಪ್ರಕ್ರಿಯೆ. ಅಲ್ಲಿಂದಾಚೆಗೆ ಮದನಿಯ ಮಾತಿನ ಅತಿರೇಕಗಳು ಕಡಿಮೆಯಾದವು. ಅಷ್ಟರಲ್ಲಿ ಮದನಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದ್ದ ನಾಯಕ. ಸದಾಕಾಲ ಮೀಡಿಯಾಗಳು, ಪೊಲೀಸರ, ಗೂಢಚಾರರ ನಜರಿನಲ್ಲೇ ಇದ್ದವರು. ಹೀಗಿದ್ದಾಗಲೂ ಮದನಿ ತರದವರನ್ನು ಬೆಂಗಳೂರು ಬಾಂಬ್ ಸ್ಫೋಟದ ಕೇಸ್‌ನಲ್ಲಿ ಫಿಕ್ಸ್ ಮಾಡುವ ಸಂಚಿನ ಹಿಂದೆ ಕೆಲವು ತರ್ಕಗಳನ್ನು ಪಿಡಿಪಿಯ ಇತರ ನಾಯಕರು ಪ್ರತಿಪಾದಿಸುತ್ತಿದ್ದಾರೆ.

ಹಿಂದೂತ್ವವಾದಕ್ಕೆ ಮತ್ತೆ ಜನಬೆಂಬಲ ಗಳಿಸುವ ಪಿತೂರಿಯೂ ಅದರಲ್ಲೊಂದು ಎನ್ನಲಾಗಿದೆ. ನಾವೆಲ್ಲಾ ಗಮನಿಸುತ್ತಿರುವಂತೆ ಸಂಘ ಪರಿವಾರದ ಪ್ರಭಾವ ಈಗ ಮೊದಲಿನಷ್ಟು ಉಳಿದಿಲ್ಲ. ಅದು ಮತ್ತೆ ಚಿಗುರಬೇಕೆಂದರೆ



ಜನಸಾಮಾನ್ಯರಲ್ಲಿ ಮುಸ್ಲಿಂ ದ್ವೇಷ ಬೆಳೆಯಬೇಕು. ಅದು ಸಾಧ್ಯವಾಗಬೇಕೆಂದರೆ ಮುಸ್ಲಿಮರು ಬಾಂಬ್ ಸ್ಫೋಟಿಸುವಂತಹ ಸನ್ನಿವೇಶ ನಿರ್ಮಿಸಬೇಕು ಅಥವಾ ಹಿಂದೂ ಟೆರರಿಸ್ಟರೆ ಬಾಂಬ್ ಹಾಕಿ ಅದರ ಗೂಬೆಯನ್ನು ಮುಸ್ಲಿಮರ ತಲೆಗೆ ಕಟ್ಟುವುದು. ಹತಾಶ ಮುಸ್ಲಿಮರು ಪ್ರತೀಕಾರಕ್ಕಿಳಿದರೆ ಅದರಿಂದ ಹಿಂದೂ-ಮುಸ್ಲಿಂ ವಿಭಜನೆ ಇನ್ನಷ್ಟು ಹರಿತವಾಗಿ ಹಿಂದೂಗಳನ್ನೆಲ್ಲಾ ಬಿಜೆಪಿ ತೆಕ್ಕೆಗೆ ತರಬಹುದೆನ್ನುವ ಸಂಚು ಇದರ ಹಿಂದಿದೆ ಎನ್ನುತ್ತಿದ್ದಾರೆ ಪಿಡಿಪಿ ನಾಯಕರು.



ಪತ್ನಿ ಸೂಫಿಯಾ ಮೇಲೂ ಕೇಸ್?

ಮದನಿಯ ಪತ್ನಿ ಸೂಫಿಯಾರನ್ನು ಕೂಡ ಬೆಂಗಳೂರು ಸ್ಫೋಟದ ಆರೋಪಿಯಾಗಿಸಲು ಪೊಲೀಸರು ಬಯಸಿದ್ದಾರಾ?

ಆ ಸಾಧ್ಯತೆಯನ್ನು ನಿರಾಕರಿಸಲಾಗದು. ಯಾಕೆಂದರೆ ಆರೋಪಿ ನಜೀರ್ ತಾನೊಮ್ಮೆ ಸೂಫಿಯಾರೊಂದಿಗೆ ಫೋನ್‌ನಲ್ಲಿ ಮಾತಾಡಿದ್ದಾಗಿ ಹೇಳಿಕೆ ಕೊಟ್ಟಿದ್ದಾನೆ. ಹೆಣೆಯುವ ಉದ್ದೇಶ ಸರ್ಕಾರಕ್ಕಿದ್ದರೆ ಸೂಫಿಯಾ ಈ ಕೇಸಿನ 33ನೇ ಆರೋಪಿಯಾಗುವ ಸಾಧ್ಯತೆ ಇದ್ದೇ ಇದೆ. ಈ ಹಿಂದೆ ಮದನಿ ಜೈಲಿನಲ್ಲಿದ್ದಾಗ ವಿಚಾರಣೆ ಬೇಗ ಮುಗಿಸುವಂತೆ ಒತ್ತಡ ಹಾಕಲು ಒಂದು ಬಸ್ ಸುಡಲಾಗಿದೆ ಎಂತಲೂ ಪ್ರಚಾರವಾಯಿತು. ಸೂಫಿಯಾ ಹಾಗೂ ಉಗ್ರ ನಜೀರ್‌ರೇ ಅದಕ್ಕೆ ಕಾರಣ ಎಂದು ತಮಿಳುನಾಡು ಪೊಲೀಸರು ಆರೋಪಿಸಿದ್ದರು.

ಆದರೆ ನಡೆದ ಘಟನೆ ಏನಾಗಿತ್ತೆಂದರೆ, ಮದನಿಯ ಜಾಮೀನಿನ ಅರ್ಜಿಯು ವಿಚಾರಣೆಗೆ ಬರಬೇಕಿದ್ದ ಟೈಂನಲ್ಲೇ ಬಸ್‌ಗೆ ಬೆಂಕಿ ಬಿತ್ತು. ಮದನಿ ಎಂಥಾ ಅಪಾಯಕಾರಿ ವ್ಯಕ್ತಿ ಎಂದು ಬಿಂಬಿಸಲು ಹಿಂದೂ ಟೆರರಿಸ್ಟರೇ ಬಸ್‌ಗೆ ಬೆಂಕಿ ಹಾಕಿ ಮದನಿಗೆ ಜಾಮೀನು ಸಿಕ್ಕರೆ ಇನ್ನೇನೇನು ಅನಾಹುತ ಆಗಬಹುದು ಯೋಚಿಸಿ ನೋಡಿ ಎಂಬ ಹವಾ ಸೃಷ್ಟಿಸಿದ್ದರು.

ಈಗ ಮತ್ತೆ ಸೂಫಿಯಾ ಹೆಸರನ್ನು ಬೆಂಗಳೂರಿನ ಸ್ಫೋಟಕ್ಕೆ ಎಳೆದು ತರಲಾಗುತ್ತಿದೆ.

...ದೇರೀತಿ ನಜೀರ್ ಎಂಬುವವನ ಬಂಧನದ ಮೂಲಕ ...ಸರ ತನಿಖಾ ಕಾರ್ಯಾಚರಣೆ ಚಾಲೂ ಆಯಿತು.

...ಬಾಂಗ್ಲಾದಲ್ಲಿ ನಜೀರ್ ಬಂಧನ

...009ರ ಡಿಸೆಂಬರ್‌ನಲ್ಲಿ ನಡೆದ ಬಂಧನ ಇದು. ...ಯ ರಕ್ಷಣಾ ಪಡೆಯವರು ದೂರದ ಬಾಂಗ್ಲಾ ...ಲ್ಲಿ ಮೇಘಾಲಯದ ಬಳಿ ಇವನನ್ನು ಹಿಡಿದರು. ...ದ ಕೆಲದಿನ ನಜೀರ್ ಕೇಂದ್ರದ ಇಂಟಲಿಜೆನ್ಸ್ ...ೋ(ಐಬಿ)ದವರ ವಶದಲ್ಲಿದ್ದ. ಅಲ್ಲೇನಾಯಿತೋ ...? ಕೊನೆಗೆ ನಜೀರ್‌ನನ್ನು ರಾಜ್ಯ ಪೊಲೀಸರ ಕೈಗೆ ...ಲಾಯಿತು. ಬೆಂಗಳೂರು ಸ್ಫೋಟ ಪ್ರಕರಣದಲ್ಲಿ ... ಆರೋಪಿಯಾದ. ತಾನೊಮ್ಮೆ ಮದನಿಯೊಂದಿಗೆ ...ಪತ್ನಿ ಸೂಫಿಯಾರೊಂದಿಗೆ ಫೋನಿನಲ್ಲಿ ಮಾತಾಡಿದ್ದೆ ... ಹೇಳಿಕೆ ಕೊಟ್ಟ. ತಕ್ಷಣ ಪೊಲೀಸರು ಮದನಿಯನ್ನು ... ಆರೋಪಿಯಾಗಿಸಿ ಹೆಚ್ಚುವರಿ ಚಾರ್ಜ್‌ಶೀಟ್ ... ವಾರೆಂಟ್ ಪಡೆದು ಮದನಿಯನ್ನು ಬಂಧಿಸಿದ್ದಾರೆ. ...ಲ್ಲಿ ಈ ನಜೀರ್ ಬಗ್ಗೆ ಹೇಳಬೇಕೆಂದರೆ ಅವನಿಗೆ ...ವಾರಿ ಉಗ್ರ ಸಂಪರ್ಕಗಳಿರುವುದು ನಿಜ. ಅವನೊಮ್ಮೆ ... ಮದನಿಯ ಸಂಪರ್ಕದಲ್ಲಿದ್ದದ್ದೂ ನಿಜ. ಬಾಬರಿ ...ದಿಯನ್ನು ಹಿಂದೂ ಭಯೋತ್ಪಾದಕರು ನಾಶ ಮಾಡಿದ ... ದೇಶದಾದ್ಯಂತ ಒಂದು ಆಕ್ರೋಶದ ಪ್ರವಾಹ ... ಸಮುದಾಯದಿಂದ ಉಕ್ಕಿ ಹರಿದಿತ್ತು. ಅತ್ಯಂತ ...ವಾಗಿದ್ದ ಈ ಪ್ರತಿಕ್ರಿಯೆಯ ಒಂದು ಸಿಡಿಗುಂಡಾಗಿ ...ರ್ ನಾಸರ್ ಮದನಿ ಬೆಳಕಿಗೆ ಬಂದಿದ್ದರು. ಮುಸ್ಲಿಂ



...ದಾಯದಲ್ಲೂ ಮಂದಗಾಮಿಗಳು, ತೀವ್ರಗಾಮಿಗಳು, ...ವವರು, ಪ್ರತಿಭಟಿಸುವವರು ಹುಟ್ಟಿಕೊಂಡರು. ...ತ ಭಾಷಣಕಾರನಾಗಿದ್ದ ಮದನಿ ಈ ಸಂದರ್ಭದಲ್ಲಿ ...ದೊಡ್ಡ ನಾಯಕನಾಗಿ ಬೆಳೆದ. ಮೊದಲಿಗೆ ಆರೆಸ್ಸೆಸ್‌ಗೆ ...ರ್ಧೆಯೆಂಬಂತೆ ಇಸ್ಲಾಮಿಕ್ ಸ್ವಯಂಸೇವಕ ಸಂಸ್ಥೆ ...ದ ಮದನಿ ಆವೇಶಭರಿತ ಅಜೆಂಡಾ ಚಟುವಟಿಕೆಗಳಲ್ಲಿ ...ಾಗಿದ್ದ. ಆಗಲೇ ಕೊಯಮತ್ತೂರು ಬಾಂಬ್ ಸ್ಫೋಟ, ...ದಲ್ಲಿ ಕೈವಾಡದ ಆರೋಪ ಹೊರಿಸಿ ಬಿಜೆಪಿಯ ...ರ್ತಿ ಜಯಲಲಿತಾ ಮದನಿಯನ್ನು ಬಂಧಿಸಿದ್ದಳು. ...ಲ್ಲಿ ಮದನಿ ನಿರಪರಾಧಿ ಎಂದು ಕೋರ್ಟ್ ಹೇಳಿತ್ತು. ...ವರ್ಷಗಳ ನಂತರ ಜೈಲಿನಿಂದ ಹೊರಬಂದ ಮದನಿ ...ಐಎಸ್‌ಎಸ್ ವಿಸರ್ಜಿಸಿ ಪಿಡಿಪಿ ಪಕ್ಷ ಸ್ಥಾಪಿಸಿ ...ವಾಹಿನಿಯ ರಾಜಕೀಯಕ್ಕೆ ಬಂದರು.

... ಸಂದರ್ಭದಲ್ಲಿ ಕೆಲ ಮುಸ್ಲಿಂ ಉಗ್ರರು ಮದನಿಯ ...ಐದ ನಿಲುವನ್ನು ಸಹಿಸದೆ ಹತ್ಯೆಯ ಬೆದರಿಕೆಯನ್ನೂ ...ದ್ದರು. ಈ ಬಗ್ಗೆ ಮದನಿ ಪತ್ರಿಕಾಗೋಷ್ಠಿಗಳಲ್ಲೂ ...ೊಂಡು ಪೊಲೀಸರ ಗಮನಕ್ಕೂ ತಂದಿದ್ದರು.

ಅಂದರೆ ಮದನಿ ಯಾವ ಗುಂಪು ಹಾಗೂ ಎಲಿಮೆಂಟುಗಳಿಂದ ದೂರವಿದ್ದರೋ ಅಂಥವರೊಂದಿಗೆ ಮದನಿಗೆ ಈಗಲೂ ಲಿಂಕ್ ಇದೆ ಎಂದು ರಾಜ್ಯ ಪೊಲೀಸರು ಸಾಬೀತು ಮಾಡಲು ಇಷ್ಟಪಡುತ್ತಿದ್ದಾರೆ.

ಆದರೆ ಪೊಲೀಸರು ಮುಂದು ಮಾಡುತ್ತಿರುವ ಸಾಕ್ಷ್ಯಾಧಾರಗಳು ಅಷ್ಟು ಪ್ರಬಲವಾಗಿದೆಯಾ?

ಸಾಕ್ಷಿ ಎಂದರೆ ಹೇಗಿರಬೇಕು?

ಯಾರೇ ಬಂಧಿತ ವ್ಯಕ್ತಿ ಪೊಲೀಸರ ಎದುರಿಗೆ ನೀಡುವ ಹೇಳಿಕೆ ಹಾಗೂ ಸಾಕ್ಷಿ ಕೋರ್ಟ್‌ನಲ್ಲಿ ನಿಲ್ಲುವುದಿಲ್ಲ. ಪೊಲೀಸರು ಆರೋಪಿಯ ಕುಂಡೆ ಮೇಲೆ ಒದ್ದು ತಮಗೆ ಬೇಕಾದಂತೆ ಹೇಳಿಕೆ ಬರೆಸಿಕೊಳ್ಳುತ್ತಾರೆಂಬುದು ಇಡೀ ದೇಶಕ್ಕೆ ಗೊತ್ತಿರುವ ಸತ್ಯ.

ಮದನಿ ಪ್ರಕರಣದಲ್ಲೂ ಇಂಥ ಸಾಕ್ಷ್ಯಗಳಿವೆ.

ಕೊಡಗಿನವನಾದ ನಜೀರ್ ಸಾಮಾನ್ಯನಲ್ಲ ನಿಜ. ಅವನಿಗೆ ಕೆಲ ಉಗ್ರ ಗುಂಪುಗಳ ಲಿಂಕ್ ಇರುವ ಸಾಧ್ಯತೆ ಇದೆ. ಮದನಿ ನಜೀರ್‌ನನ್ನು ಹತ್ತಿರ ಬಿಡದೆ ದೂರವಿಟ್ಟಿದ್ದರು ಎನ್ನಲಾಗಿದೆ. ಆದರೆ ವಿಚಾರಣೆಯ ವೇಳೆ ತನಗೆ ಮದನಿಯ ಪರಿಚಯವಿದ್ದ ಬಗ್ಗೆ ನಜೀರ್ ಹೇಳಿದ್ದಾನೆ. ಮದನಿ ಪತ್ನಿಯೊಂದಿಗೆ ಒಮ್ಮೆ ನಜೀರ್ ಫೋನ್‌ನಲ್ಲಿ ಮಾತಾಡಿದ್ದೂ ಹೌದೆನ್ನಲಾಗಿದೆ. ಆದರೆ ಸೂಫಿಯಾ "ಯಾರೋ ನಜೀರ್ ಎಂದು ಫೋನ್ ಮಾಡಿದರೆ ನಾವ್ರಾ ಬಾಂಬ್ ಹಾಕಿದಂತಲ್ಲ" ಎನ್ನುತ್ತಿದ್ದಾರೆ. ಮದನಿ ನಜೀರ್ ಭೇಟಿಗೆ ಒಮ್ಮೆ ಕೊಡಗಿಗೆ ಬಂದುಹೋಗಿದ್ದನೆನ್ನುವ ಪೊಲೀಸರ ತರ್ಕ ಅವೆಷ್ಟು ಅಸಂಬದ್ಧ ಎನ್ನುವುದು ಪೊಲೀಸರಿಗೂ ಗೊತ್ತಾಗಿದೆ.

ಈ ಪ್ರಕರಣದ ಇನ್ನೊಂದು ಸಾಕ್ಷಿ ವರ್ಗೀಸ್ ಎಂಬುವನದ್ದು. ಕೆಲ ವರ್ಷಗಳ ಹಿಂದೆ ಮದನಿ ಈ ವರ್ಗೀಸನ ಮನೆಯಲ್ಲಿ ಬಾಡಿಗೆಗಿದ್ದರು ನಂತರ 2 ವರ್ಷದ ಹಿಂದೆ ಮದನಿ ತನ್ನ ಸ್ವಂತ ಮನೆಗೆ ಶಿಫ್ಟ್ ಆಗಿದ್ದ. ಆದರೆ ವರ್ಗೀಸನನ್ನು 172ನೇ ಸಾಕ್ಷಿಯಾಗಿ ಪೊಲೀಸರು ಒಂದು ಹೇಳಿಕೆ ಪಡೆದಿದ್ದಾರೆ.

ವರ್ಗೀಸ್ ಆದರಲ್ಲಿ...

"ನಾನು ಬಾಡಿಗೆ ಕೇಳಲು ಮದನಿ ಬೆಡ್‌ರೂಮಿಗೆ ಹೋದಾಗ ಅವನು ನಜೀರ್ ಜೊತೆ ಫೋನ್‌ನಲ್ಲಿ ಮಾತನಾಡುತ್ತ 'ಬೆಂಗಳೂರು ಸ್ಫೋಟಂ' ಎಂದು ಉಚ್ಚರಿಸಿದ್ದ" ಎಂದು ಹೇಳಿಕೆ ಕೊಟ್ಟಿದ್ದಾನೆ. ವಾಸ್ತವ ಏನೆಂದರೆ ಮದನಿ ಮನೆ ಬಾಡಿಗೆಯನ್ನು ಯಾವಾಗಲೂ ಹೆಚ್.ಡಿ.ಎಫ್.ಸಿ.ಬ್ಯಾಂಕ್ ಮೂಲಕ ಕೊಡುತ್ತಿದ್ದರು. ವರ್ಗೀಸ್ ಬಾಡಿಗೆ ಕೇಳಲು ಹೋದ ದಿನ ಮದನಿ ಆ ಬಾಡಿಗೆ ಮನೆ ತ್ಯಜಿಸಿ 2 ವರ್ಷ ಆಗಿತ್ತು.

ಆಶ್ಚರ್ಯ ಏನೆಂದರೆ, ಇದೇ ವರ್ಗೀಸ್ ಆಮೇಲೆ ಎರ್ನಾಕುಲಂ ಕೋರ್ಟ್‌ಗೆ ಒಂದು ಅರ್ಜಿ ಹಾಕಿ ಪೊಲೀಸರು ತನ್ನಿಂದ ಒಂದು ಒತ್ತಾಯಪೂರ್ವಕ ಹೇಳಿಕೆ ಪಡೆದಿದ್ದಾರೆ ಎಂತಲೂ ದೂರಿದ್ದಾನೆ!

ಅದೇರೀತಿ ಕೊಡಗಿನ ರಫೀಕ್ ಎಂಬುವವನಿಂದಲೂ ಪೊಲೀಸರು ಒಂದು ಹೇಳಿಕೆ ಬರೆಸಿಟ್ಟುಕೊಂಡಿದ್ದಾರೆ. ಅದು ಮದನಿ-ನಜೀರ್ ಸಂಪರ್ಕದ ಬಗ್ಗೆ ಇದೆ. ಆದರೆ ಅದೇ ರಫೀಕ್ ಪೊಲೀಸರ ಒತ್ತಡದಿಂದ ಈ ಹೇಳಿಕೆ ಪಡೆದರೆಂದು ಕೋರ್ಟ್ ಕೇಸ್ ಹಾಕಿದ್ದಾನಂತೆ.

ರಾಜ್ಯ ಪೊಲೀಸರು ಅತ್ಯಂತ ಕ್ಲಿಷ್ಟಕರ ಕೇಸೊಂದಕ್ಕೆ ಕೈಹಾಕಿದ್ದಾರೆನ್ನಲು ಇದನ್ನೆಲ್ಲ ಹೇಳಬೇಕಾಯಿತು.

ಅದು ಬೆಂಗಳೂರು ಸ್ಫೋಟವೋ, ಇನ್ನೊಂದು ವಿಧ್ವಂಸಕ ಕೃತ್ಯವೋ ಅದ್ಯಾವುದೇ ಆಗಿರಲಿಲ್ಲ, ಅದು ಮದನಿಯಾಗಲಿ, ಮತ್ತೊಬ್ಬನಾಗಲಿ ತಪ್ಪಿತಸ್ಥನಾದರೆ ಶಿಕ್ಷೆಯಾಗಲೇಬೇಕು.

ಆದರೆ ರಾಜಕೀಯ ದುರುದ್ದೇಶಗಳಿಗೆ ಪೊಲೀಸರು ದುರ್ಬಳಕೆಯಾದರೆ ಪರಿಣಾಮ ಕೆಟ್ಟದಾಗೇ ಮುಂದುವರೆಯುತ್ತವಲ್ಲವೇ?

ಮದನಿ ಬಗ್ಗೆ ಭೀತಿ ಯಾಕೆ?

ಇವತ್ತು ಇಡೀ ದಕ್ಷಿಣ ಇಂಡಿಯಾದಲ್ಲೇ ಮದನಿ ಒಬ್ಬ ಪಾಪ್ಯುಲರ್ ಅಂಡ್ ಪವರ್‌ಫುಲ್ ಮುಸ್ಲಿಂ ನಾಯಕ. ಮದನಿಯ ರಾಜಕೀಯ ಪಕ್ಷವು ಕೇರಳದ ಪೊಲಿಟಿಕಲ್ ಈಕ್ವೇಷನ್‌ಗಳನ್ನೆಲ್ಲಾ ಬದಲಿಸಿಬಿಟ್ಟಿದೆ. ಪ್ರಸ್ತುತ ಅಲ್ಲಿ ಆರೆಸ್ಸೆಸ್ ಹಾಗೂ ಕಮ್ಯೂನಿಸ್ಟರ ಬೀದಿ ಕಾಳಗ ನಡೆದಿದೆ. ನಿತ್ಯ ಕೊಲೆಗಳಾಗುತ್ತಿವೆ. ಮತ್ತೊಂದೆಡೆ ಮದನಿಯ ಹಿಂದೆ ಲಕ್ಷಾಂತರ ಮುಸ್ಲಿಂ, ದಲಿತ, ಹಿಂದುಳಿದವರು, ಬಡವರು, ಕ್ರಿಶ್ಚಿಯನ್ನರು ಸೇರುತ್ತಿದ್ದಾರೆ. ಕಾಂಗ್ರೆಸ್, ಬಿಜೆಪಿಯಾದಿಯಾಗಿ ಎಲ್ಲರಿಗೂ ಈಗ ಮದನಿ ನುಂಗಲಾರದ, ಅರಗಿಸಿಕೊಳ್ಳಲಾಗದ ರಾಜಕೀಯ ನಾಯಕನಾಗಿ ಬೆಳೆದುಬಿಟ್ಟಿದ್ದಾರೆ.


ಈ ಹಿಂದೆ ಮದನಿಯನ್ನು ಮುಗಿಸಲು ಆರೆಸ್ಸೆಸ್ ಬಾಂಬ್ ದಾಳಿ ನಡೆಸಿ ಮದನಿಯ ಒಂದು ಕಾಲೇ ಹೋಯಿತು. ಬಿಜೆಪಿಗಳು ಜಯಲಲಿತಾ ಸರ್ಕಾರವನ್ನು ಬಳಸಿಕೊಂಡು ಕೊಯಮತ್ತೂರು ಬಾಂಬ್ ಸ್ಫೋಟದ ಆರೋಪವನ್ನು ಮದನಿ ಮೇಲೆ ಹೊರಿಸಿ 9 ವರ್ಷ ಜೈಲಿನಲ್ಲಿರುವಂತೆ ಆಗಿತ್ತು, ಆದರೆ ಮದನಿ ನಿರ್ದೋಷಿ ಎಂದು 2007ರಲ್ಲಿ ಕೋರ್ಟ್ ಹೇಳಿತು.

ಈಗ ಬೆಂಗಳೂರು ಪೊಲೀಸರು ಬಾಂಬ್ ಸ್ಫೋಟದ ಆರೋಪ ಹೊರಿಸುತ್ತಿದ್ದಾರೆ. ಇದರಲ್ಲಿ ಸಂಘ ಪರಿವಾರದ ಚಿತಾವಣೆ ಇದ್ದರೆ ಏನೂ ಆಶ್ಚರ್ಯವಿಲ್ಲ. ಕೇರಳದ ರಾಜಕೀಯ ಕದನದಲ್ಲಿ ಬಿಜೆಪಿಗಳು ತಲೆ ಎತ್ತಬೇಕೆಂದರೆ ಅಲ್ಲಿ ಅವರಿಗೆ ಮದನಿಯನ್ನು ನಿವಾರಿಸಿಕೊಳ್ಳಲೇಬೇಕು. ಈಗ ಇಡೀ ದಕ್ಷಿಣ ಇಂಡಿಯಾದಲ್ಲಿ ಬಿಜೆಪಿ ಅಧಿಕಾರ ಇರುವುದು ಕರ್ನಾಟಕದಲ್ಲಿ ಮಾತ್ರ. ಸಂಘಪರಿವಾರದವರಿಗೆ ಕರ್ನಾಟಕ ಸರ್ಕಾರವನ್ನು ಬಳಸಿ ಮದನಿಯನ್ನು ಬಾಂಬ್ ಕೇಸಿನಲ್ಲಿ ಫಿಕ್ಸ್ ಮಾಡಿಸುವುದು ಕಷ್ಟ ಆಗಲಾರದಲ್ಲವೇ?

ಕರ್ನಾಟಕ ಪೊಲೀಸರು ಅತ್ಯಂತ ಎಚ್ಚರದಿಂದ ಹಾಗೂ ನಿಷ್ಪಕ್ಷಪಾತವಾಗಿ ಈ ಪ್ರಕರಣವನ್ನು ನಿಭಾಯಿಸಬೇಕಿದೆ.

■ ಪಾರ್ವತೀಶ
bparvateesha@gmail.com

ಮದನಿಗೆ ಹ್ಯೂಮನ್ ರೈಟ್ಸ್ ಬೆಂಬಲ



ಮದನಿ ಭಾರತದಲ್ಲಿನ ಮಾನವ ಹಕ್ಕುಗಳ ಉಲ್ಲಂಘನೆಗೆ ಇಂದು ಜೀವಂತ ಸಾಕ್ಷಿ. ಅವರನ್ನು ವಿಚಾರಣೆಯೇ ಇಲ್ಲದೆ ಅನೇಕ ವರ್ಷ ಜೈಲಿನಲ್ಲಿರಿಸಲಾಗಿತ್ತು. ಬೆಂಗಳೂರು ಬಾಂಬ್ ಸ್ಫೋಟ ಪ್ರಕರಣದಲ್ಲೂ ಅವರನ್ನು ಸಿಲುಕಿಸುವ ಪ್ರಯತ್ನ ನಡೆದಿದೆ. ಇದನ್ನೊಂದು ಮಾನವಹಕ್ಕಿನ ಉಲ್ಲಂಘನೆಯ ವಿಷಯವಾಗಿ ನಾನು ನನ್ನ ಶಕ್ತಿ ಮೀರಿ ಧ್ವನಿ ಎತ್ತುತ್ತೇನೆ.

-ಕುಲದೀಪ್ ನಯ್ಯರ್
ಮಾಧ್ಯಮ ಪತ್ರಿಕೆಯಲ್ಲಿ 2010, ಜೂನ್ 25

ಮದನಿ ಈಗಾಗಲೇ ತಮ್ಮ ಬದುಕಿನ 10 ಅಮೂಲ್ಯ ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದಾರೆ. ನಮ್ಮ ದೇಶದ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆ ಅವರನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಿದೆ. ಈಗ ಸರ್ಕಾರ ಮತ್ತೆ ಅಂತಹುದೇ ಪರಿಸ್ಥಿತಿ ಸೃಷ್ಟಿಸಲು ಹೊರಟಿದೆ. ಆದರೆ ಈ ಕ್ರಮಗಳು ನಮ್ಮ ಸಮಾಜದ ಒಂದು ಸಮುದಾಯದ ಜನರಲ್ಲಿ ದೇಶದ ನ್ಯಾಯಾಂಗ, ಪೊಲೀಸ್ ಹಾಗೂ ಗೂಢಚರ್ಯೆ ಸಂಸ್ಥೆಗಳ ಬಗ್ಗೆ ಅನುಮಾನ ಮೂಡಿಸುವ ಸಾಧ್ಯತೆಯಿದೆ. ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಒಟ್ಟಾರೆ ನೈತಿಕ ಸ್ಥೈರ್ಯವನ್ನು ಕುಂದಿಸಲಿವೆ.

ಜಸ್ಟೀಸ್ ವಿ.ಆರ್. ಕೃಷ್ಣ ಅಯ್ಯರ್
ಜಸ್ಟೀಸ್ ಪಿ.ಕೆ. ಶ್ಯಾಂಸುಂದರ್
ಡಾ. ಎಸ್. ಬಲರಾಮನ್
ಬಿ.ಆರ್.ಪಿ. ಭಾಸ್ಕರ್ ಹಾಗೂ ಇತರರು

...SI ನಕ್ಸಲ್-ಜಿಹಾದಿ ಲಿಂಕ್
...ಬೆಂಗಳೂರು ಪೊಲೀಸರು ...ತೆಗೆದ ಶುದ್ಧ ಕನ್ನಡ ಸಿನಿಮಾ!

ಕರ್ನಾಟಕ ಪೊಲೀಸರಿಗೆ ಇದೇನೂ ಹೊಸದಲ್ಲ.

ಅವರು ನಮ್ಮಲ್ಲಿ ಇಂಡಿಯನ್ ಮುಜಾಹಿದ್ದೀನ್, ಹುಜಿ, ...ಷ್ಕರ್-ಎ-ತೋಯಿಬಾ, ಐಎಸ್‌ಐ ಬೇಸ್‌ಗಳನ್ನೆಲ್ಲಾ ಪತ್ತೆಹಚ್ಚಿದ್ದಾರೆ. ...ಹಾರು ಮುಸ್ಲಿಂ ಯುವಕರನ್ನು ಬಂಧಿಸಿ ಮಲೆನಾಡು, ಕರಾವಳಿ, ...ಾವೇರಿ, ಕೊಡಗಿನ ಕಾಡುಗಳಲ್ಲಿ ಮುಸ್ಲಿಂ ಟೆರರಿಸ್ಟರ ಶಿಬಿರಗಳನ್ನು ...ಶ್ ಮಾಡಿಬಿಟ್ಟಿದ್ದಾರೆ. ಬಹುಶಃ ಅಟಂಬಾಂಬ್ ಒಂದನ್ನು ಬಿಟ್ಟು ...ಳಿದೆಲ್ಲಾ ಬಾಂಬುಗಳೂ ಇಲ್ಲಿ ಪೊಲೀಸರಿಗೆ ಸಿಕ್ಕಿಬಿಟ್ಟಿವೆ!

ಆದರೆ ಈ ಪ್ರಕರಣಗಳಿಗೆ ಕೇವಲ ಮೀಡಿಯಾಗಳಲ್ಲಿ ಭರ್ಜರಿ ...ಚಾರ ಕೊಟ್ಟ ಪೊಲೀಸರು ಆ ನಂತರದ ತನಿಖೆಯಲ್ಲಿ ಏನನ್ನಾದರೂ ...ೂವ್ ಮಾಡಿದರಾ?

ಯಾರಿಗೂ ಗೊತ್ತಿಲ್ಲ!

ಇವೆಲ್ಲಾ ಒಂಥರಾ ಕನ್ನಡ ಪಿಚ್ಚರ್ ಇದ್ದಂತೆ. ಹತ್ತು ಸಿನಿಮಾ ...ಲೀಸಾದರೆ ಎರಡು ಸಕ್ಸಸ್ ಆಗಿ ಉಳಿದವು ಫ್ಲಾಪ್ ಆಗುವ ಹಾಗೆ. ...ಳುಜಾಳು ಕತೆ, ಕೆಟ್ಟ ಹಿನ್ನೆಲೆ ಸಂಗೀತ, ಸಂಭಾಷಣೆ, ಘನಘೋರ ...ಡಿಟಿಂಗ್ ತರಹವೇ ಪೊಲೀಸರ ಆರೋಪಗಳು ಧ್ವನಿಸುತ್ತವೆ.

ಇಸ್ಲಾಮಿಕ್ ಟೆರರಿಸಂ ಕುರಿತಂತೆ ಕರ್ನಾಟಕದಲ್ಲೂ ಕೆಲ ಉಗ್ರ





ಎಲಿಮೆಂಟ್‌ಗಳಿದ್ದಾರೆ, ಇದು ಸುಳ್ಳಲ್ಲ, ಆದರೆ ಏನನ್ನೇ ಆಗಲಿ ಸಾರ್ವಜನಿಕವಾಗಿ ಆರೋಪಿಸುವ ಮುನ್ನ ಕೊಂಚ ಸಂಯಮ, ವಿವೇಕ ಪ್ರದರ್ಶಿಸದೆ ಹೋದರೆ ಜನರಿಗೆ ಪೊಲೀಸರ ಬಗ್ಗೆಯೇ ಅನುಮಾನ ಶುರುವಾಗುತ್ತದೆ ಅಷ್ಟೆ.

ಆಗಸ್ಟ್ 13 ರಂದು ಬೆಂಗಳೂರು ಪೊಲೀಸರು ಕೆಲವರನ್ನು ಬಂಧಿಸಿದರು. ಸಾರಾಂಶದಲ್ಲಿ ಹೇಳಬೇಕೆಂದರೆ ಪಾಕಿಸ್ತಾನದ ISI ಹಾಗೂ ಮಾಫಿಯಾ ಪಾತಕಿ ಚೋಟಾ ಶಕೀಲ್ ಸೇರಿಕೊಂಡು ಕೆಲವು ನಕ್ಸಲೈಟ್ ಲೀಡರ್‌ಗಳನ್ನು ದುಬೈಗೆ ಕರೆಸಲು ಪ್ಲಾನ್ ಮಾಡಿದ್ದಾರಂತೆ. ಅದಕ್ಕಾಗಿ ಅವರು ಕೇರಳದ ಆಲ್ತಾಫ್ ಎಂಬುವನ ಮೂಲಕ ಕರ್ನಾಟಕದ ದೇವಯ್ಯ ಹಾಗೂ ವಿನಯ್ ಕುಮಾರ್ ಎನ್ನುವ ಭಯಂಕರ ನಕ್ಸಲರನ್ನು ನೇಮಿಸಿಕೊಂಡಿದ್ದರಂತೆ. ಖರ್ಚಿಗೆಂದು 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಂತೆ.


ಇದು ಪೊಲೀಸರ ಕತೆ. ಸಿನಿಮಾದ ಫಸ್ಟ್ ಹಾಫ್ ಈ ವಿನಯಕುಮಾರ ಅರಕಲಗೂಡಿನ ರಾಮನಾಥಪುರದವನು. ತಾಯಿ ಹೂಮಾರಿ ಜೀವನ ನಡೆಸುತ್ತಿದ್ದಾಳೆ. ಸಣ್ಣಪುಟ್ಟ ಕೇಸುಗಳಡಿ ಜೈಲಿಗೂ ಹೋಗಿ ಬಂದಿರುವ ವಿಜಯ ಲೇವಾದೇವಿ ಮಾಡಿಕೊಂಡಿದ್ದ. ಪೊಲೀಸರೊಂದಿಗೆ ಚೆನ್ನಾಗಿದ್ದ. ಕಂಪ್ಲೇಂಟ್ ಬಂದಾಗ ತಾನೇ ಮಧ್ಯೆ ನಿಂತು ರಾಜಿ ಮಾಡಿಸಿ ಹಣ ಕಸಿದು ಪೊಲೀಸರೊಂದಿಗೇ ಹಂಚಿಕೊಳ್ಳುತ್ತಿದ್ದ. ವಿನಯ್ ತನ್ನಮ್ಮನ ಹೆಸರಲ್ಲಿ 15 ಲಕ್ಷ ಡಿಪಾಸಿಟ್ ಇಟ್ಟಿದ್ದಾನೆ. ಅವನಿಗೆ ಕೇರಳದ ಆಲ್ತಾಫ್ ಪರಿಚಯ ಇದ್ದಿರುವುದು ನಿಜ. ವಿನಯ್ ಮನೆಗೆ ಆಲ್ತಾಫ್ ಆಗಾಗ್ಗೆ ಬಂದೂ ಹೋಗಿ ಮಾಡುತ್ತಿದ್ದ. ಕೊನೆಗೆ ಆಲ್ತಾಫ್‌ಗೆ ಸೇರಿದ್ದ ಬೆಂಗಳೂರಿನ ಬಾರ್‌ನಲ್ಲೇ ವಿನಯ್ ಕೆಲಸಕ್ಕೆ ಸೇರಿಕೊಂಡ. ಬಹುತೇಕ ಇವರೆಲ್ಲಾ ಸೇರಿ ಯಾರದ್ದೋ ಲಿಂಕ್ ಪಡೆದು ಹಣ ಕೀಳುವ ಪ್ಲಾನ್ ಮಾಡಿರುತ್ತಾರೆ. ಯಾವುದೋ ಬಾರ್‌ನಲ್ಲಿ ಲೋಟ ತೊಳೆಯುವವನೊಬ್ಬ ಕರೆದ ಎಂದು ಪಾಕಿಸ್ತಾನಕ್ಕೆ ಹೊರಟುಬಿಡಲು ನಕ್ಸಲರೇನು ಅವಿವೇಕಿಗಳಾ? ಅಸಲಿಗೆ ವಿನಯ್‌ನೊಂದಿಗೆ ಆಂಧ್ರದಲ್ಲಿ ಅರೆಸ್ಟ್ ಆಗಿರುವ ರಾಮ್ ಕೃಪಾಲ್, ಪಾಂಡೆ, ಶಿವಕುಮಾರ್ ಮುಂತಾದವರೂ ಚೀಟಿಂಗ್ ದಂಧೆಯವರು ಆಗಿರಲಿಕ್ಕೂ ಸಾಕು. ದುಬೈನಲ್ಲಿ ಕುಳಿತಿರುವ ಮುಠ್ಠಾಳರಿಗೆ ನಕ್ಸಲೈಟರೆಂದರೆ ಯಾರು, ಎಂತ ಎಂಬುದು ಗೊತ್ತಾಗಬೇಕು ಹೇಗೆ?

ಅಸಲಿಗೆ ISIಗೆ ನಕ್ಸಲರ ಸಂಪರ್ಕ ಬೇಕೆಂದರೆ ಅವರೇಕೆ ಬೆಂಗಳೂರಿನ ಬಾರ್‌ನಲ್ಲಿ ಲೋಟ ತೊಳೆಯುವವನನ್ನು ನೇಮಿಸಿಕೊಳ್ಳುತ್ತಾರೆ? ನಕ್ಸಲರೇಕೆ ಅಮೆರಿಕದ ಕೈಬೊಂಬೆ ISI ಜೊತೆ ಸೇರಲು ಹೊರಡುತ್ತಾರೆ?

ಮೇಲ್ನೋಟಕ್ಕೇನೆ ಶುದ್ಧ ಚೀಟಿಂಗ್ ದಂಧೆಯವರಂತೆ ಕಾಣುವ ಈ ವಿನಯ್‌ಕುಮಾರ್, ದೇವಯ್ಯರಂತಹ ಅಡ್ನಾಡಿಗಳನ್ನು ISI -ನಕ್ಸಲ್ ಎಂಬಿತ್ಯಾದಿ ಆರೋಪಿಸಿ ಪ್ರಚಾರ ಪಡೆಯುವ ಗೀಳು ಪೊಲೀಸರಿಗೇಕೆ ಬಂತು?

ಗುಲ್ಬರ್ಗಾ ದಕ್ಷಿಣ: ಉಪಚುನಾವಣೆಗೆ ಶುರುವಾಗಿದೆ ಜಿದ್ದಾಜಿದ್ದಿ

ಬಿಜೆಪಿಯ ಚಂದಸೇಖರ ಪಾಟೀಲ ರೇವೂರ ಅವರ ಅಕಾಲಿಕ ನಿಧನದಿಂದ ತೆರವಾಗಿರುವ ಗುಲ್ಬರ್ಗಾ ದಕ್ಷಿಣ ಅಸೆಂಬ್ಲಿ ಕ್ಷೇತ್ರದ ಚುನಾವಣೆಯ ದಿನಾಂಕ ನಿಗದಿಯಾಗುತ್ತಿದ್ದಂತೆ ರಾಜಕೀಯ ಪಕ್ಷಗಳಲ್ಲಿ ತೀವ್ರ ಸಂಚಲನ ಶುರುವಾಗಿದೆ. ಬಿಜೆಪಿಯ ಪಾಳೆಯದಲ್ಲಂತೂ ಕ್ಷಣ ಕ್ಷಣಕ್ಕೂ ಕುತೂಹಲಕರ ಸಂಗತಿಗಳು ಜರುಗುತ್ತಿವೆ. ಏನಕೇನ ಪ್ರಕಾರೇಣ ತಾವು ಗೆದ್ದೇ ಗೆಲ್ಲುತ್ತೇವೆ, ಗೆಲ್ಲಲೇಬೇಕು ಎಂಬ ಹ್ಯಾವ ಇಟ್ಟುಕೊಂಡಿರುವ ಚೆಡ್ಡಿಗಳು ಅತ್ಯಂತ ಜಾಗರೂಕ ಹೆಜ್ಜೆಗಳನ್ನು ಇಡುತ್ತಿದ್ದಾರೆ.


ನಮೋಶಿ


ದಿ. ರೇವೂರ ಹೇಳಿಕೇಳಿ ಶ್ರೀಮಂತಿಕೆಯ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿದ್ದಾತ. ಜನಸಾಮಾನ್ಯರೆಂದರೆ ಈತನಿಗೆ ಅಲರ್ಜಿ ಇತ್ತು. ಆದರೆ ಆತ ಲಿಂಗಾಯತ ಜಾತಿಯವನು ಹಾಗೂ ಬಿಜೆಪಿಯನ್ನು ಲಿಂಗಾಯತರು ಬೆಂಬಲಿಸಬೇಕು ಎಂಬ ನಂಬಿಕೆಯಿಂದ ಇಲ್ಲಿನ ಜನ ರೇವೂರನನ್ನು ಗೆಲ್ಲಿಸಿ ಕಳಿಸಿದರು. ಆದರೆ ಗೆದ್ದ ನಂತರ ಆತ ತನ್ನ ಶ್ರೀಮಂತಿಕೆಯ ಕೋಟೆಯಿಂದ ಹೊರಲೋಕಕ್ಕೆ ಬರಲಿಲ್ಲ. ಹಾಗಾಗಿ ಶ್ರೀಸಾಮಾನ್ಯರಿಗೆ ಹಾಗೂ ಇಲ್ಲಿನ ಮತದಾರರಿಗೆ ರೇವೂರ ಕಾಣಿಸಲೇ ಇಲ್ಲ. ನೆಚ್ಚಿಕೊಂಡ ಎಮ್ಮೆ ಕೋಣ ಈಯಿತು ಎಂಬಂತೆ ಮತದಾರರು ನಿರಾಶೆಗೊಂಡಿದ್ದಾಗಲೇ ರೇವೂರ ಅಕಾಲಿಕ ಮರಣಕ್ಕೆ ತುತ್ತಾದರು.

ರೇವೂರ ಅಕಾಲಿಕವಾಗಿ ಸಾವನ್ನಪ್ಪಿದ್ದರಿಂದ ಆತನ ಪರ ಮತಕ್ಷೇತ್ರದಲ್ಲಿ ಅನುಕಂಪದ ಅಲೆ ಎದ್ದಿದೆ ಎಂದು ಅವರ ಮಗ ದತ್ತಾತ್ರೇಯ ಪಾಟೀಲ ತಿಳಕೊಂಡಿದ್ದಾನೆ. ಹೀಗಾಗಿ ತನ್ನ ತಂದೆ ಕುಳಿತಿದ್ದ ಶಾಸಕನ ಸ್ಥಾನವನ್ನು ತಾನೇ ಅಲಂಕರಿಸಬೇಕು ಎಂಬ ಆಶೆ ಆತನಲ್ಲಿ ಹುಟ್ಟಿಕೊಂಡಿದೆ. ಆದ್ದರಿಂದ ತನ್ನ ಪಟಾಲಂದೊಂದಿಗೆ ಈಗಾಗಲೇ ಬೆಂಗಳೂರಿನಲ್ಲಿ ಠಿಕಾಣಿ ಹೂಡಿ ಬಿಜೆಪಿಯ ಟಿಕೆಟ್ ಪಡೆಯುವ ಪ್ರಯತ್ನಗಳನ್ನು ನಡೆಸಿದ್ದಾನೆ. ಈಗಾಗಲೇ ತಾನು ಜಿಲ್ಲಾ ಪಂಚಾಯತಿಯ ಸದಸ್ಯನೂ ಆಗಿರುವುದರಿಂದ ಶಾಸಕತ್ವದ ಸ್ಥಾನವನ್ನೂ ತಾನು ಸರಿಯಾಗಿ ನಿಭಾಯಿಸಬಲ್ಲೆ ಎಂಬ ಆತ್ಮವಿಶ್ವಾಸ ದತ್ತು ಪಾಟೀಲ ಇಟ್ಟುಕೊಂಡಿದ್ದಾನೆ. ಅಕಸ್ಮಾತ್ ತನಗೆ ಟಿಕೆಟ್ ಸಿಗದಿದ್ದರೆ ತನ್ನ ತಾಯಿ ಅರುಣಾ ಅವರನ್ನೇ ಕಣಕ್ಕಿಳಿಸಿದರೆ ಹೇಗೆ? ಎಂಬ ತರ್ಕವನ್ನೂ ಆತ ನಡೆಸಿದ್ದಾನೆ.

ಆದರೆ ಇದನ್ನು ಒಪ್ಪುವ ಸ್ಥಿತಿಯಲ್ಲಿ ಸ್ಥಳೀಯ ಬಿಜೆಪಿಯ ಮುಖಂಡರು ಇಲ್ಲ. ಬದಲಾಗಿ ಆ ಸ್ಥಾನವನ್ನು ತಮ್ಮದಾಗಿಸಿಕೊಳ್ಳಲು ಬಹಳಷ್ಟು ಆಕಾಂಕ್ಷಿಗಳು ಹುಟ್ಟಿಕೊಂಡಿದ್ದಾರೆ. ಎಂ.ಎಲ್.ಸಿ. ಶಶಿಲ್ ನಮೋಶಿ, ಎಚ್ಕೆಡಿಬಿ ಅಧ್ಯಕ್ಷ ಅಮರನಾಥ ಪಾಟೀಲ, ಶರಣಬಸವಪ್ಪ ಕಾಡಾದಿ, ಬಿ.ಜಿ.ಪಾಟೀಲ ಮುಂತಾದವರು ಬಿಜೆಪಿಯ ಟಿಕೆಟ್ ಗಿಟ್ಟಿಸಿಕೊಂಡು ಅಖಾಡಕ್ಕೆ ಧುಮುಕುವ ಇರಾದೆ ಇಟ್ಟುಕೊಂಡಿದ್ದಾರೆ.

ಶಶಿಲ್ ನಮೋಶಿಯಂತೂ ಹೇಗೂ ಕರ್ನಾಟಕದಲ್ಲಿ ಬಿಜೆಪಿಯದ್ದೇ ಸರಕಾರ ಇದೆ. ಇಂತಹ ಸುವರ್ಣ ಅವಕಾಶ ತನಗೆ ಮತ್ತೆ ಇನ್ನೆಂದೂ ಸಿಗಲಾರದು, ಆದ್ದರಿಂದ ಹೇಗಾದರೂ ಈ ಸುಸಂದರ್ಭವನ್ನು ಉಪಯೋಗಿಸಿಕೊಂಡು ತಾನು ಎಂ.ಎಲ್.ಎ. ಆಗಿಯೇ ತೀರಬೇಕು ಎಂಬ ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದಾರೆ. ಇದಕ್ಕಾಗಿ ಸಾಕಷ್ಟು ತಾಲೀಮುಗಳನ್ನು ಕೂಡ ಈಗಾಗಲೇ ಮುಗಿಸಿದ್ದಾರೆ.

ಎರಡು ಬಾರಿ ಸತತವಾಗಿ ಬಿಜೆಪಿಯ ಮಡಿಲಿಗೆ ತನ್ನನ್ನು ಅರ್ಪಿಸಿಕೊಂಡಿರುವ ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ತನ್ನ ದಾಳವನ್ನು ಅತ್ಯಂತ ಜಾಣತನದಿಂದ ಆಡಬೇಕೆಂದು ಹೊಂಚುಹಾಕಿ ಕುಳಿತಿದೆ. ಚಂದ್ರಶೇಖರ ಪಾಟೀಲ ರೇವೂರ ಅವರ ಮಗ ದತ್ತಾತ್ರೇಯ ಪಾಟೀಲ ಬಿಜೆಪಿಯಿಂದ ಸ್ಪರ್ಧಿಸಿದರೆ ಅಥವಾ ಶಶಿಲ ನಮೋಶಿ, ಅಮರನಾಥ ಪಾಟೀಲ ಅಭ್ಯರ್ಥಿಯಾದರೆ ತನ್ನ ಪಕ್ಷದ ಅಭ್ಯರ್ಥಿಯನ್ನು ಅದಲುಬದಲು ಮಾಡುವ ಇರ್ರಾದೆ ಕಾಂಗ್ರೆಸ್ ಹೊಂದಿದೆ.


ಅಮರ್‌ನಾಥ್ ಪಾಟೀಲ್

ಒಂದೊಮ್ಮೆ ದತ್ತಾತ್ರೇಯ ಪಾಟೀಲ ಬಿಜೆಪಿಯಿಂದ ಸ್ಪರ್ಧಿಸಿದರೆ ಕಾಂಗ್ರೆಸ್‌ನಿಂದ ಧರ್ಮಸಿಂಗ್ ಪುತ್ರ ಅಜಯ ಸಿಂಗ್ ನಿಲ್ಲುವುದು ಖಚಿತ ಎನ್ನುವ ವಾತಾವರಣ ಈಗ ಪಕ್ಷದಲ್ಲಿ ಸೃಷ್ಟಿಯಾಗಿದೆ. ಇದು ಅಲ್ಪಸಂಖ್ಯಾತರು ಹಾಗೂ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಮತಕ್ಷೇತ್ರವಾದ್ದರಿಂದ ಇಲ್ಲಿ ಬ್ರಾಹ್ಮಣ ಜಾತಿಯವರನ್ನೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಬೇಕೆಂದು ಖಮರುಲ್ ಹೇಳುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್ ಕೆಪಿಸಿಸಿ ಅಧ್ಯಕ್ಷರಾದ ಆರ್.ವಿ.ದೇಶಪಾಂಡೆಯವರನ್ನು ಕಣಕ್ಕಿಳಿಸುವ ವಿಚಾರ ವ್ಯಕ್ತಪಡಿಸಿತ್ತು. ಆದರೆ ಇದಕ್ಕೆ ದೇಶಪಾಂಡೆ ಹಸಿರುನಿಶಾನೆ ತೋರಿದಂತೆ ಕಾಣುತ್ತಿಲ್ಲ. ಬದಲಾಗಿ ಡಾ.ವಿಜಯ ಕಲ್ಮಣಕರ್ ಹಾಗೂ ಕೃಷ್ಣ ಕುಲ್ಕರ್ಣಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಮೊದಲಿಗರಾಗಿದ್ದಾರೆ. ಕಳೆದ ಸಲ ಇದೇ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಉದ್ಯಮಿ ಬಸವರಾಜ ಭೀಮಳ್ಳಿ ಅದೇಕೋ ಈ ಬಾರಿ ಸ್ಪರ್ಧಿಸುವ ಅಭಿಲಾಷೆಯನ್ನು ಹೊಂದಿಲ್ಲದಿರುವುದು ಕಾಂಗ್ರೆಸ್ ಪಕ್ಷಕ್ಕೆ ಇಲ್ಲಿ ಯಾವ ಸ್ಥಾನ ಸಿಕ್ಕಬಹುದು ಎಂಬುದಕ್ಕೆ ಸ್ಪಷ್ಟ ಸೂಚನೆ ನೀಡುತ್ತಿರುವಂತಿದೆ.

ಒಂದು ಕಾಲಕ್ಕೆ ಗುಲಬರ್ಗಾ ಜಿಲ್ಲೆಯಲ್ಲಿ ತನ್ನ ಪಕ್ಷದ ನೆಲೆಯನ್ನು ಕಂಡುಕೊಂಡಿದ್ದ ಜೆ.ಡಿ.ಎಸ್. ಪಕ್ಷ ಈಗ ಇಲ್ಲಿ ಸರಾಗವಾಗಿ ಉಸಿರಾಟವಾಡಲೂ ಹೆಣಗಾಡುವ ಪೇಷಂಟ್‌ನ ಸ್ಥಿತಿ ತಲುಪಿದೆ. ಆದರೂ ಟಿಕೆಟ್ ಆಕಾಂಕ್ಷಿಗಳಿಗೇನೂ ಇಲ್ಲಿ ಬರವಿಲ್ಲ. ಎಸ್.ಕೆ.ಕಾಂತಾ ಎಂಬ ಮಾಜಿ ಮಂತ್ರಿ ಹಿಂದಿನ ಸಲ ಪರಾಭವಗೊಂಡಿದ್ದರೂ ರೇವೂರ ದಿವಂಗತರಾದ ನಂತರವಾದರೂ ತಮ್ಮ ಅದೃಷ್ಟ ಖುಲಾಯಿಸಬಹುದೆ ಎಂದು ಕಾತರರಾಗಿದ್ದಾರೆ. ಇದೇ ಪಕ್ಷದ ದೇವೇಗೌಡ ತೆಲ್ಲೂರ ಹಾಗೂ ರಾಜು ಕುಳಗೇರಿಯವರೂ ಟಿಕೆಟ್ ಪಡೆದುಕೊಂಡು ನಿಲ್ಲಲೇಬೇಕು ಎಂದೂ, ಬಿಜೆಪಿ ಹಾಗೂ ಕಾಂಗ್ರೆಸ್ ಲೆಕ್ಕಾಚಾರಗಳೆಲ್ಲ ತಲೆಕೆಳಗಾಗಿ ಜನಸಾಮಾನ್ಯ ಜೆ.ಡಿ.ಎಸ್ ಕೈ ಹಿಡಿದು ತಮ್ಮ ಲಕ್ ಖುಲಾಯಿಸುತ್ತದೆ ಎಂದೂ ತಿಳಕೊಂಡಿದ್ದಾರೆ. ಇನ್ನು ಕಾಂಗ್ರೆಸ್ ಪಕ್ಷದ ಜಿಪಂ ಸದಸ್ಯ ನಿತೀನ ಗುತ್ತೇದಾರ ಕೊನೆಕ್ಷಣದಲ್ಲಿ ಜೆ.ಡಿ.ಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದರೂ ಅಚ್ಚರಿ ಏನಿಲ್ಲ ಎಂಬ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ.

ಇದೆಲ್ಲದರ ಜೊತೆಗೆ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷರಾದ ಅರುಣಕುಮಾರ ಪಾಟೀಲ ಕೊಡ್ಲಹಂಗರಗಾ ಇವರು ಸಹ ಚುನಾವಣೆಯ ಕಣಕ್ಕೆ ಇಳಿದು ತಾವು ತಮ್ಮ ತೋಳ್ಬಲವನ್ನು ಪ್ರದರ್ಶಿಸಿದರಾಯಿತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.


ಇದಕ್ಕೆಲ್ಲ ಮುಂಬರುವ ದಿನಗಳೇ ಸ್ಪಷ್ಟವಾದ ಉತ್ತರ ಹೇಳಲಿವೆ.

• ವಿಶ್ವಾರಾಧ್ಯ ಸತ್ಯಂಪೇಟೆ

ಹಾವೇರಿ: ಫ್ಯಾಕ್ಟರಿ ಹೆಸರಲ್ಲಿ ಗೋಮಾಳಕ್ಕೆ ಕನ್ನ ಹಾಕಿದ ಚೆಡ್ಡಿ ಸಜ್ಜನ!



ಅಬ್ಬಬ್ಬಾ 33 ಕೋಟಿ ದೇವರುಗಳಂತೆ! ಅವೆಲ್ಲಾ ಗೋಗರ್ಭದಲ್ಲಿ ಅಡಗಿವೆಯಂತೆ. ಈ ಅಡಗೂಲಜ್ಜಿ ಕಥೆಯನ್ನು ಹೇಳುತ್ತಾ ಗೋಹತ್ಯಾ ನಿಷೇಧ ಕಾಯ್ದೆಯನ್ನು ಜಾರಿಗೆ ತರಲೆಂದು ಯತ್ನಿಸಿದ ಚೆಡ್ಡಿ ಪಿಂಡಗಳು ಇಂದು ಆ ಗೋವುಗಳ ಅನ್ನಕ್ಕೆ ಕನ್ನ ಹಾಕಿವೆ. ಊರ ಹೊರಗೆ ದನ, ಕರುಗಳಿಗೆಂದೇ ಮೀಸಲಿಟ್ಟಿರುವ ಗೋಮಾಳ ಜಾಗೆಯನ್ನು ಈಗ ಕೈಗಾರಿಕಾ ಪ್ರದೇಶ ಎಂದು ಘೋಷಿಸುತ್ತಿವೆ. ಆಚಾರ ಹೇಳುವವನೇ ಬದನೆಕಾಯಿ ತಿಂದ ಎಂಬಂತಾಗಿದೆ.



ಫ್ಯಾಕ್ಟರಿ ಉದ್ಘಾಟನೆಯಲ್ಲಿ ಉದಾಸಿ, ಸಜ್ಜನ್....

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಸಿದ ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆದಾರರ ಸಮಾವೇಶದ ಮೂಲ ಉದ್ದೇಶವೇ ಭೂದರೋಡೆ. ಅದಕ್ಕೆ ತಾಜಾ ಉದಾಹರಣೆ ಎಂದರೆ ಹಾವೇರಿ ಹತ್ತಿರದ ಗೌರಾಪೂರ ಎಂಬ ಗ್ರಾಮದ ಗೋಮಾಳ ಜಾಗೆಯನ್ನು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಶಿವರಾಜ ಸಜ್ಜನ ಮಾಲೀಕತ್ವದ ಫಾರ್ಚುನ್ ಕಾಟನ್ ಆ್ಯಂಡ್ ಅಗ್ರೋ ಇಂಡಸ್ಟ್ರೀಸ್‌ಗೆ ನೀಡಿರುವಂತಹದ್ದು. ಅಸಲಿಗೆ ಈ ಕಂಪನಿಯೇನೂ ಹಳೆಯದಲ್ಲ, ಸಮಾವೇಶಕ್ಕೆಂದೇ ಹುಟ್ಟಿಕೊಂಡಿದ್ದು. ಮುಖ್ಯಮಂತ್ರಿ ಯಡಿಯೂರಪ್ಪನ ಸ್ವಜಾತಿ ಪ್ರೇಮದ ಫಲವಾಗಿ ಬೆಳೆದವನು ಈ ಸಜ್ಜನ. ನಕಲಿ ಬಿತ್ತನೆ ಬೀಜ ಮಾರಾಟದಿಂದ ರಾಜಕೀಯಕ್ಕೆ ಕಾಲಿಟ್ಟ ಈತ ಇಂದು ಅದೇ ನಕಲಿ ಬೀಜ ತಯಾರಿಕೆಗಾಗಿ ಫಾರ್ಚುನ್ ಕಾಟನ್ ಆ್ಯಂಡ್ ಅಗ್ರೋ ಇಂಡಸ್ಟ್ರೀಸ್ ಎಂಬ ಹೆಸರಲ್ಲಿ ಒಂದು ಫ್ಯಾಕ್ಟರಿ ಪ್ರಾರಂಭಿಸುವ ತಯಾರಿಯಲ್ಲಿದ್ದಾನೆ.

ಹಾವೇರಿ ಜಿಲ್ಲೆಯ ಎಲ್ಲ ತಾಲೂಕು ಹಾಗೂ ಗದಗ, ನರಗುಂದ, ಮುಂಡರಗಿ ತಾಲೂಕಿನ ರೈತರು ಹತ್ತಿ ಬೆಳೆಯನ್ನು ವ್ಯಾಪಕವಾಗಿ ಬೆಳೆಯುತ್ತಾರೆ. ಕರ್ನಾಟಕ ರಾಜ್ಯದಲ್ಲೇ ಒಟ್ಟು 12 ಲಕ್ಷ ಚೀಲ ಬೆಳೆದರೆ, ಅದರಲ್ಲಿ 4 ಲಕ್ಷ ಚೀಲ ಈ ಎರಡು ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಹೀಗಾಗಿ ಬೆಳೆದ ಹತ್ತಿಯನ್ನು ಜಿನ್ನಿಂಗ್ ಮಾಡಿ ಅದರಿಂದ ಕಾಳುಗಳನ್ನು ಬೇರ್ಪಡಿಸಿ, ಆ ಕಾಳಿನಿಂದ ಅಡಿಗೆ ಎಣ್ಣೆ ಹಾಗೂ ಹಿಂಡಿಯನ್ನು ತಯಾರಿಸುವ ಉದ್ದಿಮೆಯ ಕೊರತೆ ಈ ಭಾಗದಲ್ಲಿ ಎದ್ದು ಕಾಣುತ್ತಿತ್ತು. ಅದನ್ನೇ ನೆಪವಾಗಿಸಿಕೊಂಡು ಈಗ "ಹತ್ತಿ ಬೆಳೆಗಾರರ ಸಂಕಷ್ಟಕ್ಕೆ ನೆರವಾಗಲೆಂದೇ ನಾನು ಕೈಗಾರಿಕೆಯನ್ನು ಪ್ರಾರಂಭಿಸಿದ್ದೇನೆ" ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾನೆ ಸಜ್ಜನ. ಆದರೆ ಅಸಲಿಗೆ ಈ ಉದ್ಯಮಕ್ಕೆ ಆತ ಕಾಲಿಟ್ಟಿರುವುದೇ ಚುನಾವಣಾ ವೈಷಮ್ಯ ತೀರಿಸಿಕೊಳ್ಳಲು. ಯಾಕೆಂದರೆ ಇವನನ್ನು ಸದಾ ವಿರೋಧಿಸುತ್ತ ಬಂದ ಹಾವೇರಿಯ ಹಾಗೂ ರಾಣೇಬೆನ್ನೂರಿನ ಸಣ್ಣ ವ್ಯಾಪಾರಿಗಳನ್ನು ಮುಗಿಸುವ ಸಂಚು ಇದಾಗಿದೆ.

ಹಾವೇರಿಯಿಂದ 8 ಕಿ.ಮೀ. ದೂರದಲ್ಲಿ ಇರುವ ಗೌರಾಪೂರ ಗ್ರಾಮದ ಹತ್ತಿರ ಬರೋಬ್ಬರಿ 25.22 ಗುಂಟೆ ಗೋಮಾಳಕ್ಕೆಂದು ಬಿಟ್ಟಿದ್ದ ಸರ್ವೆ ನಂ 64/ಅ ಜಾಗೆಯನ್ನು 30 ವರ್ಷ ಬೇರೆಯವರಿಗೆ ಪರಭಾರೆ ಮಾಡಬಾರದು ಎಂಬ ಷರತ್ತಿನೊಂದಿಗೆ ಹಾವೇರಿಯ ಜಿಲ್ಲಾಡಳಿತ ಸಜ್ಜನನ ಹೆಸರಿಗೆ ನೀಡಿದೆ. ಅದೂ ಪ್ರತಿ ಎಕರೆಗೆ ಕೇವಲ 2,600 ರೂ.ಗಳ ಬಾಡಿಗೆಯಲ್ಲಿ! ಪಟ್ಟಣ ಅಥವಾ ನಗರಕ್ಕೆ ಹೊಂದಿಕೊಂಡಂತೆ 20 ಕಿ.ಮೀ. ಅಂತರದಲ್ಲಿ ಯಾವುದೇ ಸರಕಾರಿ ಜಮೀನನ್ನು ಪರಭಾರೆ ಮಾಡಕೂಡದು ಎಂಬ 2005ರ ಸರಕಾರದ ಆದೇಶವನ್ನೂ ಇಲ್ಲಿ ಗಾಳಿಗೆ ತೂರಲಾಗಿದೆ. ಗೌರಾಪೂರ ಗ್ರಾಮಕ್ಕೆ ಹೊಂದಿಕೊಂಡಂತೆ ಖಾಲಿ ಬಿಟ್ಟಿದ್ದ 48.02 ಎಕರೆ ಜಾಗೆಯಲ್ಲಿ ಈಗಾಗಲೇ 10 ಎಕರೆಯನ್ನು ಹಾವೇರಿ ನಗರಸಭೆ ಘನ ಮತ್ತು ತ್ಯಾಜ್ಯ ಸಂಗ್ರಹಣೆಗೆಂದು ತನ್ನ ತಾಬಾಕ್ಕೆ ತೆಗೆದುಕೊಂಡಿದೆ ಮತ್ತು 12.28 ಗುಂಟೆ ಜಾಗೆಯು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿದೆ. ಈಗ ಶಿವರಾಜ್ ಸಜ್ಜನ ನಗರಸಭೆಯ ಈ 10 ಎಕರೆ ಜಾಗೆಯನ್ನು ಸಹ ಗುಳುಂ ಮಾಡಲು ಹೊಂಚು ಹಾಕಿದ್ದಾನೆ. ಒಟ್ಟಾರೆಯಾಗಿ ಗೌರಾಪೂರದ ಸರಕಾರಿ ಜಾಗೆ ಸಜ್ಜನನ ಪಾಲಾಗುವುದು ಇನ್ನೇನು ದೂರ ಇಲ್ಲ ಎಂಬಂತಾಗಿದೆ.

ಚೆಡ್ಡಿಗಳ ಪಿಂಡದ ಫಲಪ್ರದವಾಗಿ ಜಿಲ್ಲೆಗೆ ಕಾಲಿಟ್ಟಿದ್ದ ಆಗಿನ ಜಿಲ್ಲಾಧಿಕಾರಿ ಪಿ.ಎಸ್. ವಸ್ತ್ರದ ಇಷ್ಟೆಲ್ಲಾ ಅವಾಂತರಕ್ಕೆ ಕಾರಣವಾಗಿದ್ದಾನೆ. ಪಟ್ಟಣಕ್ಕೆ ಹೊಂದಿಕೊಂಡ ಸರಕಾರಿ ಜಾಗೆಯನ್ನು ಪರಭಾರೆ ಮಾಡಬಾರದು ಎಂಬ ಕಾನೂನನ್ನು ಗಾಳಿಗೆ ತೂರಿ ಉದಾಸಿ ಮತ್ತು ಅವನ ಚೇಲಾ ಶಿವರಾಜ ಸಜ್ಜನನ ಎಲ್ಲಾ ಮಾತಿಗೆ ತಲೆ ಆಡಿಸಿ ತಿಪ್ಪೆ ಸಾರಿಸಿದ್ದಾನೆ.


ಗೋಮಾಳದ ಉತಾರ

ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆ ಸಮಾವೇಶ ಬೆಂಗಳೂರಲ್ಲಿ ಆಯೋಜಿಸಲಾಗುತ್ತಿದೆ ಎಂಬ ವಿಷಯ ಗೊತ್ತಾದಾಗಲೇ ಕೈಗಾರಿಕಾ ಜಾಗೆಗೆ ಕಣ್ಣು ಹಾಕಿದ್ದ ಶಿವರಾಜ ಸಜ್ಜನ ಗೌರಾಪೂರ ಜಮೀನು ವಶಕ್ಕಾಗಿ ಮೊದಲಿಗೆ ಅರ್ಜಿ ಕೊಟ್ಟಿದ್ದ. ಇದು ಗೋಮಾಳ ಜಾಗೆಯಾಗಿರುವುದರಿಂದ ಅದನ್ನು ಬೇರೆಯವರಿಗೆ ಪರಭಾರೆ ಮಾಡಲು ಬರುವುದಿಲ್ಲ ಎಂಬ ಕಾನೂನು ಗೊತ್ತಿದ್ದರೂ ಆಗಿನ ಜಿಲ್ಲಾಧಿಕಾರಿ ವಸ್ತ್ರದ ಉದಾಸಿ ಮತ್ತವನ ಚೇಲಾಗಳ ಆಶೀರ್ವಾದಕ್ಕಾಗಿ ಕಂದಾಯ ಇಲಾಖೆಗೆ "ಇದನ್ನು ಕೈಗಾರಿಕೆಗೆ ನೀಡಲು ಯಾವ ತೊಂದರೆಯೂ ಇಲ್ಲಾ" ಎಂದು ಶಿಫಾರಸ್ಸು ಮಾಡಿದ. ಕಂದಾಯ ಇಲಾಖೆ ಈ ಪ್ರಸ್ತಾವನೆಯನ್ನು ವಾಣಿಜ್ಯ ಮತ್ತು ಕೈಗಾರಿಕೆಯ ಪ್ರಧಾನ ಕಾರ್ಯದರ್ಶಿಗೆ ರವಾನಿಸಿತ್ತು. ಅಲ್ಲಿದ್ದ ಯಡಿಯೂರಪ್ಪನ ಮಾನಸ ಪುತ್ರ ವಿ.ಪಿ. ಬಳಿಗಾರ್ "ಜಿಲ್ಲೆಯಲ್ಲಿ ಕೈಗಾರಿಕೆ ಬೆಳವಣಿಗೆಗೆ ಅನುಕೂಲಕರ ಪ್ರಸ್ತಾವನೆ ಇದಾಗಿದೆ" ಎಂದು ತಲೆ ಬರಹ ನೀಡಿ ಗೋಮಾಳ ಜಾಗೆಯನ್ನು ವರ್ಗಾವಣೆ ಮಾಡಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದರು. ಅದರಂತೆ ಈಗ ಗೌರಾಪೂರದ ಗೋಮಾಳ ಜಾಗೆ ಶಿವರಾಜ ಸಜ್ಜನನ ನಕಲಿ ಬೀಜ ಉತ್ಪಾದನಾ ತಾಣವಾಗಿ ಮಾರ್ಪಟ್ಟಿದೆ. ಈ ಯೋಜನೆಗೆ 18 ಕೋಟಿ 37 ಲಕ್ಷ ರೂ. ಬಂಡವಾಳ ಹಾಕಿ ಜಿಲ್ಲೆಯ 500ಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡುವ ಭರವಸೆಯೊಂದಿಗೆ ಮತ್ತು ಮಂತ್ರಿ ಉದಾಸಿಯ ಆಶೀರ್ವಾದದೊಂದಿಗೆ ಇದೇ ತಿಂಗಳು 27ರಂದು ಉದ್ಘಾಟನೆಗೊಂಡಿದೆ. ಆದರೆ ಈ ಹಿಂದೆ ಒಂದು ಸಹಕಾರಿ ಸಂಸ್ಥೆಯನ್ನೇ ಮುಳುಗಡೆ ಮಾಡಿದ ಸಜ್ಜನ ಈ ಫ್ಯಾಕ್ಟರಿ ಮೂಲಕ ಅದೇನು ಸಾಧಿಸುತ್ತಾನೊ?

ನಿಮಗೆ ನೆನಪಿರಬಹುದು, ಈ ಹಿಂದೆ ಅಖಂಡ ಧಾರವಾಡ ಜಿಲ್ಲೆಯ ರೈತರ ಆಶಾಕಿರಣವಾಗಿದ್ದ ವರದಾ ಶುಗರ್ಸ್ ಅನ್ನು ಸಾಲದಲ್ಲಿ ನೂಕಿ ಅಲ್ಲಿನ ಕಾರ್ಮಿಕರು ಬೀದಿಗೆ ಬೀಳುವ ಸ್ಥಿತಿ ತಂದವನು ಇದೇ ಸಜ್ಜನ. ಅಲ್ಲಿ 28 ಕೋಟಿ ರೂ. ಅವ್ಯವಹಾರವೆಸಗಿ ಆ ಕಾರ್ಖಾನೆಯ ಬಾಗಿಲು ಮುಚ್ಚುವಂತೆ ಮಾಡಿದ್ದವನು ಈತ.

ವರದಾ ಶುಗರ್ಸ್‌ನ 28 ಕೋಟಿ ರೂ. ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಹಕಾರಿ ಕಾಯ್ದೆ 64ರ ಅಡಿಯಲ್ಲಿ ವಿಚಾರಣೆ ನಡೆದು ಸದ್ಯ 24 ಲಕ್ಷ ಅವ್ಯವಹಾರ ಸಾಬೀತಾಗಿದೆ. ಈ ಹಣವನ್ನು ಮರುಪಾವತಿಸುವಂತೆ ಸಜ್ಜನನಿಗೆ ಆದೇಶ ನೀಡಲಾಗಿದೆ. ಇವತ್ತಿಗೂ ಈ ಹಣವನ್ನು ತುಂಬದೇ ಜಾರಿಕೊಳ್ಳುತ್ತಿರುವ ಸಜ್ಜನನ ಆಸ್ತಿಯ ಮೇಲೆ ಜಿಲ್ಲಾಧಿಕಾರಿ ಭೋಜಾ ಕೂಡಿಸುವುದು ಮಾತ್ರ ಬಾಕಿ ಇದೆ. ಅಷ್ಟಕ್ಕೂ ಫ್ಯಾಕ್ಟರಿ ಮಾಡಿ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಹಾಗೂ ರೈತರಿಗೆ ನೆರವು ನೀಡಲು ಸಜ್ಜನ ನಿಜವಾಗಲೂ ಬಯಸಿದ್ದರೆ ಪಟ್ಟಣದಿಂದ 25 ರಿಂದ 30 ಕಿ.ಮೀ. ದೂರದಲ್ಲಿ ಯಾವುದಾದರೂ ಖಾಲಿ ಇರುವ ಜಾಗೆ ಆಯ್ದುಕೊಂಡಿದ್ದರೆ ಅದಕ್ಕೆ ಅರ್ಥವಿರುತ್ತಿತ್ತು.

ಆದರೆ ಹಾಗೆ ಮಾಡದೆ ಸ್ವಹಿತಾಸಕ್ತಿಗಾಗಿ ಗೋವುಗಳಿಗಾಗಿ ಮೀಸಲಿಟ್ಟ ಗೋಮಾಳ ಜಾಗೆಗೆ ಕನ್ನ ಹಾಕಿರುವುದು ಆ ಗೋಮಾತೆಯ ಮೇಲಿರುವ ಇವರ ಅಪಾರ ನಕಲಿ ಭಕ್ತಿಯನ್ನು ಎತ್ತಿ ತೋರಿಸುತ್ತದೆ.

• ಹುರುಳಿಕುಪ್ಪಿ ವಿನಯ್


ರಸಿ ಟಿಎಸ್ಸೆಸ್ ಬಗ್ಗೆ ಇನ್ನೊಂದಿಷ್ಟು:

ದು ಮುಷ್ಗಿ ಮಾಮನ ಮಹಿಮೆ!!



ರಸಿಯ ಅಡಿಕೆ ಅವ್ಯವಹಾರದ ಅಡ್ಡೆ ಟಿಎಸ್ಸೆಸ್ ಬಗ್ಗೆ ಕಳೆದ ವಾರ ಯಲ್ಲಿ ಬಂದ ವರದಿ ಇಡೀ ಅಡಿಕೆ ಸೀಮೆಯನ್ನು ಬೆಚ್ಚಿಬೀಳಿಸಿದೆ. ಯ ಪ್ರತಿಗಳು ಬ್ಲ್ಯಾಕ್‌ನಲ್ಲಿ 50-60 ರೂ.ಗೆ ಹೋದರೆ, ವರದಿಯ ಪ್ರಿ ಕಾಪಿಗಳು 10 ರೂ.ಗೊಂದರಂತೆ ಮಲೆನಾಡಿನಲ್ಲಿ ಮಾರಾಟ ತ್ತಿದೆ! ಈಗ ಟಿಎಸ್ಸೆಸ್‌ನ ಅಡಿಕೆ ಮಾಫಿಯಾದ 'ಡಾನ್' ಅನಿಲ್‌ಕುಮಾರ್ ಗಿಯ ಪುರಾಣ 'ಪತ್ರಿಕೆ'ಗೆ ಸಿಕ್ಕಿದೆ. ಟಿಎಸ್ಸೆಸ್‌ನ ಯಕಶ್ಚಿತ್ ನೌಕರನಾದ ಮುಷ್ಗಿ ಸಂಸ್ಥೆಯ ಅಧ್ಯಕ್ಷ, ಮ್ಯಾನೇಜರ್, ನಿರ್ದೇಶಕರನ್ನೆಲ್ಲ ಪಳಗಿಸಿ ್‌ಮಾಲ್ ಮಾಡುತ್ತಿರುವ ಅನಾಹುತಕಾರಿ ಕತೆಯಿದು.

ಮುಷ್ಗಿ ಮಹಿಮೆಗಳು ಒಂದೆರಡಲ್ಲ; ಟಿಎಸ್ಸೆಸ್‌ನ ಕೋಟ್ಯಂತರ ಅಡಿಕೆ ವಹಿವಾಟಿನ ಸಾಮ್ರಾಜ್ಯಕ್ಕೆ ಅನಿಲ್ ಮುಷ್ಗಿಯೇ ಅಧಿಪತಿ! ಹೆಗಡೇರ ಕಾಲದಲ್ಲಿ ಟಿಎಸ್ಸೆಸ್ ನಡೆಸುವ 'ಸಾಮ್ರಾಟ್' ತೆಲಿನಲ್ಲಿ ರೂಮ್‌ಬಾಯ್ ಆಗಿ ನುಸುಳಿಕೊಂಡಿದ್ದ ಬ್ಬೇಪಾರಿ ಇವತ್ತು ನೂರಾರು ಕೋಟಿ ರೂ.ಗಳ ಸ್ನೇ ಆಳುತ್ತಿರುವುದು ರೋಚಕವಾಗಿದೆ. ಟಿಎಸ್ಸೆಸ್‌ನಲ್ಲಿ ಅದ್ದಕಸಬಿ ಆಡಿದ್ದೇ ಆಟ; ಹೇಳಿದ್ದೇ ಕಾನೂನು. ಎಂಡಿಗಳಂತೂ ಈತನ ಸಲಹೆ-ಸೂಚನೆ ಪಡೆದೇ ಹಾಕುತ್ತಾರೆ. ಆ ಮಟ್ಟಿಗೆ ಆತ ಅವರಿಬ್ಬರ ದೌರ್ಬಲ್ಯ ಮಾಡಿದ್ದಾನೆ.



ಅನಿಲ್ ಮುಷ್ಗಿ

ಎಸ್ಸೆಸ್‌ನ ಆಯಕಟ್ಟಿನ ಅಡಿಕೆ ಮಾರಾಟ ಮತ್ತು ವಿಭಾಗದ ಉಸ್ತುವಾರಿ ವಹಿಸಿಕೊಂಡಿರುವ ಮುಷ್ಗಿ ಟೋಪಿ ಹಾಕುವ ಅಕ್ರಮ ಅಡಿಕೆ ವ್ಯಾಪಾರದ 'ಅದೃಶ್ಯ ಫರ್ಮ್' ಕಟ್ಟಿಕೊಂಡಿದ್ದಾನೆ. ಸಂಸ್ಥೆಯ ಕೋಟಿ-ಲಕ್ಷದ ಅಡಿಕೆ ಖರೀದಿ- ವಹಿವಾಟಿನಲ್ಲಿ ದಗಾ-ಮೋಸ-ವಂಚನೆ ಮಾಡುತ್ತಿರುವ ಈ ಗಳು ಯಾರ್‍ಯಾರು ಗೊತ್ತೆ? ಸೊಸೈಟಿಯ ದಿ ಗ್ರೇಟ್ ಅಧ್ಯಕ್ಷ ಶಾಂತಾರಾಮ (ಶಾಹೆ), ಮ್ಯಾನೇಜರ್ ರವೀಶ್ ಹೆಗಡೆ ಮತ್ತು ತೋಟಗಾರ್ಸ್ ಕೋ-ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ರಾಮಕೃಷ್ಣ ಹೆಗಡೆಯ ದ್ಧಾರಕ ಶ್ರೀಧರ ಹೆಗಡೆಯಂಥ ಘಟಾನುಘಟಿಗಳು ಈ ದೋಖಾ ನಲ್ಲಿದ್ದಾರೆ. ರಾಮಕೃಷ್ಣ ಹೆಗಡೆ ಟಿಎಸ್ಸೆಸ್ ಜನಕ ಕಡವೆ ಹೆಗಡೇರ ಪುತ್ರರತ್ನ. ಅಂದರೆ ಶಾಹೆಯ ಭಾವನೆಂಟ; ಭಾವಯ್ಯನ ಗುಲಾಮಗಿರಿಯೇ ರಂಗದ ಹುದ್ದೆಗೆಲ್ಲ ಮೆರಿಟ್ ಎಂದು ಭಾವಿಸಿರುವ ಮಹಾನುಭಾವ. ಮುಷ್ಗಿಯ ಬೇನಾಮಿ ಅಡಿಕೆ ದಂಧೆಯ ಫರ್ಮ್ ಜುಮ್ಮನ ಕೊಪ್ಪದ ್ ಟ್ರೇಡರ್ಸ್‌ನ ಗುರು ಹೆಗಡೆ ಮತ್ತು ತ್ಯಾಗಲಿಯ ಯುವ ಎಂಟರ್‌ಪ್ರೈಸಸ್ ಸಂತೋಷ್ ಟ್ರೇಡರ್ಸ್‌ನ ದ್ವಿಪಾತ್ರ ನಟ ಉಮೇಶ್ ಹೆಗಡೆಗಳ ನಡೆಯುತ್ತದೆ. ಈ ದಗಾಕೋರ ಜೋಡಿ ಎರಡೇ ವರ್ಷದ ಹಿಂದೆ ಯಿದ್ದು ಹೋಗಿತ್ತು. ಟಿಎಸ್ಸೆಸ್ ಅಂಗಳ ಮತ್ತು ಎಪಿಎಂಸಿ ನಲ್ಲಿ ಈ ವಂಚಕರು ಇವತ್ತಿಗೂ ಹಲವು ಅಡಿಕೆ ದಸ್ಥರಿಗೆ 20-25 ಲಕ್ಷ ರೂ. ಕೊಡಬೇಕಿದೆ; ಎಪಿಎಂಸಿ ಗೋದಾಮು ಸೀಜ್ ಮಾಡಿತ್ತು.

ಂಧೆಯಿಲ್ಲದೆ ದಾರಿ ಖಾಲಾಗಿದ್ದ ಗುರು-ಉಮೇಶ್ ಗೇಡಿಗಳ ಕೇಂದ್ರದಂತಿರುವ ಸಾಮ್ರಾಟ್ ಎದುರು ದಿಯತೊಡಗಿದರು. ಅಲ್ಲೇ ಠಿಕಾಣಿ ಹೂಡಿ ರಾಜಕೀಯ ುತ್ತಿದ್ದ ಶಾಂತಾರಾಮ ಹೆಗಡೆಯ ಸಲಿಗೆ ಬೆಳೆಸಿ ಕೊಂಡು . ಹೆಂಡ-ಗೂಂಡಾಗರ್ದಿಯ ಗುರು ಹೆಗಡೆಗಂತೂ ಬಹುಬೇಗ ಶಿಷ್ಯತ್ವದ ದೀಕ್ಷೆಯೂ ಕರುಣಿಸಿಬಿಟ್ಟರು. ನೋಡುನೋಡುತ್ತಿದ್ದಂತೆಯೇ ಶಾಹೆಯ ಬಾಡಿಗಾರ್ಡ್ ಕುಖ್ಯಾತನಾಗಿ ಹೋದ! ಟಿಎಸ್ಸೆಸ್‌ನ ಸರ್ವಸಾಧಾರಣ ಸಭೆಗೆ ಈ ಗುರ್ ಗುರುವನ್ನು ಎದುರಾಳಿಗಳ ಮೇಲೆ ಛೂಬಿಡಲೆಂದೇ ಶಾಹೆ ಂಡು ಬರುವ ಪರಿಪಾಠ ಶುರುವಾಯ್ತು. ಈ ಗುರು ಹೆಗಡೆ ಶಾಹೆ ಶ್ರೀಧರ ಹೆಗಡೆಯ ಖಾಸಾ ಬಂಟ ಬೇರೆ.



ರವೀಶ್ [illegible]

ಎಸ್ಸೆಸ್‌ನ ಪಾರುಪತ್ಯಗಾರ ಮುಷ್ಗಿ-ಶಾಹೆ-ರಹೆಗಳ ಬಿಸಿನೆಸ್ ವ್ಯಕ್ಕೆ ದೊಡ್ಡ ಇತಿಹಾಸವೇ ಇದೆ. ಕಡವೆ ಕಾಲದಿಂದಲೂ ಮುಷ್ಗಿ-ಶಾಹೆ ಕಂಠಸ್ಥ ಮಿತ್ರರು. ಸಾಮ್ರಾಟ್‌ನಲ್ಲಿ ಚಾಕರಿ ಮಾಡುತ್ತಿದ್ದಾಗ ಈ ಮುಷ್ಗಿ ರೆಸ್ಟ್‌ಗೆ ಅಥವಾ ಹೊರಗೇನಾದರೂ ಹೋಗೋದಿದ್ದರೆ ಶಾಹೆಯನ್ನು ಕೌಂಟರ್‌ನಲ್ಲಿ ಕೂರಿಸಿ ಹೋಗುತ್ತಿದ್ದ, ಅಂಥ 'ದೋಸ್ತಿ' ಅವರಿಬ್ಬರದು. ಹೀಗಾಗಿ ಮ್ಯಾನೇಜರ್ ರವೀಶ್ ಹೆಗಡೆ ಬಾಸ್ ಸಖ ಹೇಳಿದ ಹಾಗೆ ಕೇಳುತ್ತಾನೆ; ಸಿಕ್ಕಷ್ಟು ಸ್ವಾಹಾ ಮಾಡುತ್ತಾನೆ. ಟಿಎಸ್ಸೆಸ್ ಜವಾಬ್ದಾರಿ ರಹೆಗೆ ವಹಿಸಿ ಎಮ್ಮೆಲ್ಲೆಯಾಗುವ ಹಗಲು ಕನಸಿನ ಹೊಟ್ಟು ರಾಜಕಾರಣದಲ್ಲಿ ನಿರತನಾಗಿರುವ ಶಾಹೆ ಹೇತ್ಲಾಂಡಿತನ ಮುಷ್ಗಿಗೆ ಮಸಲತ್ತು ಮಾಡಲು ಅನುಕೂಲಕರವಾಗಿದೆ. ಅಧ್ಯಕ್ಷ ಶಾಹೆಗೆ ಹೆದರದ ಮುಷ್ಗಿ ದಗಲುಬಾಜಿ ವ್ಯಾಪಾರಿಗಳಾದ ಗುರು-ಉಮೇಶ್‌ಗೆ ಸಲಾಮ್ ಹಾಕುತ್ತಾನೆ. ಈ ಕಳ್ಳ ಅಡಿಕೆ ವಹಿವಾಟುದಾರರಿಗೆ ಶ್ರೀಧರ ಹೆಗಡೆ ಅಪ್ಪನ ಟಿಆರ್‌ಸಿ ಬ್ಯಾಂಕ್‌ನಲ್ಲಿ ಹತ್ತಿರತ್ತಿರ 40 ಲಕ್ಷ ಸಾಲ ಕೊಡಿಸಿದ್ದಾನೆ. ಒಟ್ಟಿನಲ್ಲಿ ಪಟ್ ಅನಿಷ್ಟರು ಯಾವ್ಯಾವುದೋ ಅಡಜಸ್ಟ್‌ಮೆಂಟ್‌ನಿಂದಾಗಿ 'ಅನ್ಯೋನ್ಯ' ವಾಗಿದ್ದಾರೆ!

ತೀರಾ ಮೊನ್ನೆ ಮೊನ್ನೆವರೆಗೂ ಟಿಎಸ್ಸೆಸ್-ಎಪಿಎಂಸಿ ಮತ್ತು ಸಾಮ್ರಾಟ್ ಅಂಗಳದಲ್ಲಿ ತಿರಬೋಕಿಯಂತೆ ತಿರುಗಾಡುತ್ತಿದ್ದ ಗುರು-ಉಮೇಶ್ ಇವತ್ತು ಕೋಟಿಗೆ ತೂಗುತ್ತಾರೆ. 40 ಲಕ್ಷದ ಮನೆ-ಸೈಟ್-ಇನ್ನೋವಾ ಕಾರು- ಮಹೀಂದ್ರಾ ಪಿಕ್ ಅಪ್ ಗಾಡಿ ಒಡೆಯರಾಗಿದ್ದಾರೆ. ಈ ಖದೀಮರ 'ಅಭಿವೃದ್ಧಿ' ವೇಗದಲ್ಲೇ ಮುಷ್ಗಿ-ಶಾಹೆ-ರಾಹೆ-ಶ್ರೀಹೆಗಳ ಆರ್ಥಿಕ ಸ್ಥಿತಿ-ಗತಿ ಗ್ರಾಫ್ಸೂ ಏರಿರುವ ಸುದ್ದಿ ಶಿರ್ಸಿ ಸೀಮೆಯಲ್ಲಿ ತೇಲಾಡುತ್ತಿದೆ. ಮುಷ್ಗಿ ಗ್ರಾನೈಟ್ ಉದ್ಯಮದಲ್ಲಿ ಹಣ ತೊಡಗಿಸುವಷ್ಟು ಕೊಬ್ಬಿದ್ದಾನೆ. ಈ ಉದ್ಯಮದಲ್ಲಿ ಶ್ರೀಹೆ ಮತ್ತಿಬ್ಬರು ಶಿರಸಿ ಕಡೆಯ ಅಡಿಕೆ ದಂಧೆದಾರರು ಪಾರ್ಟನರ್ ಎಂದು ಟಿಎಸ್ಸೆಸ್‌ನ ಪಡಸಾಲೆಯಲ್ಲಿರುವ ಬಿಸಿಬಿಸಿ ವರ್ತಮಾನ.



ಶಾಂತಾರಾಂ ಹೆಗಡೆ

ಈ ಅಕ್ರಮ ಐಶ್ವರ್ಯ ಎಲ್ಲಿಂದ ಬಂತು? 2009 ಜುಲೈನಿಂದ 2010 ರ ಜನವರಿವರೆಗಿನ ಗುರು-ಉಮೇಶ್ ಟಿಎಸ್ಸೆಸ್‌ನಲ್ಲಿ ಮಾಡಿರುವ ಅನುಮಾನಾಸ್ಪದ ಅಡಿಕೆ ವಹಿವಾಟಿನ ಜಾಡು ಹಿಡಿದು ಹೊರಟರೆ ಕಳ್ಳ ಶ್ರೀಮಂತಿಕೆಯ ಗುಟ್ಟು ರಟ್ಟಾಗುತ್ತದೆ! ಈ ಏಳು ತಿಂಗಳ ಅವಧಿಯಲ್ಲಿ 8-10 ಕ್ವಿಂಟಾಲ್ ಅಡಿಕೆ ಟಿಎಸ್ಸೆಸ್‌ಗೆ ಗುರು-ಉಮೇಶ್ ಮಾರಾಟ ಮಾಡಿದ್ದಾರೆ. ಇದು ಶಿರಸಿ ಸೀಮೆಯಾಚೆಯಿಂದ ತಂದ ಸೆಕೆಂಡ್ಸ್ ಅಡಿಕೆ. ಗೋವಾ-ಚೆನ್ನಗಿರಿ-ಚಿಕ್ಕಮಗಳೂರು-ಸಾಗರ-ಶಿವಮೊಗ್ಗ ಕಡೆಯಿಂದ ತಂದ ಈ ಕಳಪೆ ಅಡಿಕೆಗೆ ಬಣ್ಣ ಬೆರೆಸಿ ಮಿಕ್ಸಿಂಗ್ ಮಾಡಿ ಫಸ್ಟ್‌ಗ್ರೇಡ್ ಅಡಿಕೆ ದರಕ್ಕೆ ಮಾರಲಾಗಿದೆ. 9-10 ಸಾವಿರ ರೇಟಿನ ಅಡಿಕೆಯನ್ನು 12-13 ಸಾವಿರಕ್ಕೆ ಒಂದು ಕ್ವಿಂಟಾಲ್‌ನಂತೆ ಮಾರಿ ಭರ್ಜರಿ ಲೂಟಿ ಮಾಡಲಾಗಿದೆ. ಪ್ರಾಮಾಣಿಕ ತೋಟಗರ-ನಿಯತ್ತಿನ ವ್ಯಾಪಾರಿಗಳ ಅಡಿಕೆ ಯೋಗ್ಯ ರೇಟು ಕೊಡದೆ ಸತಾಯಿಸಿ ವಾಪಸ್ ಅಡಿಕೆ ಒಯ್ಯುವ ಷಡ್ಯಂತ್ರ ಮಾಡಿ ಗುರು-ಉಮೇಶ್‌ರಿಗೆ ಅವ್ಯವಹಾರಕ್ಕೆ ಅವಕಾಶ ಕೊಡಲಾಗಿದೆ. ಮುಷ್ಗಿಯ ಮುತುವರ್ಜಿಯಲ್ಲಿ ನಡೆದ ಈ ದಗಾಕೋರ ದಂಧೆಯಲ್ಲಿ ಗುರು-ಉಮೇಶ್ ಬರೋಬ್ಬರಿ 1.50 ಕೋಟಿ ರೂ. ಅಕ್ರಮವಾಗಿ ಕೂಡಿಹಾಕಿದ್ದಾರೆ. ಇದರಲ್ಲಿ ಬೇನಾಮಿ ಪಾಲುದಾರರಾದ ನಾಲ್ವರಿಗೂ ಪಾಲು ಸಂದಾಯ ವಾಗಿದೆ. ಆ ಸಮಪಾಲು ಮುಷ್ಗಿಯೇ ಕುಂತು ಮಾಡಿದ್ದಾನೆ!!

ಶಾಹೆಯ ಟಿಎಸ್ಸೆಸ್ ಹೇಳುವುದೇ ಒಂದು-ಮಾಡುವುದು ಮತ್ತೊಂದು. ಸ್ಥಳೀಯ ತೋಟಿಗರಿಗೆ ಯೋಗ್ಯ ದರ ಕೊಡುವುದೇ ನಮ್ಮ ಉದ್ದೇಶ ಅಂತಾನೆ ಶಾಂತಣ್ಣ. ಆದರೆ ಸ್ಥಳೀಯ ತೋಟಿಗರಿಗೆ ಮೋಸ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಶಿರಸಿ-ಸಿದ್ದಾಪುರ ಮತ್ತು ಯಲ್ಲಾಪುರ ಭಾಗದ ಅಡಿಕೆ ಖರೀದಿಸಿದರೆ ಸ್ಥಳೀಯರಿಗೆ ಅನುಕೂಲವಾಗುತ್ತಿತ್ತು, ಆದರೆ ಇದರಲ್ಲಿ ಮುಷ್ಗಿ-ರವೀಶ್-ಶಾಹೆ ಬಳಗಕ್ಕೆ ಗೋಲ್‌ಮಾಲ್ ಮಾಡಲು ಆಗುವುದಿಲ್ಲ, ಹೀಗಾಗಿ ಹೊರಗಿನಿಂದ ಅಪಾರ ಅಡಿಕೆ ತಂದು ಮಿಕ್ಸಿಂಗ್- ಕಲರಿಂಗ್ ಮಾಡಿ ಟಿಎಸ್ಸೆಸ್ ಖಜಾನೆ ಖಾಲಿ ಮಾಡುತ್ತಿದೆ ಈ ಆರು ಅಕ್ರಮ ಅಡಿಕೆ ದಂಧೆದಾರರ ಗ್ಯಾಂಗು.

ಟಿಎಸ್ಸೆಸ್‌ನ ಸ್ವೀಟ್ ಸುಪಾರಿ ಘಟಕದಲ್ಲೂ ಈ ಆರು ಅಸಿಷ್ಟರದೇ ಮನೋಪಲಿ ದಂಧೆ! ಸಾವಿರಾರು ಕ್ವಿಂಟಾಲ್ ಕಳಪೆ ಅಡಿಕೆಗೆ ಬಣ್ಣ ಹಾಕಿ ಹೈರೇಟ್‌ಗೆ ಗುರು-ಉಮೇಶ್-ಮುಷ್ಗಿ ಮಾರುತ್ತಿದ್ದಾರೆ. ಟಿಎಸ್ಸೆಸ್‌ನಲ್ಲೇ ಅಡಿಕೆ ಖರೀದಿಸಿ ಅಲ್ಲೇ ಪ್ರತಿ ಕ್ವಿಂಟಲ್‌ಗೆ 2-3 ಸಾವಿರ ಹೆಚ್ಚಿಗೆ ರೇಟಿನಲ್ಲಿ ಸ್ವೀಟ್ ಸುಪಾರಿ ಘಟಕಕ್ಕೆ ಮಾರಿ ದುಡ್ಡು ಗುಡ್ಡೆ ಹಾಕಲಾಗುತ್ತಿದೆ. ಇದು ಬರೀ ದಾಖಲೆಗಳಲ್ಲೇ ಆಗುವ ಮಾಯಾಜಾದೂ. ಇದೆಲ್ಲ ತುಂಬ ವ್ಯವಸ್ಥಿತವಾಗಿ ನಡೆಯುತ್ತಿದೆ. ಗುರು-ಉಮೇಶ್ ಒಂದು ವರ್ಷದಲ್ಲಿ ಎಷ್ಟು ಅಡಿಕೆ ಟಿಎಸ್ಸೆಸ್‌ಗೆ ಮಾರಿದ್ದಾರೆ? ಎಷ್ಟು ಬಾರಿ ಟೆಂಡರ್ ಹಾಕಿದ್ದಾರೆ? ಇವರ ಟರ್ನ್‌ಓವರ್ ಎಷ್ಟು? ಎಂಬುದು ಪರಿಶೀಲಿಸಿದರೆ ಮುಷ್ಗಿ-ರವೀಶರ ಕ್ರಿಮಿನಲ್ ಕರ್ಮಕಾಂಡ ಹೊರಬರುತ್ತದೆ!!

ದೊಡ್ಡ ಪ್ರಮಾಣದಲ್ಲಿ ಟಿಎಸ್ಸೆಸ್ ಅಡಿಕೆಯನ್ನು ಹೊರಗಡೆ ಸೇಲ್ ಸಹ ಮಾಡುತ್ತಿದೆ. ಇಲ್ಲೂ ಕಾನೂನುಬಾಹಿರ ಕಿತಾಪತಿ ಜೋರಾಗಿ ನಡೆದಿದೆ! ಮುಷ್ಗಿ ಮಾಮನ ಸಖ್ಯದ ಮೂರ್‍ನಾಲ್ಕು ಮಂದಿಯದೊಂದು ಫರ್ಮ್ ಶಿವಮೊಗ್ಗದಲ್ಲಿದೆ. ಇದೊಂದು ಅಡಿಕೆ ಮಾಫಿಯಾ. ಈ ವಂಚಕರಿಗೆ ಟಿಎಸ್ಸೆಸ್ ಸಾವಿರಾರು ಕ್ವಿಂಟಾಲ್ ಅಡಿಕೆ ಮಾರುತ್ತಿದೆ. ಬಿಲ್ ಶಿವಮೊಗ್ಗೆಗೆ ಹೋಗುತ್ತದೆ. ಅಡಿಕೆ ಅಲ್ಲಿಂದ ಬೆಂಗಳೂರಿಗೆ ಸಾಗುತ್ತದೆ. ಅಲ್ಲಿ ಅಡಿಕೆ ಪುಡಿ ಮಾಡಲಾಗುತ್ತದೆ. ಅದು ಕಟ್ಟಿಗೆ ಪುಡಿಯೆಂದು ರೈಲಲ್ಲಿ ಗುಟಕಾ ಕಂಪನಿಗಳಿಗೆ ಹೋಗುತ್ತದೆ. ಇತ್ತ ಟಿಎಸ್ಸೆಸ್ ಬಿಲ್ ಖಾಸಗಿ ವ್ಯಾಪಾರಿ ಯಾರಿಗೋ ಹರಾಜಾಗುತ್ತದೆ. ಯಾರಿಗೆ ಬೇಕಿದ್ದರೂ ಟಿಎಸ್ಸೆಸ್ ಬಿಲ್ ಕಮಿಷನ್ ಕೊಟ್ಟರೆ ಮುಷ್ಗಿ-ರವೀಶ್ ಧಾವಾಳವಾಗಿ ಕೊಡುತ್ತಾರೆ, ಬಿಡಿ!

ಮಾರಿದ ಅಡಿಕೆಯ ಹಣ ಬರುವಾಗಲೂ ಕಣ್ಕಟ್ಟು! ಟಿಎಸ್ಸೆಸ್ ಬಿಲ್ ಹಾಕಿದವರಿಂದ ದುಡ್ಡು ಬರುವುದಿಲ್ಲ. ಬೇರ್‍ಯಾರದೋ ಖಾತೆಯಿಂದ ಡಿಡಿ ಬರುತ್ತದೆ; ಕೆಲವು ಹಣ ಹವಾಲಾದಿಂದಲೂ ಬರುತ್ತದೆ. ಅದಕ್ಕೆಂದೇ ಮುಷ್ಗಿ ಪದೇಪದೇ ಬೆಂಗಳೂರಿಗೆ ಹೋಗಿಬರ್‍ತಾನೆ; ಅಪಾರ ಹಣದ ಬ್ಯಾಗ್ ತರ್‍ತಾನೆ. ಇದೆಲ್ಲ ಆದಾಯ ತೆರಿಗೆ-ಲೋಕಾಯುಕ್ತರಿಗೆ ಛಾಲೆಂಜಿಂಗ್ ಕೇಸ್‌ಗಳು! ಈ ಗೋಲ್ ಮಾಲ್ ದಂಧೆ ದುಡ್ಡನ್ನು ಮುಷ್ಗಿ ಇಳಕಲ್‌ನ ಶ್ರೀ ಸಿದ್ಧಿ ವಿನಾಯಕ ಗ್ರಾನೈಟ್ ಕಂಪನಿಯಲ್ಲಿ ತೊಡಗಿಸಿದ್ದಾನೆಂದು ಟಿಎಸ್ಸೆಸ್‌ನ ಕಂಬ-ಕಂಬಗಳೂ ಪಿಸುಗುಡುತ್ತಿವೆ. ಈತನ ಜತೆ ಶ್ರೀಧರ ಹೆಗಡೆ ಮತ್ತು ಶಿರಸಿ ಕಡೆಯ ಮತ್ತಿಬ್ಬರು ಅಡಿಕೆ ವ್ಯಾಪಾರಿಗಳು ಈ ಗ್ರಾನೈಟ್ ಬಿಸಿನೆಸ್‌ನಲ್ಲಿ ಪಾರ್ಟನರ್ಸ್‌ಗಳಂತೆ!

ಟಿಎಸ್ಸೆಸ್‌ನ ದೋನಂಬರ್ ದಂಧೆಗಳನ್ನು ಸಮರ್ಥವಾಗಿ ನಿಭಾಯಿಸುತ್ತಾನೆಂದೇ ಮುಷ್ಗಿಯನ್ನು ಎಂಥ ಕಂಪ್ಲೇಂಟು ಬಂದರೂ ಖರೀದಿ ಮತ್ತು ಮಾರಾಟ ಕೇಂದ್ರದಿಂದ ಶಾಹೆ ಕದಲಿಸುತ್ತಿಲ್ಲ. ಹಮಾಲರನ್ನು ಮತ್ತು ವ್ಯಾಪಾರಿಗಳನ್ನು ಅವನಂತೆ ಕಂಟ್ರೋಲ್ ಮಾಡೋ ಕ್ಯಪಾಸಿಟಿ ಬೇರ್‍ಯಾರಿಗೂ ಇಲ್ಲವೆಂಬುದು 'ಅಧ್ಯಕ್ಷ' ಶಾಹೆ ಸಬೂಬು. ಅಕಸ್ಮಾತ್ ಮುಷ್ಗಿ 'ಇಲ್ಲ'ವಾದರೆ ಅಡಿಕೆ ಖರೀದಿ-ಮಾರಾಟ ಟಿಎಸ್ಸೆಸ್‌ನಲ್ಲಿ 'ಇಲ್ಲ'ವಾಗುತ್ತದೆಂದಾಯ್ತಲ್ಲವೇ? ಷಟ್ ಗೋಲ್‌ಮಾಲಿಗರ ಕರಾಮತ್ತಿಗೆ ತೊಂದರೆ ಆಗಬಾರದೆಂಬ ಏಕೈಕ ಕಾರಣಕ್ಕೆ ಮುಷ್ಗಿಯನ್ನು ಬೇರೆಡೆ ವರ್ಗಾಯಿಸುತ್ತಿಲ್ಲ ಶಾಹೆ-ರಹೆ ಕೋಳಿ!!

ಅಡಿಕೆ ಕಳ್ಳಗುರು ಮತ್ತು ಉಮೇಶ್ ಮಾಣಿಗಳ ಮೇಲೆ ಆದಾಯ ತೆರಿಗೆ ರೇಡಾದರೆ ಈ ಕರ್ಮಕಾಂಡ ಬಯಲಾಗುತ್ತದೆ. ಆಗ ಟಿಎಸ್ಸೆಸ್ ಖಾಲಿ ಮಾಡುತ್ತಿರುವ ಹೆಗ್ಗಣ ಮುಷ್ಗಿಯೂ ಬೋನಿಗೆ ಬೀಳುತ್ತಾನೆ. ಟಿಎಸ್ಸೆಸ್ ಬಿಲ್ ಹಾಕಿ ಯಾರ್‍ಯಾರಿಗೆ ಅಡಿಕೆ ಮಾರಿದೆ? ಅವರಿಂದಲೇ ಹಣ ಬಂದಿದೆಯಾ? ಡಿಡಿ ಬಂದರೆ ಅದು ಯಾರ ಖಾತೆಯದು? ಯಾವ ಬ್ಯಾಂಕಿನದ್ದು? ಇದೆಲ್ಲ ತನಿಖೆಯಾದರೆ ಕಳ್ಳ ಅಡಿಕೆ ದಂಧೆಯ 'ಡಾನ್'ನ ಅನಾವರಣ ಆಗುತ್ತದೆ! ಆತನ ಹಿಂದಿರುವ 'ದೊರೆ' ದರ್ಶನವೂ ಸಿಗುತ್ತದೆ!!

ಈ ಚೋರ-ಚಾಂಡಾಲರಿಂದ ಅಮಾಯಕ ತೋಟಗರ ಟಿಎಸ್ಸೆಸ್‌ಗೆ ಮುಕ್ತಿಯೆಂದು? ಹಾಗಂತ ಶಿರಸಿ ಸೀಮೆ ಅಡಿಕೆ ಬೆಳೆಗಾರರು ಕೇಳುತ್ತಿದ್ದಾರೆ.

• ನಹುಶ

ಕೊಳ್ಳೇಗಾಲ: ಬಡವರ ಮೇಲೆ ಬುಲ್ಡೋಜರ್!



ೊಳ್ಳೇಗಾಲ ನಗರಸಭೆಯ ಶನಿಸಂತಾನಿಗಳು ನ ಬದುಕಿನ ಮೇಲೆ ಬುಲ್ಡೋಜರ್ ಹತ್ತಿಸಿ ಹಾಕಿದ್ದಾರೆ. ರಸ್ತೆ ಅಗಲೀಕರಣದ ಹಿನ್ನೆಲೆಯಲ್ಲಿ ಟ್ಟಣೆ ಇರುವ ಪ್ರದೇಶ ಬಿಟ್ಟು, ಅಷ್ಟಾಗಿ ಣೆಯಿರದ ರಸ್ತೆಗಳ ಆಸುಪಾಸಿಗೆ ೋಜರ್ ನುಗ್ಗಿಸಿ ಬಡವರ ಮನೆಗಳನ್ನು ನೆಲ ೊಳಿಸಲಾಗಿದೆ.

ನ್ಯಾಯಾಲಯದ ಆದೇಶದ ಪ್ರಕಾರ ಜನದಟ್ಟಣೆಯ ಸ್ಥಳಗಳಾದ ಡಾ. ರಾಜ್‌ಕುಮಾರ್ ರಸ್ತೆ ಅಂಬೇಡ್ಕರ್ ರಸ್ತೆ ಎಸ್ಪಿ ರೋಡ್ ಮತ್ತಿತರೆಡೆ ಅಕ್ರಮ ಒತ್ತುವರಿ ತೆರವುಗೊಳಿಸಬೇಕಿತ್ತು, ಆದರೆ ಬಿಜೆಪಿ ಶಾಸಕ ಜಿ.ಎನ್. ನಂಜುಂಡ ಸ್ವಾಮಿಯ ಸಮ್ಮುಖದಲ್ಲಿ ಮನಬಂದಂತೆ ಮಾತಾಡಿಕೊಂಡ ನಗರಸಭೆ ಪ್ರಭೃತಿಗಳು ಎಂ.ಜಿ., ಎಸ್.ಪಿ. ಹಿಂಬದಿಯ ರಸ್ತೆ ಹಾಗೂ ಎಸ್.ಟಿ ರಸ್ತೆಗಳ ಒತ್ತುವರಿ ತೆರವುಗೊಳಿಸಲು ಮುಂದಾದರು. ಅತ್ಯಂತ ದಟ್ಟಣೆಯಿರುವ ಡಾ. ರಾಜ್‌ಕುಮಾರ್ ರಸ್ತೆ ಹಾಗೂ ಅಂಬೇಡ್ಕರ್ ರಸ್ತೆ ಅಗಲೀಕರಣ ಮಾಡುವ ಗೋಜಿಗೆ ಹೋಗಲೇ ಇಲ್ಲ.



ಶಿವಕುಮಾರ್

ಇದರಲ್ಲೂ ಅಧಿಕಾರಿಗಳು ಅತ್ಯಂತ ದರ್ಪ, ಸರ್ವಾಧಿಕಾರ ಮೆರೆದಿದ್ದಾರೆ. ಅಗಲೀಕರಣಕ್ಕೆ ಮುನ್ನ ಯಾರೊಬ್ಬರಿಗೂ ನೋಟಿಸ್ ಕೊಟ್ಟಿಲ್ಲ, ಯಾವ ರಸ್ತೆಯಲ್ಲಿ ಎಷ್ಟು ಒತ್ತುವರಿಯಾಗಿದೆಯೆಂಬ ಮಾಹಿತಿ ಹಾಗೂ ನಕ್ಷೆಯನ್ನೂ ಕೊಡಲಿಲ್ಲ, ಆದರೆ ಇದ್ದಕ್ಕಿದ್ದಂತೆ ಬುಲ್ಡೋಜರುಗಳೊಂದಿಗೆ ದೌಡಾಯಿಸಿ ಮನೆಗಳನ್ನು ಕೆಡವಿ ಬಡವರನ್ನು ಬೀದಿಗೆ ಬೀಳಿಸಿದರು.

ಈ ಪ್ರಕರಣದ ಹಿಂದೆ ನಗರಸಭಾ ಸದಸ್ಯ ಶಿವಕುಮಾರನ ಕೈವಾಡವಿದೆ ಎಂಬ ಗುಮಾನಿ ದಟ್ಟವಾಗಿದೆ. ರಸ್ತೆ ಅಗಲೀಕರಣದ ಗುಲ್ಲೆದ್ದ ಬಳಿಕ ಈತ ಅದರಲ್ಲೇ ಕಾಸು ಕೀಳುವ ಹುನ್ನಾರ ನಡೆಸುತ್ತಿದ್ದ ಅಕ್ರಮ ಒತ್ತುವರಿದಾರರ ಬೆನ್ನು ಬಿದ್ದು 'ನಿಮ್ಮ ಸ್ವತ್ತು ಪೂರ್ತಿ ನಾಶವಾಗದ ಹಾಗೆ ನೋಡ್ಕೋತೀನಿ' ಅಂತೆಲ್ಲ ತಲೆ ತೀಡಿದ್ದ, ಜೊತೆಗೆ ಅದಕ್ಕೆ ಬೇಕಾದಷ್ಟು ಹಣ ಹೊಂದಿಸಿಕೊಳ್ಳಲೂ ಸೂಚನೆ ನೀಡಿದ್ದ. ಈ ಹಿನ್ನೆಲೆಯಲ್ಲೇ ರಾಜ್, ಅಂಬೇಡ್ಕರ್ ರಸ್ತೆ ಅಗಲೀಕರಣ ಮಾಡದೆ ಎಸ್.ಟಿ. ರಸ್ತೆ ಹಾಗೂ ಎಂ.ಜಿ., ಎಸ್.ಪಿ. ಹಿಂಭಾಗದ ರಸ್ತೆಗಳತ್ತ ಮಾತ್ರ ಬುಲ್ಡೋಜರ್ ನುಗ್ಗಿಸಿದ್ದಾನೆಂಬ ಪುಕಾರುಗಳೆದ್ದಿವೆ.



ನಂಜುಂಡಸ್ವಾಮಿ

ಈ ಬಗ್ಗೆ ಬದುಕು ಕಳೆದುಕೊಂಡ ಸಾರ್ವಜನಿಕರು ಪ್ರತಿಭಟಿಸಿದ್ದೂ ನಡೆದಿದೆ. ನಿಜವಾಗಿ ಆಗಬೇಕಿರುವಷ್ಟು ಅಗಲೀಕರಣ ನಡೆಯಲಿ. ಆದರೆ ಶಿವಕುಮಾರನ ತೆವಲು-ದೀಲುಗಳಿಗನುಸಾರವಾಗಿ ಪ್ರಾಥಮಿಕ ಕಾನೂನುಗಳನ್ನು ಮೀರಿ ವರ್ತಿಸುವುದು ಸರಿಯಲ್ಲ.


ನಂಜುಂಡಸ್ವಾಮಿಗೆ ತನ್ನ ಶಿಷ್ಯನ ಅಧ್ವಾನಗಳು ಕಾಣಿಸುತ್ತಿಲ್ಲವೆ?

-ಚಿಕ್ಕಮಾಳಿಗೆ

ಲಂಕೇಶ್

'ದೇಶಕಾಲ' ನೀನಾಸಂ ಎಂಬ ಚಿನ್ನದ ಸರಪಣಿಯ 'ಅಗೋಚರ' ಕಿರು ಕೊಂಡಿ

ಭಾಗ 3



ಈ ಕಾಲಘಟ್ಟದಲ್ಲಿ ಹುಟ್ಟಿದ ಪತ್ರಿಕೆ 'ದೇಶಕಾಲ'. ಇದೂ ಕೂಡ ನೀನಾಸಂನ ಬೆಂಬಲವನ್ನೇ ಆಶ್ರಯಿಸಿರುವ ಪತ್ರಿಕೆ. ಇಲ್ಲಿ ಕೆಲಸ ಮಾಡುತ್ತಿರುವುದೂ ಮತ್ತೆ ಅದೇ ಭಾವನಾತ್ಮಕ ಸಂಬಂಧವೇ, ಅದೇ ಶ್ರೇಷ್ಠತೆಯ ವ್ಯಸನವೇ. ಯಾರನ್ನೆಲ್ಲ ಹೊರಗಿಡಬೇಕು ಎಂಬ ಅದೇ ಲೆಕ್ಕಾಚಾರವೇ. ನಾವು ಕೊಡುವವರು, ನೀವು ತೆಗೆದುಕೊಳ್ಳುವವರು ಎಂಬ ಅದೇ ಧೋರಣೆಯೇ. ಈಗ ನಡೆಯುತ್ತಿರುವ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲರೂ ತಮ್ಮ ಸಿಟ್ಟು, ದುಗುಡ, ವಿಷಾದ ವ್ಯಕ್ತಪಡಿಸಿರುವುದು 'ದೇಶಕಾಲ' ಜಾರಿಗೆ ತಂದಿರುವ ಈ ನವ ಶ್ರೇಣೀಕೃತ ವ್ಯವಸ್ಥೆಯ ಬಗ್ಗೆಯೇ ಎಂಬುದು ಬಹಳ ಮುಖ್ಯ.

'ದೇಶಕಾಲ'ದ ಕುರಿತು ನಡೆಯುತ್ತಿರುವ ಚರ್ಚೆ ಒಂದು ತಾರ್ಕಿಕ ಅಂತ್ಯವನ್ನು ಮುಟ್ಟುತ್ತಿದೆ ಎಂದು ನನಗನಿಸುತ್ತಿದೆ. ಮತ್ತೆ ಈ ಚರ್ಚೆಯಲ್ಲಿ ಭಾಗವಹಿಸುವ ಯೋಚನೆ ನನಗೆ ಇರಲಿಲ್ಲ, ನನ್ನದೇ ಅಂತಿಮ ಮಾತು ಆಗಬೇಕೆಂಬ ಹಠವೂ ನನಗಿಲ್ಲ, ಆದರೆ ಇಡೀ ಚರ್ಚೆ ಕಳೆದ ಐವತ್ತು ವರ್ಷಗಳಲ್ಲಿ ಕನ್ನಡದಲ್ಲಿ ನಡೆದ 'ಸಾಂಸ್ಕೃತಿಕ ರಾಜಕಾರಣ'ದ ಪುನರಾವಲೋಕನ ಮಾಡಬೇಕಾದ ತುರ್ತಿನ ಕಡೆಗೆ ಬೊಟ್ಟು ಮಾಡಿ ನಿಂತಿರುವುದು ನಿಜಕ್ಕೂ ಮುಖ್ಯವಾದ ಬೆಳವಣಿಗೆಯೇ. ಈ ಹಿನ್ನಲೆಯಲ್ಲಿ ಕೆಲವು ಮಾತುಗಳನ್ನು ಇಲ್ಲಿ ಸೇರಿಸುತ್ತಿದ್ದೇನೆ. 'ದೇಶಕಾಲ'ಕ್ಕೂ ಬಹಳ ಹಿಂದೆಯೇ ಹೇಗೆ ಒಂದು ಭಾವುಕ ಕೂಟ ಕೆಲಸ ಮಾಡುತ್ತಾ ಬಂದಿದೆ ಮತ್ತು ಇಂದಿನ ಬೆಳವಣಿಗೆಗಳಿಗೆಲ್ಲ ಒಂದು ಸ್ಪಷ್ಟ ರೂಪ ನೀಡುವುದರಲ್ಲಿ ಮೊದಲು 'ಸಾಕ್ಷಿ' ಬಳಿಕ ನೀನಾಸಂ ಯಾವ ಚಾರಿತ್ರಿಕ ಪಾತ್ರ ವಹಿಸಿವೆ ಎಂಬುದರತ್ತ ಗಮನ ಸೆಳೆಯುವುದು ನನ್ನ ಈ ಬರಹದ ಉದ್ದೇಶ.



• ವಸಂತ ಬನ್ನಾಡಿ

ಕನ್ನಡದ . ಹಿರಿಯ ಲೇಖಕರಾದ ಕಾರಂತ, ಕುವೆಂಪು, ಬೇಂದ್ರೆಯವರು ಬದುಕಿದ, ಸಾಹಿತ್ಯ ರಚನೆ ಮಾಡಿದ ರೀತಿಗೂ ಅರವತ್ತರ ದಶಕದ ಸುಮಾರಿಗೆ ನವ್ಯ ಸಾಹಿತ್ಯದ ಹೆಸರಿನಲ್ಲಿ ಹಿಂದಿನದ್ದನೆಲ್ಲ ತಿರಸ್ಕರಿಸಿ ಕಾರ್ಯೋನ್ಮುಖರಾದ ಗೋಪಾಲಕೃಷ್ಣ ಅಡಿಗ, ಅನಂತಮೂರ್ತಿ ಮತ್ತು ಸುಬ್ಬಣ್ಣ ವರ್ತಿಸಿದ ರೀತಿಗೂ ಇರುವ ವ್ಯತ್ಯಾಸವನ್ನು ತುಲನೆ ಮಾಡಿ ನೋಡಿದಾಗ ಮಾತ್ರ ನನ್ನ ಮೇಲಿನ ಮಾತುಗಳ ಅರ್ಥ ಸ್ಪಷ್ಟವಾದೀತು. 'ದೇಶಕಾಲ'ಕ್ಕೂ ಈ ಭಾವುಕ ಕೂಟಕ್ಕೂ ನೇರ ಸಂಬಂಧ ಇದೆ ಎಂಬುದೂ ಇಲ್ಲಿ ಮುಖ್ಯ.

ಬೇಂದ್ರೆ, ಕುವೆಂಪು, ಕಾರಂತರು ಬದುಕಿದ ರೀತಿಯೇ ನಮ್ಮನ್ನು ಅಚ್ಚರಿಗೆ ಒಡ್ಡುವಂಥದ್ದು. ಅವರು ತಮ್ಮ ನಡುವೆ ಪರಸ್ಪರ ಜಗಳಾಡಿದ್ದು ಕಡಿಮೆ. ಹಾಗಂತ ಭಾವುಕ ನೆಲೆಯಲ್ಲಿ ಒಂದಾಗಿ ಕೆಲಸ ಮಾಡಿದವರೂ ಅಲ್ಲ, ಒಂದು ಅಂತರ ಇಟ್ಟುಕೊಂಡು ಅವರು ಬದುಕಿದರು. ತಮ್ಮದೇ ಪ್ರಪಂಚ ಕಟ್ಟಿಕೊಂಡು ಬಹಳ ದೊಡ್ಡ ಕೃತಿಗಳನ್ನು ನೀಡಿದರು. ಸ್ವಂತ ಪ್ರಕಾಶನ ಬಿಟ್ಟರೆ ಯಾವುದೇ ಸಂಸ್ಥೆಗಳನ್ನು ಕಟ್ಟಿದವರಲ್ಲ, ಸ್ಥಾವರಗೊಂಡವರಲ್ಲ,

ಅದೇ ಅಡಿಗ, ಅನಂತಮೂರ್ತಿ ಹಾಗೂ ಸುಬ್ಬಣ್ಣನವರನ್ನು ನೋಡಿ. ತಮ್ಮ ಆಲೋಚನೆಗಳಿಗೆ ಇವರು ನೀನಾಸಂ, ಸಾಕ್ಷಿ, ರುಜುವಾತು ಮುಂತಾಗಿ ಸಾಂಸ್ಥಿಕ ರೂಪ ಕೊಟ್ಟರು. ಈ ಸಂಸ್ಥೆಗಳು ಅವರದೇ ಧೋರಣೆಯನ್ನು ಪ್ರಚುರ ಪಡಿಸಲೆಂದೇ ಹುಟ್ಟಿಕೊಂಡಂಥವು. 'ಸಾಕ್ಷಿ'ಯಂತೂ ನವ್ಯದ ಮುಖವಾಣಿಯಾಗಿಯೇ ಹುಟ್ಟಿಕೊಂಡ ಪತ್ರಿಕೆ. ಹಲವು ಪೂರ್ವ ತೀರ್ಮಾನಗಳನ್ನು ತನ್ನ ಮಡಿಲಲ್ಲಿ ಕಟ್ಟಿಕೊಂಡೇ ಹೊರಬಂದ ಪತ್ರಿಕೆ. ಆ ತುರ್ತು ಇತ್ತೇ?


ಇತ್ತು ಎಂಬುದು ರಾಜಶೇಖರ ಅವರ ವಾದ.

ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಅಡಿಗರಿಗೆ ಬೇಂದ್ರೆ, ಕುವೆಂಪು ಮುಂತಾದವರ ಜೊತೆಗಿದ್ದ ಜಗಳದ ಬಗ್ಗೆ ಬರೆಯುತ್ತಾ ಜಿ. ರಾಜಶೇಖರ್ "ಈ ಜಗಳ ಮತ್ತು ಓರಗೆಯವರ ಕುರಿತು ತಿರಸ್ಕಾರ ಅಡಿಗರ ಕಾವ್ಯ ಮೀಮಾಂಸೆ ಮತ್ತು ಜೀವನದೃಷ್ಟಿ ಎರಡಕ್ಕೂ ಅನಿವಾರ್ಯವಾಗಿದ್ದಿತು" ಎಂದು ಬರೆದಿದ್ದಾರೆ. ನನಗೆ ಹಾಗೆ ಅನಿಸುತ್ತಿಲ್ಲ, ಅದು ಅಡಿಗರು ತಾವಾಗಿಯೇ ಸೃಷ್ಟಿಸಿಕೊಂಡ ಅನಿವಾರ್ಯತೆ ಆಗಿತ್ತು ಅಷ್ಟೇ. ಮಾತ್ರವಲ್ಲ, ಅಡಿಗರ ಈ ಜೀವನದೃಷ್ಟಿಯಲ್ಲಿಯೇ ಸಮಸ್ಯೆಗಳಿವೆ. ಅಡಿಗರ 'ಆರ್ಷೇಯ ನಿಲುವು'ಗಳಿಗೆ ಹಾಗೆ ಹಿಂದಿನದನ್ನು ತಿರಸ್ಕರಿಸಿ ಹೊಸದೊಂದನ್ನು ಸ್ಥಾಪಿಸುವ ಬಲವೂ ಇರಲಿಲ್ಲ, ಹೀಗಾಗಿ ಹೀಗಳೆವ, ಹೊರಗಿಡುವ ಸಾಂಸ್ಕೃತಿಕ ರಾಜಕಾರಣವಷ್ಟೇ ಈ ನಿಲುವಿನ ಅಂತಿಮ ಫಲಶ್ರುತಿ ಆಗಿಬಿಟ್ಟಿತು.

ಈ ವಿದ್ಯಮಾನಗಳಿಗೆ ಕುವೆಂಪು ಅವರ ಪ್ರತಿಕ್ರಿಯೆ ಕುತೂಹಲಕಾರಿಯಾಗಿದೆ. ತೇಜಸ್ವಿ 1964ರಲ್ಲಿ ನಡೆಸಿದ ಸಂದರ್ಶನವೊಂದರಲ್ಲಿ "ನವ್ಯ ಕಾವ್ಯದ ಬಗ್ಗೆ ನಿಮಗೆ ಏನನಿಸುತ್ತದೆ" ಎಂದು ಕೇಳಿದ್ದಕ್ಕೆ ಕುವೆಂಪು, "ನಮಗೆ ಪಂಪ, ರನ್ನ, ಕುಮಾರವ್ಯಾಸರ ಕನ್ನಡ ಪರಂಪರೆಯಲ್ಲಿ ನಮ್ಮನ್ನು ಗುರುತಿಸಿಕೊಳ್ಳುವುದು ಮುಖ್ಯವಾಗಿತ್ತೇ ಹೊರತು ತಿರಸ್ಕರಿಸಿ ಹೀಗಳೆಯುವುದಲ್ಲ" (ಸಮಗ್ರ ಗದ್ಯ ಸಂಪುಟ 2 ಪುಟ 1007) ಎಂದು ಉತ್ತರಿಸಿದ್ದಾರೆ. "ಸಾಹಿತ್ಯದಲ್ಲಿ ಕ್ಷಿಪ್ರ ಕ್ರಾಂತಿ ನಡೆಸಲು ಹಿಂದಿನದನ್ನು ಒದೆಯುವ ಚಪಲ ಇವರಿಗೆ" ಎಂದೂ ಹೇಳಿದ್ದಾರೆ. 'ಸಾಕ್ಷಿ'ಯ ಸಂಪಾದಕರಾಗಿದ್ದ ಅಡಿಗರು 1976ರಲ್ಲಿ ತಮ್ಮ ಸಮಗ್ರ ಕಾವ್ಯದ ಮುನ್ನುಡಿಯಲ್ಲಿ ಆಡಿರುವ ಮಾತುಗಳ ಜೊತೆಗೆ ಕುವೆಂಪು ಅವರ ಮಾತನ್ನು ಹೋಲಿಸಿ ನೋಡಬೇಕು. "ಪಂಪ, ರನ್ನ, ಕುಮಾರವ್ಯಾಸ, ಬೇಂದ್ರೆ, ಕುವೆಂಪು ಹೀಗೆ ಯಾವ ಕವಿಯನ್ನಾದರೂ ಹೊಗಳಬಹುದು, ನನ್ನ ಕಾವ್ಯವನ್ನು ಮಾತ್ರ ಹೊಗಳಿದರೆ ಅದು ಮೂರ್ತಿಪೂಜೆ ಎಂಬ ಧೂರ್ತತನದ ಮಾತು ನಮ್ಮ ಸಾಹಿತ್ಯದಲ್ಲಿ ಉಳಿಯುತ್ತದೆ" (ಸಮಗ್ರ ಕಾವ್ಯ ಪುಟ 688) ಎಂದು ಅಡಿಗರು ಬರೆಯುತ್ತಾರೆ. ಇಲ್ಲಿನ ಹತಾಶೆ ಬೆಚ್ಚಿಬೀಳಿಸುವಂಥದ್ದು, ಅದೇ ಲೇಖನದಲ್ಲಿ ಅಡಿಗರು ತನ್ನ ಬಗೆಗಿನ ಅನಂತಮೂರ್ತಿಯವರ 'ನಿಷ್ಪಕ್ಷಪಾತ ವಿಮರ್ಶೆ'ಗಾಗಿ ಧನ್ಯತಾಭಾವ ವ್ಯಕ್ತಪಡಿಸಿದ್ದಾರೆ!

ಯಾಕೆ ನವ್ಯದ ಕಾಲದಲ್ಲಿ ಅಡಿಗ, ಅನಂತಮೂರ್ತಿ ಹಾಗೂ ಸುಬ್ಬಣ್ಣ ಜೊತೆಯಾಗಿ ನಿಂತು ಕೆಲಸ ಮಾಡಿದರು? ನೀನಾಸಂ, ಸಾಕ್ಷಿ ಮುಂತಾಗಿ ಎಲ್ಲ ಸಂದರ್ಭದಲ್ಲೂ ಒಟ್ಟಾಗಿ ನಿಂತರು? ಮೇಲ್ನೋಟಕ್ಕೆ ಇವು ಅರ್ಥವಿಲ್ಲದ ಪ್ರಶ್ನೆಗಳಂತೆ ಕಾಣಬಹುದು. ಆದರೆ ಈ ಸಂಬಂಧಗಳಲ್ಲಿ ಸಾರ್ವಜನಿಕ ಜೀವನಕ್ಕೆ ತಕ್ಕುದಲ್ಲದ ಭಾವನಾತ್ಮಕ ಅಂತರ್‌ಸೆಲೆಯೊಂದು ಅವರ ನಡುವೆ ಪ್ರವಹಿಸುತ್ತಿದ್ದುದನ್ನು ಕಾಣಬಹುದು. ಭಾವನಾತ್ಮಕ ಸಂಬಂಧ ವೈಯಕ್ತಿಕ ಬದುಕಿಗಷ್ಟೇ ಸಲ್ಲಬೇಕಾದ ಸಂಗತಿ. ಅಡಿಗರಿಗೆ ಯಾರ ಬಗ್ಗೆಯೋ ತಿರಸ್ಕಾರವಿದ್ದರೆ ಅದು ಉಳಿದವರಿಗೂ ದಾಟುವ ಅಗತ್ಯ ಇರಬಾರದು. ಸಾಂಸ್ಕೃತಿಕವಾಗಿ ಬಹಳ ಮುಖ್ಯ ಪ್ರಶ್ನೆ ಇದು. ಆದರೆ ಅಡಿಗ, ಅನಂತಮೂರ್ತಿ ಹಾಗೂ ಸುಬ್ಬಣ್ಣ ಈ ಬಗ್ಗೆ ಗಮನ ಹರಿಸಿದ್ದೇ ಇಲ್ಲ, ಇದೆಲ್ಲ ಬಹಳ ಸಹಜ ಎಂಬಂತೆ ಅವರು ವರ್ತಿಸಿದರು.

ಹಾಗೆ ನೋಡಿದರೆ ಸಾಹಿತ್ಯ ರಚನೆಗೆ ಸಾಂಸ್ಥಿಕ ಸಂರಚನೆಯಾಗಲೀ ಚಳವಳಿಯ ಅವಶ್ಯಕತೆಯಾಗಲೀ ಅನಿವಾರ್ಯವೇನಲ್ಲ, ಉಳಿದ ಎಲ್ಲಾ ಬರಹಗಳಂತೆ ಸಾಹಿತ್ಯವೂ ಒಂದು ಬರಹ ಅಷ್ಟೇ. ಲೇಖಕನ ಕಸುಬುದಾರಿಕೆಯಷ್ಟೇ ಇಲ್ಲಿ ಮುಖ್ಯ, ಎಲ್ಲ ಮುಖ್ಯ ಬರಹಗಾರರು ಅತ್ಯುತ್ತಮವಾದುದರ ಜೊತೆಗೆ ಸಾಮಾನ್ಯ ಕೃತಿಗಳನ್ನು ಬರೆದುದನ್ನೂ ನಾವು ನೋಡುತ್ತೇವೆ. ಇಲ್ಲಿ ಜಗಳ, ಒಂದಾಗುವುದು ಎಲ್ಲ ಇರುತ್ತದೆಯೇ ಹೊರತು ತಮ್ಮ ಶ್ರೇಷ್ಠತೆ ಸಾರಲು ಒಂದಾಗಿ ಹೋರಾಡುವ ಅಗತ್ಯವೇ ಇರುವುದಿಲ್ಲ, ಆದರೆ ಇಂತಹ ಸೂಚನೆಗಳು 'ಸಾಕ್ಷಿ'ಯಲ್ಲಿ ನಮಗೆ ಉದ್ದಕ್ಕೂ ಸಿಗುತ್ತವೆ. ಅಡಿಗ, ಅನಂತಮೂರ್ತಿ, ಸುಬ್ಬಣ್ಣನವರ ಮೂಲ ಸಮಸ್ಯೆ ಇದ್ದುದೇ ಇಲ್ಲಿ, ಲೋಹಿಯಾ ಸಮಾಜವಾದದ ಪ್ರತಿಪಾದಕರಾಗಿದ್ದ ಅನಂತಮೂರ್ತಿ ಮತ್ತು ಸುಬ್ಬಣ್ಣ ತೀರಾ ವ್ಯಕ್ತಿವಾದಿಯಾಗಿದ್ದ ಅಡಿಗರ ಜೊತೆಗೂಡಿದ್ದು, ಸಮಾಜವಾದ, ಫೋರ್ಡ್ ಫೌಂಡೇಶನ್, ಆರ್ಷೇಯವಾದ ಎಲ್ಲವನ್ನೂ ಕಲಬೆರಕೆ ಮಾಡಿದ್ದು ತಮ್ಮದೇ ವಿಚಾರಗಳನ್ನು ಹರಡಲು ಸಂಸ್ಥೆಗಳನ್ನು ಕಟ್ಟಿದ್ದು ಕನ್ನಡ ಸಾಂಸ್ಕೃತಿಕ ಲೋಕವನ್ನು ದಾರಿ ತಪ್ಪಿಸಿಬಿಟ್ಟಿತು, ಆದರೆ ಅದ್ಯಾವುದೂ ಒಂದು ಸಾಂಸ್ಕೃತಿಕ ಎಚ್ಚರದಿಂದ ಮಾಡಿದ ಕೆಲಸವೇನೂ ಅಲ್ಲ ಎಂಬುದು ಇಂದು ಸ್ಪಷ್ಟವಾಗಿ ದೃಗ್ಗೋಚರವಾಗುತ್ತಿದೆ. ಇವತ್ತು ಆ ಭಾವನಾತ್ಮಕ ಕಲಬೆರಕೆ ವಂಶಪಾರಂಪರ್ಯ ರಾಜಕೀಯವನ್ನು ವಿರೋಧಿಸುವ ಕುಟುಂಬಸ್ಥರ ರಾಜಕೀಯವಾಗಿ ಮಾರ್ಪಾಡಾಗಿ ಬಿಟ್ಟಿರುವುದನ್ನು ಅರ್ಥೈಸುವುದಾದರೂ ಹೇಗೆ?



ಆದರೆ ಕಾರಂತ, ಕುವೆಂಪು, ಬೇಂದ್ರೆಯವರು ತಮ್ಮ ಇಳಿವಯಸ್ಸಿನಲ್ಲಿ ಕೂಡ ಸ್ವಂತ ಹಿತಾಸಕ್ತಿಗಾಗಿ ಭಾವುಕರಾದವರೇ ಅಲ್ಲ, ಕಾರಂತರಂತೂ ಒಂಟಿಯಾಗಿ ಬದುಕುವ ಧೀರೋದ್ಧಾರತೆ ತೋರಿದವರು. ಯಾರನ್ನೂ ಮನವೊಲಿಸಿ ಬೆನ್ನು ತಟ್ಟಿ ಪ್ರೋತ್ಸಾಹಿಸಲಿಲ್ಲ, ತಮ್ಮದೇ ಗುಂಪನ್ನು ಬೆಳೆಸಿಕೊಳ್ಳುವುದಕ್ಕೂ ಹೋಗಲಿಲ್ಲ, ಕುವೆಂಪು ತಮ್ಮ ವಂದಿಮಾಗಧರನ್ನು ಮೀರಿ ಬೆಳೆದರು. ಈ ಹಿನ್ನೆಲೆಯಲ್ಲಿ ಅಡಿಗರ 'ಸಾಂಸ್ಕೃತಿಕ ರಾಜಕಾರಣ'ವನ್ನು ನಿರ್ಲಕ್ಷಿಸಿ ತಮ್ಮ ಬರಹ ಮುಂದುವರಿಸಿದ ಕುವೆಂಪು ಮತ್ತು ನವ್ಯದ ಗುಂಪುಗಾರಿಕೆಯಿಂದ ಬೇಸತ್ತು ಸಿಡಿದು ದೂರಾದ ತೇಜಸ್ವಿ ಹುತಾತ್ಮರೋ ಸಂತ್ರಸ್ತರೋ ಹೇಗಾದಾರು? ರಾಜಶೇಖರ್ ಅವರೇ ಹೇಳಬೇಕು. ತೇಜಸ್ವಿ, ಕಾರಂತರು ಮತ್ತು ಕುವೆಂಪು ಅವರನ್ನು ಮಾದರಿಯಾಗಿಟ್ಟುಕೊಂಡದ್ದೇ ಇಲ್ಲಿ ಬಹಳ ಮುಖ್ಯ ಘಟನೆ.

ನಾನು 'ಸಾಕ್ಷಿ'ಯ ಹೆಸರಿನಲ್ಲಿ ಅಡಿಗರು ನಡೆಸಿದ್ದ 'ಸಾಂಸ್ಕೃತಿಕ ರಾಜಕಾರಣ'ದ ಬಗ್ಗೆ ಬರೆದದ್ದನ್ನು ರಾಜಶೇಖರ್ 'ಜಾತಿರಾಜಕೀಯ' ಎಂದು ಉದ್ದಕ್ಕೂ ತಿರುಚಿ ಬರೆದಿದ್ದಾರೆ. ಇದಂತೂ ಅರ್ಥವಾಗದ ವಿಷಯ. ಬ್ರಾಹ್ಮಣ್ಯವನ್ನು ಯಾರು ಆಚರಿಸಿದರೂ ತಪ್ಪು; ಬ್ರಾಹ್ಮಣರಾದವರು ಆಚರಿಸುವ ಬ್ರಾಹ್ಮಣ್ಯ ಇನ್ನೂ ಕೆಟ್ಟದ್ದು ಎಂಬುದು ನನ್ನ ನಿಲುವು. ಅದರ ಜೊತೆಗೆ 'ಭಾವುಕ ನೆಂಟಸ್ತಿಕೆ'ಯೂ ಸೇರಿದರೆ? ಅಡಿಗ, ಅನಂತಮೂರ್ತಿ, ಸುಬ್ಬಣ್ಣ ಅವರಲ್ಲಿ ನನಗೆ ಕಾಣುವ ಬಹುದೊಡ್ಡ ದೋಷ ಇದು. ತಮ್ಮದೇ ವೇದಿಕೆಗಳ ಮೂಲಕ ಅವರು ಪ್ರಚುರಪಡಿಸಿದ ಗುಂಪುಗಾರಿಕೆ ಹಾಗೂ ಇತರರ ಕುರಿತ ಅಸಹನೆ, ತಿರಸ್ಕಾರ ಸಾಕಷ್ಟು ಕಾಲ ವಿಜೃಂಭಿಸಿದ್ದೇ ಹೀಗೆ. ನನ್ನ ಈ ಟೀಕೆ ಅವರ ಅಂದಿನ ವರ್ತನೆಗಳ ಕುರಿತು ಇದೆಯೇ ಹೊರತು ಅವರ ಬರಹ ಮತ್ತು ಒಟ್ಟು ಸಾಧನೆಗಳ ಬಗ್ಗೆ ಅಲ್ಲ ಎಂಬುದನ್ನೂ ಅವಶ್ಯ ಗಮನಿಸಬೇಕು.

ಇಲ್ಲಿ ಲಂಕೇಶ್ ಮಾತ್ರ ತೀರಾ ಭಿನ್ನವಾಗಿ ವರ್ತಿಸಿದವರು. ಕಂಡದ್ದನ್ನು ನಿಷ್ಠುರವಾಗಿ ಹೇಳಿದವರು. ಮಾತ್ರವಲ್ಲ, ಅನೇಕ ಸಲ ತನ್ನ ವಿರುದ್ಧ ತಾನೇ ತಿರುಗಿ ಬಿದ್ದವರು. ಆದರೆ ಅಡಿಗ, ಅನಂತಮೂರ್ತಿ, ಸುಬ್ಬಣ್ಣನವರ ಬಗ್ಗೆ ಇದೇ ಮಾತನ್ನು ಹೇಳಬರುವುದಿಲ್ಲ, ಸಣ್ಣಪುಟ್ಟ ಭಿನ್ನಾಭಿಪ್ರಾಯಗಳ ಜೊತೆಗೆ ಒಟ್ಟಿಗೆ ಬದುಕಿದವರು ಅವರು. ಅಂತಹ ನಿಷ್ಠುರತೆ ಇದ್ದಿದ್ದರೆ ಸುಬ್ಬಣ್ಣ ಫೋರ್ಡ್ ಫೌಂಡೇಶನ್ ಹಣವನ್ನು ಪಡೆಯುತ್ತಲೇ ಇರಲಿಲ್ಲ, ನವ್ಯದ ಅವನತಿಯ ಕಾಲದಲ್ಲಿ, 'ಸಾಕ್ಷಿ' ನಿಂತುಹೋಗಿದ್ದ ಸಂದರ್ಭದಲ್ಲಿ ಅಂದರೆ 1984ರಲ್ಲಿ ತಮ್ಮ ನೀನಾಸಂ ಸಂಸ್ಥೆಗೆ ಫೋರ್ಡ್ ಫೌಂಡೇಶನ್ ಹಣ ಪಡೆಯುವ ಮೂಲಕ 'ಸಾಂಸ್ಕೃತಿಕ ಯಜಮಾನಿಕೆ'ಯನ್ನು ಊರ್ಜಿತದಲ್ಲಿ ಇಡಲು ಬಯಸಿದ ಸುಬ್ಬಣ್ಣ ಅದರಲ್ಲಿ ಯಶಸ್ವಿಯಾದರು ಕೂಡ.

ಅಡಿಗ, ಅನಂತಮೂರ್ತಿ, ಸುಬ್ಬಣ್ಣನವರಲ್ಲಿ ನಾನು ತೀರಾ ಹತ್ತಿರದಿಂದ ಬಲ್ಲವರೆಂದರೆ ಸುಬ್ಬಣ್ಣ ಮಾತ್ರ. 1980ರ ಆಸುಪಾಸಿನಲ್ಲಿ ಸುಬ್ಬಣ್ಣನವರನ್ನು ಭೇಟಿಯಾಗಲೆಂದೇ ನಾನು ಹೆಗ್ಗೋಡಿಗೆ ಹೋಗುತ್ತಿದ್ದೆ. ಅಲ್ಲಿನ ವಾತಾವರಣವೇ ಉಸಿರು ಕಟ್ಟಿಸುವಂತಿರುತ್ತಿತ್ತು. ಆದರೆ ಸುಬ್ಬಣ್ಣ ನಮಗೆಲ್ಲ ಅತ್ಯುತ್ತಮ ನಾಟಕ, ಸಿನಿಮಾ ತೋರಿಸುತ್ತಿದ್ದರು. ಅವರ ಆರ್ದ್ರ ವ್ಯಕ್ತಿತ್ವ ನನ್ನಂಥ ಅನೇಕರನ್ನು ಹಿಡಿದಿಟ್ಟಿದ್ದ ಕಾಲ ಅದು. ಈಗ ಎಂಟು ವರ್ಷಗಳ ಹಿಂದೆ ನಾನು ಬಿ.ಎಂ.ಶ್ರೀ ಪ್ರಶಸ್ತಿ ಸ್ವೀಕರಿಸಿದ ಸಂದರ್ಭದಲ್ಲಿ ನನ್ನ ಬಳಿ ಬಂದು ಬೆನ್ನು ಸವರಿ ಪ್ರೀತಿ ತೋರಿಸಿದವರು ಸುಬ್ಬಣ್ಣ, ಅವರನ್ನು ನಾನು ನೋಡಿದ್ದು ಅದೇ ಕೊನೆಯ ಸಲ.

ಸುಬ್ಬಣ್ಣ ನೀನಾಸಂಗೆ ಫೋರ್ಡ್ ಫೌಂಡೇಶನ್‌ನಿಂದ ಹಣ ತೆಗೆದುಕೊಂಡಿದ್ದು ನನ್ನಂಥವನಿಗೆ ತೀರಾ ಅನಿರೀಕ್ಷಿತವಾಗಿತ್ತು, ಯಾರು ಏನೇ ಹೇಳಲಿ, ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಅದೊಂದು ಟರ್ನಿಂಗ್ ಪಾಯಿಂಟ್. ನೇತ್ಯಾತ್ಮಕ ಅರ್ಥದಲ್ಲಿ, ಇವತ್ತು 'ಗಣಿ ಮಾಲಿಕರಿಂದ ಒಂದೆರಡು ಕೋಟಿ ತೆಗೆದುಕೊಂಡರೆ ಏನೀಗ ಮಹಾ, ಪೈಸ ಪೈಸ ಲೆಕ್ಕ ಇಟ್ಟರಾಯಿತು' ಎಂದು ಯಾರಾದರೂ ಹೇಳಿದರೆ ಹೇಗಿರಬಹುದು? ಅದಕ್ಕಿಂತಲೂ ದೊಡ್ಡ ಬೇಜವಾಬ್ದಾರಿ ವರ್ತನೆ ಫೋರ್ಡ್ ಹಣ ತೆಗೆದುಕೊಳ್ಳುವುದು. ಅಂದಿನ ದಿನಗಳಲ್ಲಿ ಎಡಪಂಥೀಯ ಚಳವಳಿಯನ್ನು ಒಡೆಯಲೆಂದು ಎಡಪಂಥೀಯರನ್ನೇ ಹುಡುಕಿ ಹಣ ನೀಡುತ್ತಿದ್ದ ಸಂಸ್ಥೆ ಫೋರ್ಡ್ ಫೌಂಡೇಶನ್. ಆ ಹಣದಿಂದಾಗಿ ನೀನಾಸಂ ಆರ್ಥಿಕವಾಗಿ ಸುಧಾರಿಸಿದ್ದು ಮಾತ್ರವಲ್ಲ, ಅನೇಕ ರಂಗ ತಂಡಗಳಿಗೆ ಉಪಕರಣಗಳನ್ನು ನೀಡುವ ಮೂಲಕ ಸಹಾಯ ಮಾಡಿತು. ಸ್ವತಃ ನಾಟಕ ಆಡಿಸುತ್ತಿದ್ದ ಆ ತಂಡಗಳು ಬರಬರುತ್ತಾ ನೀನಾಸಂ ತಿರುಗಾಟದ ನಾಟಕಗಳನ್ನು ಆಡಿಸುವುದಕ್ಕೆ ಮಾತ್ರ ಸೀಮಿತಗೊಂಡವು. ನೀನಾಸಂ ನಾಟಕಗಳನ್ನು ಆಡಿಸುವುದು, ನೋಡುವುದು ಈ ತಂಡಗಳ ಕರ್ತವ್ಯ ಆಗಿಹೋಯಿತು. ಒಂದು ಒಳ್ಳೆಯ ಸಾಂಸ್ಕೃತಿಕ ಪರಿಸರದಲ್ಲಿ ಉತ್ತಮವಾದುದೂ ಸುಮಾರಾದುದೂ ಎಲ್ಲ ಒಟ್ಟಿಗೇ ಇರಬೇಕು. ಆದರೆ ಹಾಗಾಗಲಿಲ್ಲ, ರಾಜ್ಯದ ಅನೇಕ ತಂಡಗಳು ಇಂದು 'ತಮ್ಮದು ಕಳಪೆ ನಾಟಕಗಳೇನೋ' ಎಂದು ಭಾವಿಸಿ ನಾಟಕ ಆಡುವುದನ್ನೇ ನಿಲ್ಲಿಸಿಬಿಟ್ಟವೆ. ನೀನಾಸಂ ನಾಟಕಗಳನ್ನು ಆಡಿಸುವ ವೇದಿಕೆಗಳಾಗಿ ಮಾತ್ರ ಉಳಿದಿವೆ. ಕೊಳುಕೊಡುಗೆ ಬಗ್ಗೆ ನೀನಾಸಂ ಯಾವತ್ತೂ ಯೋಚಿಸಿದ್ದೇ ಇಲ್ಲ. ನೀನಾಸಂ ಬಯಸುವುದು ಒಂದು ಬಗೆಯ ಅಭಿಮಾನಿ ವರ್ಗವನ್ನಷ್ಟೇ. ನೀನಾಸಂ ಯಾವುದೇ ಟೀಕೆಗೆ ಪ್ರತಿಕ್ರಿಯಿಸದಿರುವುದೂ ಅದೇ ಕಾರಣಕ್ಕೆ, ಫೋರ್ಡ್ ಹಣ ಒಂದು ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣವಾದುದು ಹೀಗೆ. ಈ ಎಲ್ಲ ಟೀಕೆಗಳ ನಡುವೆಯೂ ಸುಬ್ಬಣ್ಣ ನೀನಾಸಂ ಚಟುವಟಿಕೆಗಳಲ್ಲಿ ಒಂದು ದ್ರವರೂಪೀ ಗುಣವನ್ನು ಉಳಿಸಿಕೊಳ್ಳಲು ಹೆಣಗಿದರಾದರೂ ಅವರ ಕಾಲಾನಂತರ ನೀನಾಸಂಗೆ, ತಿರುಗಾಟದ ನಾಟಕಗಳೂ ಸೇರಿದಂತೆ, ಮೊದಲಿನ ಚೈತನ್ಯವನ್ನು ಉಳಿಸಿಕೊಳ್ಳಲಾಗಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ಎಲ್ಲ ಚಳವಳಿಗಳು 'ಬಿದ್ದು ಹೋಗಿರುವ' ಇಂದಿನ ಸಂದರ್ಭದಲ್ಲೂ ಉಸಿರು ಹಿಡಿದುಕೊಂಡು ಅನಂತಮೂರ್ತಿಯವರ ನೇತೃತ್ವದಲ್ಲಿ 'ಸಂಸ್ಕೃತಿ ಶಿಬಿರ' ನಡೆಸುವುದರ ಮೂಲಕ 'ಸಾಂಸ್ಕೃತಿಕ ಯಜಮಾನಿಕೆ' ಮುಂದುವರಿಸಿಕೊಂಡು ಹೋಗುತ್ತಿರುವ ಸಂಸ್ಥೆ ನೀನಾಸಂ.

ಈ ಕಾಲಘಟ್ಟದಲ್ಲಿ ಹುಟ್ಟಿದ ಪತ್ರಿಕೆ 'ದೇಶಕಾಲ'. ಇದೂ ಕೂಡ ನೀನಾಸಂನ ಬೆಂಬಲವನ್ನೇ ಆಶ್ರಯಿಸಿರುವ ಪತ್ರಿಕೆ. ಇಲ್ಲಿ ಕೆಲಸ ಮಾಡುತ್ತಿರುವುದೂ ಮತ್ತೆ ಅದೇ ಭಾವನಾತ್ಮಕ ಸಂಬಂಧವೇ, ಅದೇ ಶ್ರೇಷ್ಠತೆಯ ವ್ಯಸನವೇ. ಯಾರನ್ನೆಲ್ಲ ಹೊರಗಿಡಬೇಕು ಎಂಬ ಅದೇ ಲೆಕ್ಕಾಚಾರವೇ. ನಾವು ಕೊಡುವವರು, ನೀವು

ಳುವವರು ಎಂಬ ಅದೇ ಧೋರಣೆಯೇ. ಈಗ
ತ್ತಿರುವ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲರೂ ತಮ್ಮ
ಮುಗುದ, ವಿಷಾದ ವ್ಯಕ್ತಪಡಿಸಿರುವುದು 'ದೇಶಕಾಲ'
ಪಂದಿರುವ ಈ ನವ ಶ್ರೇಣೀಕೃತ ವ್ಯವಸ್ಥೆಯ ಬಗ್ಗೆಯೇ
ಬಹಳ ಮುಖ್ಯ. ನೀನಾಸಂ ಬಹಳ ವರ್ಷಗಳಿಂದ
ಬಂದಿರುವ ಅನೇಕಾನೇಕ ಚಟುವಟಿಕೆಗಳೆಂಬ ಚಿನ್ನದ
ಉ 'ಅಗೋಚರ' ಕಿರು ಕೊಂಡಿ. ಈ 'ದೇಶಕಾಲ'.
ಮತ್ತು 'ದೇಶಕಾಲ' ಎರಡಕ್ಕೂ ನೀನಾಸಂ
ಾಗಿರುವುದು ಆಕಸ್ಮಿಕವೇನಲ್ಲ. ಕೂಟ ಮಾದರಿಯ
ಣ'ಕ್ಕೆ ಕನ್ನಡದಲ್ಲಿ ಇರುವ ಏಕೈಕ ಉದಾಹರಣೆ ಇದು.
ವಾಗಿ ಇಂದು ಕುವೆಂಪು ಅವರಿಗೆ ಇದ್ದುದಕ್ಕಿಂತ
ವಂದಿಮಾಗಧರು ನೀನಾಸಂ ಹಾಗೂ 'ದೇಶಕಾಲ'ದ
ರೆ. ಆದರೆ ಇವರು, ರಾಜಶೇಖರ್ ಅವರಿಗೆ ಪ್ರಿಯವಾದ
ಹೇಳುವುದಾದರೆ, ಯಾರ ಕಣ್ಣಿಗೂ ಯಾರ ಹಿಡಿತ
ಳಿಗೂ ಸಿಗದ 'ಅಗೋಚರ ವಂದಿಮಾಗಧರು'!

ಶೇಖರ್ ಅವರು ತಮ್ಮ ಬರಹದಲ್ಲಿ ಎತ್ತಿರುವ ಅನೇಕ
ಳ ಬಗ್ಗೆ ನಾನಿಲ್ಲಿ ಮಾತನಾಡಹೋಗುವುದಿಲ್ಲ. ಅವರ
ವಲ್ಲಿನ 'ಸ್ವಯಂ ವಿರೋಧ' ಯಾರಿಗೂ ಕಾಣಿಸುವಂತಿದೆ.
ನು ಹೇಳಿರುವ 'ಜನಮನದಲ್ಲಿ ಉಂಟಾದ ಗೊಂದಲಕ್ಕೆ
ಹೊಣೆ?' ಎಂಬ ಮಾತಿಗೆ ಮಾತ್ರ ನಾನು ಈಗಲೂ
ನೆ. ಇಲ್ಲಿ ಶಿಕ್ಷೆ, ಕೋರ್ಟು, ಜಾಮೀನು, ಸರ್ವಾಧಿಕಾರ
ದ ಮಾತುಗಳನ್ನು ತರುವುದೇ ಅಸಂಗತ. ಅನಂತಮೂರ್ತಿ
ಹೆಸರಿನಲ್ಲಿ ಅಡಿಗರನ್ನು ಪ್ರತಿಷ್ಠಾಪಿಸಲು ಯತ್ನಿಸಿದ್ದು
ದಲ್ಲಿ ಗೊಂದಲ' ಉಂಟಾಗಲು ಕಾರಣವಾಗಿತ್ತು ಎಂದು
ದಿದ್ದೇನೆಯೇ ಹೊರತು ಯಾವುದೇ ಅಧಿಕಾರ ವ್ಯವಸ್ಥೆಯ
ಮಾತನಾಡಿರುವುದರಿಂದ ಶಿಕ್ಷೆಗೆ ಯೋಗ್ಯರು ಎಂದೇನೂ
ಲ್ಲ. ನಾಲ್ಕಾರು ಸಾಲುಗಳ ಅಂತರದಲ್ಲಿ ರಾಜಶೇಖರ್
ಎಲ್ಲಿಗೋ ಹೋಗಿಬಿಟ್ಟಿದ್ದಾರೆ. ಕುವೆಂಪು ಸಂದರ್ಭದಲ್ಲಿ
ರ್ತಿ ಅಧಿಕಾರಸ್ಥರ ವಿರುದ್ಧ ಮಾತನಾಡಿರಲಿಲ್ಲ; ಆಧಿಕಾರ
ಹೆಣಗಿದ್ದರು ಎಂಬುದು ರಾಜಶೇಖರ್ ಅವರಿಗೆ
ಸಾಲುಗಳ ಅಂತರದಲ್ಲಿ ಮರೆತುಹೋಗುತ್ತದೆ. ಇನ್ನು
ಬಳಸಿದ 'ಜನಮನ', 'ಯಾರು ಹೊಣೆ' ಎಂಬ
ಸು ವಿಮರ್ಶೆಯ ಮಾತುಗಳಲ್ಲ ಎಂದು ರಾಜಶೇಖರ್
ವುದಾದರೆ, ನಾನು ಎತ್ತಿದ ಮಹತ್ವದ ಪ್ರಶ್ನೆಯನ್ನು 'ರದ್ದಿ
ಗಳ ಹೆಸರೆತ್ತಿ ರಾಜಶೇಖರ್ ವ್ಯಂಗ್ಯ ಮಾಡಿರುವ ರೀತಿ
ಮು ಭಾಷೆ ಹೇಗಾದೀತು?

ಗರನ್ನಾಗಲೀ, ಅನಂತಮೂರ್ತಿಯವರನ್ನಾಗಲೀ,
'ವನ್ನಾಗಲೀ ಅಮಾಯಕರೆಂದು ಕರೆಯುವುದು ಕೂಡ
ಾಗುವ ಮಾತಲ್ಲ. ಅಡಿಗರು ಜನರಿಗೋಸ್ಕರ ಬರೆಯಲಿಲ್ಲ
ದಾರಿ ತಪ್ಪಿಸುವ ವಾದ. ಅಡಿಗರು ಖಂಡಿತ
ಬೆಂಜಮಿನ್ ಅಲ್ಲ. 'ಹಿಂದೂಗಳೆಲ್ಲ ಒಂದಾಗಿ' ಎಂಬ
ಸಾರುವ 'ಮತ್ತೆ ಮೊಳಗಲಿ ಪಾಂಚಜನ್ಯ' ಕವನವನ್ನಾಗಲೀ
ಯರನ್ನು ಸಾರಾಸಗಟಾಗಿ ಹೀಗಳೆವ 'ವರ್ಗ ಸಮಾಜ'
ಗಲೀ ಅಡಿಗರು ತಾವೊಬ್ಬರೇ ರೂಮಿನಲ್ಲಿ ಕೂತು
ಮು ಬರೆದರೇ? ಸ್ವತಃ ನಾಚಿಕೆಯ ಸ್ವಭಾವದ ನೆರುಡ
ವ ಚಳಿಯಲ್ಲಿ ಲಕ್ಷಾಂತರ ಜನರಿಗೆ ತನ್ನ ಕಾವ್ಯ
ದ್ದನ್ನೂ ಬೆಂಜಮಿನ್ ಮಾತುಗಳನ್ನೂ ಒಟ್ಟಿಗೆ ಇಟ್ಟು
ವುದೇ ಸರಿಯಾದ ಕ್ರಮ ಎಂಬುದು ಗೆಳೆಯ ರಾಜಶೇಖರ್
ಗೊತ್ತಿರುವಂಥದ್ದೇ. ಸಾಮಾಜಿಕ ಸಂಗತಿಗಳ ಬಗ್ಗೆ
ಗಿ ಬರೆಯುವ ರಾಜಶೇಖರ್ ಈ ಚರ್ಚೆಯ ಉದ್ದಕ್ಕೂ
ಆಗಿ ವರ್ತಿಸಿದ್ದರಿಂದಲೇ ತಮ್ಮ ಬರಹದ ಲಯ
ಂಡು ಬಿಟ್ಟಿದ್ದಾರೆ.

ತೋರುವಂತೆ, ಈ ಇಡೀ ಮಾತುಕತೆಯ ಮುಖ್ಯ
ಯೆಂದರೆ, ರಾಜಶೇಖರ್ ಮತ್ತು ಫಣಿರಾಜ್ ಹಠಕ್ಕೆ
ತ ವಾದ ಮಂಡಿಸಿದಷ್ಟೂ ಇಡೀ ಚರ್ಚೆ ಉಜ್ಜಿ
ಹೊಸ ಹೊಳಹು ಪಡೆದು ಸ್ಪಷ್ಟವಾಗುತ್ತಾ ಹೋದದ್ದು.
ಕೇಶ್ ಅವರು ಈ ಚರ್ಚೆಗೆ ನೀಡಿದ ಮಹತ್ವ ಕೂಡ
ಮುಖ್ಯ ಅಂಶ. ನನ್ನ ಮಟ್ಟಿಗೆ ಇದು ಕೊನೆಯ ಬರಹ.
ನ್ನೊಂದು ವಿಷಯವನ್ನೂ ಹೇಳಬೇಕು. ಈಚೆಗೆ ಲಂಕೇಶ್
ಲ್ಲಿ ಪ್ರಕಟವಾಗಿರುವ ಲಂಕೇಶರ ಬರಹಗಳ ಸಂಕಲನವಾದ
ಸಾಹಿತ್ಯ ವಿಮರ್ಶೆ' ಹಾಗೂ ಪುಸ್ತಕ ಪ್ರಕಾಶನ
ವ ತೇಜಸ್ವಿಯವರ 'ವಿಮರ್ಶೆಯ ವಿಮರ್ಶೆ' ಪುಸ್ತಕಗಳು
ಗೆ ಭದ್ರಬುನಾದಿ ಒದಗಿಸಬಲ್ಲ ಮಹತ್ವದ ಪುಸ್ತಕಗಳು.
ಯ ಸಂದರ್ಭದಲ್ಲಿ ಈ ಎರಡೂ ಪುಸ್ತಕಗಳು ನನಗೆ
ಟ್ಟ ಮೂಲಗಳಾಗಿ ಒದಗಿಬಂದಿವೆ.

ಇಡೀ ವಾಗ್ವಾದದ ಸಂದರ್ಭದಲ್ಲಿ ಮಾತನಾಡ
ವರು ಕೊನೆಗೂ ಮಾತನಾಡಲೇ ಇಲ್ಲ. ಅದಕ್ಕೂ ಒಂದು
ದೇ ಇದೆ. ಇರಲಿ. ಆದರೆ ಯಾವತ್ತಿನಿಂದಲೂ
ಳನ್ನು ಸೂಕ್ಷ್ಮವಾಗಿ ಹೊರಡಿಸುತ್ತಲೇ ಬಂದಿದ್ದು 'ಸಾಕ್ಷಿ',
'ಗಳೇ ಹೊರತು ನಾವ್ಯಾರೂ ಅಲ್ಲ. ಚಂದ್ರಶೇಖರ್
ಮತ್ತು ಮಂಜುನಾಥ ಲತಾ ಅವರು ಕೂಡ ಅಲ್ಲ.
ವೆ ಸಂಬಂಧಪಟ್ಟವರೇ ಸುಮ್ಮನಿರುವಾಗ ನಾವು ದಿನಾ
ಾಗುವ ಗೆಳೆಯರು ಸಾಕಷ್ಟು ಜಗಳ ಆಡಿದ್ದೇವೆ ಎಂಬ
ಸನಗಿದೆ. ಏನೇ ಇದ್ದರೂ ಈ ಚರ್ಚೆ ಹೊರಡಿಸಿದ
ಬಹಳ ಮುಖ್ಯ. ಅದು ಮುಂದಿನ ದಿನಗಳಲ್ಲಿ
ಹ ಪಡೆದು ಮುಂದುವರಿಯಬೇಕಾದ್ದು ಸಾಂಸ್ಕೃತಿಕವಾಗಿ
ಅಗತ್ಯ ಎಂದೂ ನಾನು ಭಾವಿಸಿದ್ದೇನೆ. ●

ನೆರೆಹಾವಳಿಯೂ ಹೆಣ್ಣುಮಕ್ಕಳೂ



ಉತ್ತರ ಕರ್ನಾಟಕದ ನೆರೆ ಸಂತ್ರಸ್ಥ ಊರುಗಳನ್ನು ಒಳಹೊಕ್ಕು ನೋಡಿದಾಗ ಗಾಢ ವಿಷಾದವೊಂದು, ಆಳವಾದ ಅಸಹಾಯಕತೆಯೊಂದು ನಮ್ಮನ್ನು ಆವರಿಸಿಬಿಡುತ್ತದೆ. ಸಂಪನ್ಮೂಲಗಳಿದ್ದರೂ ಇಚ್ಛಾಶಕ್ತಿ ಇಲ್ಲದೇ ಹೋದಲ್ಲಿ ಆಗುವ ದಯನೀಯ ಸ್ಥಿತಿಗೆ ಭಾಷ್ಯದಂತೆ ಆ ಊರುಗಳಿವೆ. ವಿಪತ್ತು-ಮಾನವ ನಿರ್ಮಿತವೇ ಇರಲಿ, ಪ್ರಾಕೃತಿಕವೇ ಆಗಿರಲಿ - ಉಂಟಾದಾಗ ಕಳೆದುಹೋದ ಬದುಕನ್ನು ಪುನರ್ ರೂಪಿಸುವುದು ದುಸ್ತರವಾದುದು. ಕುಟುಂಬದ ಎಲ್ಲ ಸದಸ್ಯರೂ ಅಂಥ ಸಂದರ್ಭಗಳಲ್ಲಿ ತಮ್ಮೆಲ್ಲ ಆತ್ಮಶಕ್ತಿಗಳನ್ನು ಒಗ್ಗೂಡಿಸಿ, ಅರ್ಥಪೂರ್ಣವಾಗಿ ದುಡಿಸಿಕೊಳ್ಳಲು ಸಾಧ್ಯವಾದಲ್ಲಿ ಒಂದಿಷ್ಟು ಚೇತರಿಕೆ ಉಂಟಾಗಲು ಸಾಧ್ಯ. ಅದು ಹೇಳುವಷ್ಟು ಸರಳ ಅಲ್ಲ. ಇಲ್ಲಂತೂ ತಮ್ಮದೇ ಆದ ಸ್ವಂತ ಮನೆ, ದನ-ಕರು, ಹಿತ್ತಿಲು, ಒಂದೆರಡೋ ಐದಾರೋ ಎಕರೆ ಹೊಲಗಳನ್ನು ಹೊಂದಿದ್ದ, ತಾವೂ ಉಂಡು ಇತರರಿಗೂ ಕೈಯಾರೆ ನೀಡುತ್ತಿದ್ದ ಕುಟುಂಬಗಳು ಇಂದು ಬಂದೊದಗಿದ ದೇಹಿ ಎಂಬ ದೈನೇಸಿ ಸ್ಥಿತಿಯನ್ನು ಮೊದಲು ಒಪ್ಪಿಕೊಳ್ಳುವುದು, ಅದಕ್ಕೆ ಹೊಂದಿಕೊಳ್ಳುವುದು ಹಾಗೂ ಆ ಬಳಿಕ ಅದನ್ನು ಕೊಡವಿಕೊಂಡು ಮೈಮುರಿದು ಏಳುವುದು ಸಾಮಾನ್ಯ ಸಂಗತಿಯಲ್ಲ. ಅನುಭವಿಸಿದವರ ನೋವು ಕಂಡವರಿಗೆ ತಟ್ಟುವುದೂ ಸಾಧ್ಯವಿಲ್ಲ.

ಹೀಗಿದ್ದೂ ಮುರಿದ ಮನೆ, ಮನ ಮತ್ತು ಬದುಕನ್ನು ಪುನರ್‌ರೂಪಿಸಿಕೊಳ್ಳುವ ಹೊತ್ತಲ್ಲಿ ಆಯಾ ಕುಟುಂಬದ ಮತ್ತು ಗ್ರಾಮದ ಹೆಣ್ಣುಮಕ್ಕಳ ಪಾಡಂತೂ ಇನ್ನೂ ಕಷ್ಟದ್ದು. ಗದಗ ಜಿಲ್ಲೆ ರೋಣ ತಾಲೂಕಿನ ಅಮರಗೋಳ ಗ್ರಾಮದಲ್ಲಿ ನೆರೆಸಂತ್ರಸ್ಥ ಕುಟುಂಬಗಳಿಗೆ ಸರಕಾರ ಕಟ್ಟಿಕೊಟ್ಟ ತಾತ್ಕಾಲಿಕ ಮನೆಗಳ ವಿಸ್ತಾರ 10 x 10 ಅಡಿಯಾಗಿದೆ. ತಗಡಿನ ಶೀಟ್‌ಗಳಿಂದ ನಿರ್ಮಿತವಾದ ಈ ಕೋಣೆಗಳಲ್ಲಿ ನಾಲ್ಕು ಜನ, ಆರು ಜನ ವಾಸಿಸುತ್ತಿದ್ದಾರೆ. ಗರ್ಭಿಣಿ ಕಾಳವ್ವ, ಎಳೆ ಬಾಣಂತಿ ಯಮುನವ್ವ ಮತ್ತು ಅವಳ ಮಗು ಎಲ್ಲರಿಗೂ ಅದರಲ್ಲೇ ಜಾಗ. ಇಂತಹ ತಗಡಿನ ಶೀಟ್ ಹೊದಿಸಿದ ಸುಮಾರು ಮೂವತ್ತು ತಾತ್ಕಾಲಿಕ ವಸತಿಗಳಲ್ಲಿ ಇವತ್ತಲ್ಲ ನಾಳೆ ತಮಗೊಂದು ಸೂರು ನಿರ್ಮಿಸಿಕೊಟ್ಟಾರು ಎಂಬ ಆಶಯದಿಂದ ಕಳೆದ 9-10 ತಿಂಗಳಿಂದ ಜನರು ಆಶ್ರಯ ಪಡೆದಿದ್ದಾರೆ.

ಆರಂಭದ ಕೆಲವು ತಿಂಗಳುಗಳ ಕಾಲ ಶೌಚಕ್ಕಾಗಲಿ, ಸ್ನಾನಕ್ಕಾಗಲಿ ವ್ಯವಸ್ಥೆಯೇ ಇರಲಿಲ್ಲ. ಸುತ್ತ ಎತ್ತ ನೋಡಿದರೂ ಬಟ್ಟಂಬಯಲು. ಹೀಗಾಗಿ ವಠಾರದ, ಮನೆಯ ಗಂಡಸರು ಏಳುವ ಪೂರ್ವದಲ್ಲಿ ಪ್ರಕೃತಿಕರೆಗಾಗಿ, ಸ್ನಾನಕ್ಕಾಗಿ ಮಹಿಳೆಯರು ನಸುಕನ್ನೇ ಇಲ್ಲವೆ ರಾತ್ರಿಯನ್ನೇ ಆಶ್ರಯಿಸಬೇಕಾದ ಸ್ಥಿತಿ. ಅನಂತರ ಕೆಲವು ವಾರಗಳ ಬಳಿಕ ಸ್ನಾನಕ್ಕಾಗಿ ತಗಡಿನ ಶೀಟ್ ಹೊದಿಸಿದ ವ್ಯವಸ್ಥೆ ಮಾಡಲಾಗಿದೆ.



ಅವೋ 3 X 3 ಅಡಿ ವ್ಯಾಸದವು; ಜೋರಾಗಿ ಗಾಳಿ ಬೀಸಿದರೆ ಎಲ್ಲಿ ಹಾರಿಹೋಗುತ್ತವೋ ಎನ್ನುವಂತಿವೆ. ಒಂದಿಷ್ಟು ಅತ್ತಿತ್ತ ವಾಲಿದರೂ ತಗಡಿಗೆ ಕೈಕಾಲು ಬಡಿದು, ಸದ್ದು ಸುತ್ತಲಿನವರ ಗಮನಸೆಳೆಯುವ ಆತಂಕ. ನಾಲ್ಕೂ ಸುತ್ತ ಆರು ಅಡಿ ಎತ್ತರದಲ್ಲಿ ಈ ತಗಡುಗಳು ನಿಂತಿವೆ. ಮೇಲ್ಭಾಗದಲ್ಲಿ ಖುಲ್ಲಂಖುಲ್ಲ. ರಸ್ತೆಯಲ್ಲಿ ಟ್ರ್ಯಾಕ್ಟರ್, ಎತ್ತಿನಗಾಡಿ, ಬಸ್‌ಗಳಲ್ಲಿ ಓಡಾಡುವ ಇಲ್ಲವೆ ಪ್ರಯಾಣಿಸುವವರಿಗೆ ಬೇಡವೆಂದರೂ ಒಳಗಿನ ಜಗತ್ತು ತೆರೆದುಕೊಳ್ಳುವ ಆತಂಕ ಮಹಿಳೆಯರದ್ದು. ಇನ್ನು ಸ್ನಾನದ ನೀರು ಹರಿದುಹೋಗಲು ಯಾವ ವ್ಯವಸ್ಥೆಯೂ ಇಲ್ಲ. ಸಮತಟ್ಟು ಜಾಗದಲ್ಲಿ ಶೆಡ್ ಕಟ್ಟಿದ್ದರಿಂದ, ನೀರು ಅದರ ಸುತ್ತಲೂ ನಿಂತು ಕೊಚ್ಚೆಗುಂಡಿಯನ್ನು ನಿರ್ಮಿಸಿಬಿಟ್ಟಿದೆ. ಹೀಗಾಗಿ ಇದ್ದೂ ಉಪಯೋಗವಿಲ್ಲ.

ಮುಂದೆ ಹೊಳೆ ಮಣ್ಣೂರ ತಲುಪಿದೆವು. ಮುಖ್ಯರಸ್ತೆಗೆ ಹತ್ತದಲ್ಲೇ ರಸ್ತೆಗೆ ಮುಖವಾಡಿ 20-30 ತಾತ್ಕಾಲಿಕ ಶೆಡ್ಡುಗಳು ಕಂಡವು. ಅವರನ್ನು ಮಾತಾಡಿಸೋಣವೆಂದು ಹೋದರೆ, ಹತ್ತಾರು ಚಿಳ್ಳೆಪಿಳ್ಳೆಗಳು ಕುತೂಹಲದಿಂದ ಬಂದವು. ಅದರಲ್ಲಿ 7 ರಿಂದ 12ರ ವಯಸ್ಸಿನೊಳಗಿನ ಒಬ್ಬೊಬ್ಬ ಹುಡುಗಿಯ ಕಂಕುಳಲ್ಲೂ ಒಂದೊಂದು ಕೂಸು. "ಅರೇ, ನೀವ್ಯಾರೂ ಶಾಲೆಗೆ ಹೋಗಲ್ವಾ" ಎಂದರೆ ನಗುವೊಂದೇ ಉತ್ತರ. ಮತ್ತೂ ಪ್ರಶ್ನಿಸಿದಾಗ, ಅವರಲ್ಲಿ ಹಲವರು 3, 4, 5, 6ನೇ ತರಗತಿಯ ವಿದ್ಯಾರ್ಥಿಗಳೆಂದು ತಿಳಿಯಿತು. "ಇವತ್ತು ಶ್ಯಾಲೆ ಇಲ್ವಾ? ನೀವು ಶಾಲೆ ಬಿಟ್ಟ್ ಬಿಟ್ಟೀದ್ದೀರಾ" ಎಂದಾಗ, ವಯೋವೃದ್ಧೆ ಬಸಮ್ಮ ಅವರ ನೆರವಿಗೆ ಬಂದರು. "ಸಾಲಿ ಐತ್ರಿ. ಆದ್ರ ಅಕಿ ತಂದಿ-ತಾಯಿ ದುಡಿಯಾಕ ಹೋಗ್ತಾರ್ರೀ. ಮತ್ ಅವ್ರು ಇಲ್ಲಾಗ ಸಣ್ಣವ್ರನ್ನ ಸವರಿಸ್‌ಬೇಕಲ್ರೀ. ಹಿಂಗಾಗಿ ಮನ್ಯಾಗ ಉಳ್ದಾಳ." ಹೌದೇ ಎಂಬಂತೆ ಹುಡುಗಿಯತ್ತ ನೋಡಿದರೆ, ಕೋಲೆಬಸವನಂತೆ ಗೋಣು ಅಲ್ಲಾಡಿಸಿದಳು. ಕಾಳವ್ವನೆಂಬ ಹುಡುಗಿ ಮೈಚಳಿ ಮುರಿದು ಮಾತಿಗೆ ದನಿಕೊಟ್ಟದ್ದು ಹೀಗೆ, "ಅಕ್ಕಾರ, ಸಾಲಿ ಇಲ್ಲಿಂದ ದೂರ ಐತ್ರಿ. ಬಸ್‌ನಾಗ ಹೋಗ್‌ಬೇಕು. ಬಸ್ಸನವ್ರು ರೊಕ್ಕಾ ಕೇಳ್ತಾರ್ರೀ. ನಮ್ಮ್ ಅವ್ವನ್ನ ಬಸ್‌ಗೆ ರೊಕ್ಕ ಕೊಡಂದ್ರ 'ಎಲ್ಲೀದು ಹೋಗಾ ಪೀಡಾ. ಹೊಟ್ಟೀಗ್ ದುಡ್ಡು ಹಾಕೂದಾ ಕಷ್ಟ ಆಗೇದ' ಅಂತಾಳ್ರೀ. ರೊಕ್ಕ ಕೊಡಂಗಿಲ್ಲಂದ್ರ ಬಸ್ಸನವ್ರು ಕೂಡ್ಸೂದಿಲ್ರೀ" ಎಂದಳು. "ಅಕ್ಕಾರ, ಸಾಲ್ಯಾಗ ಅಕ್ಕೋರು (ಟೀಚರ್) ಬೈತಾರ್ರೀ" ಎಂದವಳು ಯಾರೆಂದು ನೋಡಿದರೆ, ಹನ್ನೊಂದರ ಹರೆಯದ ಹುಡುಗಿ. "ಯಾಕ ಬೈತಾರ" ಎಂದೆ. "ಇಲ್ಲೆ ಒಂದೊಂದ್ ಬಸ್ಸ್ ನಿಲ್ಲಂಗಿಲ್ರೀ... ಆವಾಗ ಸಾಲಿಗೆ ತಡಾ ಆಗುತ್ತಾ... ಹೋಗೂದ್ರಾಗ ತಡಾ ಆತಂದ್ರ ಬೈತಾರ್ರೀ... ಹೊರಗ್ ನಿಲ್ಸ್ತಾರ್ರೀ... ನಮ್ಮ್ ಅವ್ವ ಕೂಲೀಗೆ ಹೋಗ್ಬಿಟ್ ದಿವ್ಸ ನಾ ಸಾಲೀಗ್ ಹೋಗಾಕ್ ಬರತ್ರೀ. ದಿನಾ ಯಾಕ ಬರಂಗಿಲ್ಲ ಅಂತ ಅದ್ಕೂ ಹೊಡೀತಾರ್ರೀ. ಹಿಂಗಾಗಿ ಸಾಲೀನ ಬ್ಯಾಡ ಅಂತ ಅನ್ಸತ್ತ್ರೀ" ಎಂದಳು. ಅದೇ ಅವಳ ಅಣ್ಣ, ತಮ್ಮನನ್ನು ಕಾಡದ ಈ ಸಮಸ್ಯೆ ಹುಡುಗಿಯಾದ ಕಾರಣಕ್ಕೆ ಅವಳಿಗೆ ಎದುರಾಗಿದೆ.

ನಮ್ಮೆಲ್ಲ ಮಾತಿಗೆ ಕಣ್ಣರಳಿಸಿ ನಿಂತ ಹುಡುಗಿಯತ್ತ ತಿರುಗಿ "ನಿನ್ನ ಹೆಸರೇನು" ಎಂದೆ. ಉಹೂಂ... ಅವಳು ಮಾತಾಡಲಿಲ್ಲ. ಕೊರಳಲ್ಲಿ ಕರಿದಾರಕ್ಕೆ ಮನೆಯ ಬೀಗದ ಕೈ ನೇತಾಡಿಸಿಕೊಂಡು, ಲಂಗವನ್ನು ಅತ್ತಿತ್ತ ವಾಲಾಡಿಸುತ್ತ ನಿಂತಳು. "ತಂಗೀ, ಅಕೀಗೆ ಬಾಯಿ ಬರಂಗಿಲ್ಲ. ಇವ್ ಜೋಡಿ ಅಕಿನೂ ಸಾಲಿಗ್ ಹೋಗ್ತಾಳ್ರೀ. ಐದ್ನೆತ್ತ ಆದಾಳ್ರೀ. ಇವತ್ತ ಅಕಿ ಅವ್ವನೂ ದುಡಿಯಾಕ ಹೋಗ್ಯಾಳ್‌ರೀ. ಅಲ್ಲೆ ಐತೆಲ್ರೀ ಅದು ಅಕಿ ತಮ್ಮ ನೋಡ್ರಿ" ಎಂದರು ವೃದ್ಧೆ. ಅಷ್ಟರಲ್ಲಿ ಅತ್ತ ಇತ್ತದ ಶೆಡ್ಡಿನವರೂ ನಿಧಾನವಾಗಿ ನಮ್ಮನ್ನು ಸೇರಿಕೊಂಡರು. "ನಿಮ್ಮ್ ಮನಿ ನೋಡ್‌ಬಹುದ್ದೇನ್ರೀ" ಎಂದೆ. "ಬರ್ರೆಲ್ಲ... ಬರ್ರಿ ಬರ್ರಿ" ಎನ್ನುತ್ತ ಕರೆದೊಯ್ದರು. 10 x 12 ಅಡಿ ವಿಸ್ತೀರ್ಣದ ಮನೆಗಳೇ. ಇರುವಷ್ಟೇ ಜಾಗಗಳಲ್ಲಿ ಹೊಂದಿಸಿಟ್ಟ ಪಾತ್ರೆ-ಪಗಡೆ, ಬಟ್ಟೆ-ಬರೆ, ದೇವರ ಫೋಟೋ, ತೂಗಾಡುವ ತೊಟ್ಟಿಲು, ಮೂಲೆಯಲ್ಲಿ ಬೆಂಕಿ ಆರಿ ನಿಂತ ಒಲೆ... ಇರುವಷ್ಟು ಜಾಗ ಥಳಥಳ ಹೊಳೆಯುತ್ತಿತ್ತು.

ಎಲ್ಲ ನೋಡಿ ನಿಟ್ಟುಸಿರು ಬಿಡುತ್ತ, ಇಷ್ಟು ದಿನ ಬೆಚ್ಚಗೆ ದಿನಗಳೆದ ನಮ್ಮ ಬಗ್ಗೆಯೇ ಖೇದಗೊಳ್ಳುತ್ತ ಹೊರಡುವ ಮಾತಾಡಿದರೆ, "ಇರ್ರಿ... ಚಾ ಮಾಡ್ತೀನಂತ... ಕುಡ್ದು ಹೋಗೀರಂತ" ಎಂದು ಒಬ್ಬರೆಂದರೆ, "ತಗೋರಿ ಕುರ್ಚೀನ... ಕೂದ್ರಲ್ಲ..." ಇನ್ನೊಬ್ಬರ ಉಪಚಾರ. ಅವರಿಗಾಗಿ ಏನೂ ಮಾಡಲಾಗದ ಅಪರಾಧೀಭಾವ ನಮ್ಮಲ್ಲಿ ಇನ್ನಿಷ್ಟು ಹೆಚ್ಚುತ್ತಿದ್ದರೆ, "ಯಾರ್ ಏನ್ ಮಾಡಾಕ್‌ಆದ್ದು ಬಿಡಿ... ಈಟು ಬಂದು ಮಾತಾಡ್ತೀರಲ್ಲ, ಅದ ಪ್ರೀತಿ. ಆ ದೇವ್ರು ಬರ್ದಾಂಗ ಆಗ್ತೈತಿ ತಗೋರಿ. ಕೂಡ್ರಿ.... ಚಾ ಕುಡೀರಂತ ಕೂಡ್ರಿ...." ಎಂಬ ಆ ಅಷ್ಟಂವಿರ ಕಾಳಜಿಗೆ ಮೈ, ಮನಸ್ಸು ಎರಡೂ ತೋಯ್ದು, ವಿನಯದಿಂದ ನಮಿಸಿದವು.

● ಡಾ.ಸಬಿಹಾ ಭೂಮಿಗೌಡ

ಜಾನಪದ ವಿಶ್ವವಿದ್ಯಾಲಯವನ್ನು ಕಟ್ಟುವ ಬಗೆ

ಸದ್ಯದ ಕರ್ನಾಟಕದಲ್ಲಿ ಹಿಂದೂ ಮೂಲಭೂತವಾದಿ ಆಲೋಚನ ವಿನ್ಯಾಸಗಳು ಗಟ್ಟಿಯಾಗುತ್ತಿವೆ. ಈ ಒಟ್ಟು ಆಲೋಚನೆಯನ್ನೇ ಆಮೂಲಾಗ್ರವಾಗಿ ಬದಲಾಯಿಸಿ ದೇಸಿ ಚಿಂತನೆಯ ಬೇರುಗಳು ಬಲವಾಗುವಂತೆ ನೀರು ಗೊಬ್ಬರ ಹಾಕುವ ಮಹತ್ವದ ಜವಾಬ್ದಾರಿ ಜಾನಪದ ವಿವಿಯ ಮೇಲಿದೆ. ದೇಸಿ ಚಿಂತನೆಯನ್ನು ಗಟ್ಟಿಯಾದ ಕನ್ನಡದ ಆಲೋಚನ ಮಾದರಿಯಾಗಿ ರೂಪಿಸುವಲ್ಲಿ ಜಾನಪದ ವಿವಿಯು ದೊಡ್ಡ ಸವಾಲನ್ನು ಮೈಮೇಲೆ ಎಳೆದುಕೊಳ್ಳಬೇಕಿದೆ



ಎಪ್ಪತ್ತರ ದಶಕದಿಂದಲೆ ಜೀಶಂಪ ಮೊದಲಾದವರಿಂದ ಹುಟ್ಟಿದ ಜಾನಪದ ವಿಶ್ವವಿದ್ಯಾಲಯ ಕನಸು ಸದ್ಯಕ್ಕೆ ನನಸಾಗುವ ಲಕ್ಷಣಗಳು ಕಾಣುತ್ತಿಲ್ಲ. ಇದಕ್ಕಾಗಿ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಗೊ.ರು.ಚ ಅವರು ಅವಿರತವಾಗಿ ಹೋರಾಡುತ್ತಿದ್ದಾರೆ. ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಇದನ್ನು ತಡೆಯುವ ವ್ಯವಸ್ಥಿತ ಹುನ್ನಾರಗಳು ತೆರೆಮರೆಯಲ್ಲಿ ನಡೆಯುತ್ತಿವೆ. ಒಂದೆಡೆ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿ ವಿವಿಗೆ ಚಾಲನೆ ನೀಡಬೇಕಾಗಿದ್ದ ಕಾರ್ಯ ಅನಗತ್ಯವಾಗಿ ವಿಳಂಬವಾಗುತ್ತಿದೆ. ಇನ್ನೊಂದೆಡೆ ಹಿರಿಯ ಜಾನಪದ ವಿದ್ವಾಂಸರು ವಿವಿಯ ಸ್ವರೂಪದ ಬಗೆಗೆ ಹಲವು ವಿನ್ಯಾಸಗಳನ್ನು ಸೂಚಿಸುತ್ತಿದ್ದಾರೆ. ಇವುಗಳನ್ನು ನೋಡಿದರೆ ಜಾನಪದ ವಿವಿಯನ್ನು ದೊಡ್ಡದೊಂದು ಮ್ಯೂಜಿಯಂ ಮಾಡುವಂತೆ ಕಾಣುತ್ತಿದೆ. ಆ ಕಾರಣಕ್ಕೆ ಜಾನಪದದ ಬಗ್ಗೆ ಹೊಸ ಆಲೋಚನೆಗಳನ್ನು ಇರಿಸಿಕೊಂಡ ಕೆಲವರಿಗಾದರೂ ಇದು ಆತಂಕದಂತೆ ಕಾಣುತ್ತಿದೆ.

ಕರ್ನಾಟಕದಲ್ಲಿ ಜಾನಪದದ ಬಗ್ಗೆ ಅಪಾರ ಕೆಲಸ ನಡೆದಿದೆ. ನಡೆಯಬೇಕಾದುದು ಇನ್ನೂ ಬಹಳಷ್ಟಿದೆ. ಅದು ನಿರಂತರವಾಗಿ ಆಗಬೇಕಾದುದು. ಆ ಕಾರಣಕ್ಕೆ ಜಾನಪದ ವಿವಿಯೊಂದರ ಅಗತ್ಯವಿದೆ. ಮೂಲಗಳ ಪ್ರಕಾರ ಜಾನಪದಕ್ಕಾಗಿ ಪ್ರತ್ಯೇಕ ವಿವಿ ಬೇರೆಲ್ಲಿಯೂ ಇಲ್ಲ. ಅದು ಕರ್ನಾಟಕದಲ್ಲಿ ಆಗುವುದಾದರೆ ಅದು ಚಾರಿತ್ರಿಕವಾಗಿ ಮುಖ್ಯ ಘಟನೆ. ಹಾಗಾಗಿ ಅಂತಹ ಜಾನಪದ ವಿವಿಯನ್ನು ತುಂಬಾ ವೈಜ್ಞಾನಿಕವಾಗಿ, ಸೂಕ್ಷ್ಮವಾಗಿ ರೂಪಿಸಬೇಕಾದುದು ಎಲ್ಲರ ಕರ್ತವ್ಯವಾಗಿದೆ. ಈ ವಿವಿಯನ್ನು ದೂರದೃಷ್ಟಿಯಿಲ್ಲದೆ ರೂಪಿಸಿದ್ದಾದರೆ ಕರ್ನಾಟಕದ ಇತರ ವಿವಿಗಳಂತೆಯೇ ಇದು ಒಂದು ಕಾಲಕ್ಕೆ ಜಡಗೊಂಡು ಸ್ಥಾವರವಾಗುವಲ್ಲಿ ಯಾವುದೇ ಅನುಮಾನವಿಲ್ಲ.

ಕರ್ನಾಟಕದಲ್ಲಿ ನಡೆದ ಜಾನಪದ ಅಧ್ಯಯನಗಳು ಬಹುಪಾಲು ಸಂಗ್ರಹ ಮಾದರಿಯವು. ವಿಶ್ಲೇಷಣೆಯ ದೃಷ್ಟಿಯಿಂದ ಅವು ಬಹುಪಾಲು ಅಸೂಕ್ಷ್ಮವಾದವುಗಳು. ಅವುಗಳು ಮಾಹಿತಿ ಸಂಗ್ರಹಣೆಯಲ್ಲೇ ಹೆಚ್ಚಿನ ಸಾಧನೆ ಮಾಡಿವೆ. ಅದು ಆರಂಭಿಕ ಕಾಲಘಟ್ಟದ ಅನಿವಾರ್ಯವೂ ಆಗಿತ್ತು. ಬೆರಳೆಣಿಕೆಯ ಕೆಲವು ವಿದ್ವಾಂಸರನ್ನು ಹೊರತುಪಡಿಸಿದರೆ ಬಹುಪಾಲು ಜಾನಪದ ವಿದ್ವಾಂಸರು ಜಾನಪದ ಎಂದರೆ ಮಾಹಿತಿ ಸಂಗ್ರಹ ಎನ್ನುವ ಹಂತದಿಂದ ಮುಂಚಲಿಸಿಯೇ ಇಲ್ಲ. ಹಾಗಾಗಿ ಇದೇ ಧೋರಣೆಯೇ ಜಾನಪದ ವಿವಿ ನಿರ್ಮಾಣದಲ್ಲೂ ಕೆಲಸ ಮಾಡುವ ಸಾಧ್ಯತೆಯಿದೆ. ಹಾಗಾದಲ್ಲಿ ಕರ್ನಾಟಕದ ಜಾನಪದ ವಿದ್ವತ್ತಿನ ಮಿತಿ ಜಾನಪದ ವಿವಿಯ ಮಿತಿಯಾಗುತ್ತದೆಯಷ್ಟೆ. ನಮ್ಮ ಕಾಲಕ್ಕೆ ಹೊಂದಿಕೆಯೇ ಆಗದ ಬಹುಪಾಲು ಜಾನಪದ ಕುರಿತ ವ್ಯಾಖ್ಯಾನಗಳು, ಸಿದ್ಧಾಂತಗಳು ಈಗಲೂ ನಿಯಂತ್ರಿಸುತ್ತಿವೆ. ಅಷ್ಟಕ್ಕೂ ನಮ್ಮ ನಿತ್ಯದ ಬದುಕಿನ ಒಡಲೊಳಗಿಂದ ಹುಟ್ಟುವ ಜಾನಪದವನ್ನು ವಿವರಿಸಿಕೊಳ್ಳಲು ಪಾಶ್ಚಾತ್ಯ ಜಾನಪದ ವ್ಯಾಖ್ಯಾನಗಳಿಗೆ ಮೊರೆ ಹೋಗುತ್ತಿರುವುದೊಂದು ವಿಪರ್ಯಾಸ.



ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲೊಳಗಿಂದಲೇ ರೂಪಾಂತರವನ್ನು ಪಡೆಯುತ್ತದೆ. ಆದರೆ ಈ ರೂಪಾಂತರ ಜಾನಪದ ವ್ಯಾಖ್ಯಾನಗಳ ಚೌಕಟ್ಟಿಗೆ ಹೊಂದುವುದಿಲ್ಲ ಅಥವಾ ಹೊಸತನ್ನು ಗುರುತಿಸಲು ಜಾನಪದದ ಹಳೆ ವ್ಯಾಖ್ಯಾನಗಳಿಗೆ ಧಾರಣಶಕ್ತಿ ಸಾಲದು. ಹಾಗಾಗಿ ನಮ್ಮ ಕಾಲದ ಜಾನಪದವನ್ನು ವಿವರಿಸಿಕೊಳ್ಳಲು ನಮ್ಮ ಕಾಲದ ಒಳಗಿಂದಲೇ ಹೊಸ ದೃಷ್ಟಿಕೋನಗಳು ಹೊಸ ಕಾಣ್ಕೆಗಳು ಸಿದ್ಧಗೊಳ್ಳಬೇಕಿದೆ. ಅಂತಹ ಕಾಣ್ಕೆಗಳು ಕನ್ನಡ ಜಾನಪದ ವಿದ್ವತ್ತಿನಲ್ಲಿ ಹೆಚ್ಚಾಗಿ ಕಾಣುತ್ತಿಲ್ಲ ಎನ್ನುವುದನ್ನು ಮನಗಾಣಬೇಕು. ಇಂತಹ ಸಂದರ್ಭದಲ್ಲಿ ಜಾನಪದಕ್ಕಾಗಿ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗುವ ಪ್ರಸ್ತಾವ ಚರ್ಚೆಯಲ್ಲಿದೆ. ಹಾಗಾಗಿ ಈ ಮೇಲಿನ ಎಲ್ಲಾ ಎಚ್ಚರಗಳನ್ನು ಗಮನದಲ್ಲಿರಿಸಿಕೊಂಡೇ ಜಾನಪದ ವಿವಿಯನ್ನು ರೂಪಿಸಬೇಕಾಗಿದೆ. ಇಂದು ಬಹುಶಿಸ್ತಿಯ ಸಾಂಸ್ಕೃತಿಕ ಅಧ್ಯಯನದ ಮಾದರಿಗಳು ಹೆಚ್ಚು ಪ್ರಸ್ತುತ ಅನ್ನಿಸುತ್ತಿವೆ. ಈ ಮಾದರಿಯನ್ನು ಗಮನದಲ್ಲಿರಿಸಿಕೊಂಡೇ ಜಾನಪದ ವಿವಿಯ ತಾತ್ವಿಕ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳಬೇಕಿದೆ.

ಸದ್ಯಕ್ಕೆ ವಿಶ್ವವಿದ್ಯಾಲಯಗಳಲ್ಲಿರುವ ಜಾನಪದ ವಿಭಾಗಗಳು, ಜಾನಪದ ಅಕಾಡಮಿ, ರಾಮನಗರದ ಜಾನಪದ ಲೋಕ, ಉಡುಪಿಯ ಆರ್. ಆರ್. ಸಿ ಮುಂತಾದವುಗಳು ಜಾನಪದ ವಿವಿಗೆ ಒಳ್ಳೆಯ ಮಾದರಿಗಳಾಗಲಾರವು. ಕಾರಣ ಈ ಮೇಲೆ ಹೇಳಿದ ಮಿತಿಗಳೇ ಇವುಗಳಲ್ಲಿ ಢಾಳಾಗಿ ಕಾಣುತ್ತಿವೆ. ಕರ್ನಾಟಕ ವಿವಿಯು ಪ್ರತಿ ವರ್ಷ ಆಯೋಜಿಸುವ ಜಾನಪದ ಸಮ್ಮೇಳನಗಳು ಈತನಕವೂ ಜಾನಪದದ ಬಗ್ಗೆ ಹೊಸ ವಾಗ್ವಾದಗಳನ್ನು ಹುಟ್ಟುಹಾಕಲು ಸಾಧ್ಯವಾಗಿಲ್ಲ, ಇದೇ ಮಾತು ಹಂಪಿ ಕನ್ನಡ ವಿಶ್ವವಿದ್ಯಾಲಯ ಆಯೋಜಿಸುವ ದೇಶಿ ಸಮ್ಮೇಳನಕ್ಕೂ ಅನ್ವಯವಾಗು[ತ್ತದೆ.] ಹಾಗಾಗಿ ಈಗಾಗಲೇ ಇಲ್ಲಿ ಅಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿ[ರುವ] ಕೆಲವರನ್ನು ಜಾನಪದ ವಿವಿಗೆ ನೇಮಕ ಮಾಡಿದ್ದಾದರೆ, ಈಗ ಅ[ಲ್ಲಿ] ಇರುವ ಜಡತೆಯ ತುಣುಕುಗಳನ್ನು ಒಂದೆಡೆ ಕಲೆ ಹಾಕಿದಂತಾಗುತ್ತದೆಯ[ಷ್ಟೆ.]

ಹಿರಿಯ ಜಾನಪದ ವಿದ್ವಾಂಸರು ಸೂಚಿಸಿದಂತೆ ಈಗ ಲಭ್ಯವಿ[ರುವ] ಎಲ್ಲಾ ಜನಪದ ಕಲೆಗಳನ್ನು ಆಡಿಯೋ ವೀಡಿಯೋ ವ್ಯವಸ್ಥಿತ ದಾಖಲೀಕ[ರಣ] ಆಗಬೇಕಿದೆ. ಸಂಗ್ರಹಿಸಲು ಸಾಧ್ಯವಿರುವುದನ್ನು ಪುಸ್ತಕ ರೂಪ[ದಲ್ಲಿ] ಪ್ರಕಟಿಸಬೇಕಿದೆ. ಜಾನಪದ ವಸ್ತು ಸಾಮಗ್ರಿಯನ್ನು ರಕ್ಷಿಸಿಡುವ ಕೆಲಸ ಆಗಬೇಕಿದೆ. ಆದರೆ ಅದು ಜಾನಪದ ವಿವಿಯ ಆಂಶಿಕ ಭಾಗವಾಗ[ಬೇಕೇ] ವಿನಃ ಅದೇ ಪ್ರಧಾನವಾಗಬಾರದು. ಕಾರಣ ಜಾನಪದದ ಹೊಸ ನಡಿಗೆಯ[ನ್ನು] ಗುರುತಿಸಬೇಕು. ಸದ್ಯಕ್ಕೆ ರೂಪುಗೊಳ್ಳುತ್ತಿರುವ ನವ ಮೌಖಿಕತೆಯ[ನ್ನು] ಗುರುತಿಸುವಂತಾಗಬೇಕು, ವೈದಿಕ ಆಲೋಚನ ವಿನ್ಯಾಸಗಳನ್ನು ಮುರಿ[ದು] ಅವೈದಿಕ ಆಲೋಚನ ವಿನ್ಯಾಸಗಳನ್ನು ಹೊಸತಾಗಿ ಕಟ್ಟಬೇಕಿದೆ. ಸ[ದ್ಯದ] ಕರ್ನಾಟಕದಲ್ಲಿ ಹಿಂದೂ ಮೂಲಭೂತವಾದಿ ಆಲೋಚನ ವಿನ್ಯಾಸ[ಗಳು] ಗಟ್ಟಿಯಾಗುತ್ತಿವೆ. ಈ ಒಟ್ಟು ಆಲೋಚನೆಯನ್ನೇ ಆಮೂಲಾಗ್ರ[ವಾಗಿ] ಬದಲಾಯಿಸಿ ದೇಸಿ ಚಿಂತನೆಯ ಬೇರುಗಳು ಬಲವಾಗುವಂತೆ ನೀ[ರು] ಗೊಬ್ಬರ ಹಾಕುವ ಮಹತ್ವದ ಜವಾಬ್ದಾರಿ ಜಾನಪದ ವಿವಿಯ ಮೇಲಿ[ದೆ.] ದೇಸಿ ಚಿಂತನೆಯನ್ನು ಗಟ್ಟಿಯಾದ ಕನ್ನಡದ ಆಲೋಚನ ಮಾದರಿಯ[ಾಗಿ] ರೂಪಿಸುವಲ್ಲಿ ಜಾನಪದ ವಿವಿಯು ದೊಡ್ಡ ಸವಾಲನ್ನು ಮೈಮೇ[ಲೆ] ಎಳೆದುಕೊಳ್ಳಬೇಕಿದೆ. ಇದಕ್ಕೆ ಹಂಪಿ ವಿವಿಯಲ್ಲಿ ರೂಪುಗೊಂಡ ದ[ೇಸಿ] ಚಿಂತನೆಯನ್ನು ಮಾದರಿಯಾಗಿಟ್ಟುಕೊಳ್ಳಬೇಕಿದೆ.

ಆನ್ವಯಿಕ ಜಾನಪದದ ಆಲೋಚನೆ ಕನ್ನಡದಲ್ಲಿ ಗಟ್ಟಿಯ[ಾಗಿ] ನೆಲೆಗೊಳ್ಳಬೇಕಾಗಿದೆ. ಈತನಕ ನಾವು ಜಾನಪದದಿಂದ ಜ್ಞಾನವನ್ನು ಪಡೆ[ದದ್ದು] ಆಗಿದೆ, ಬದಲಾಗಿ ನಾವು ಸಾಹಿತ್ಯಿಕವಾಗಿ ಪಡೆದ ಯಾವುದೇ [...] ಪರಂಪರೆಯನ್ನು ಜಾನಪದ ಲೋಕಕ್ಕೆ ಹಾಯಿಸಲಿಲ್ಲ. ಹಾಗಾಗಿ ಜನಪದ[...] ಶೇಕ್ಸಪಿಯರ್, ಕುವೆಂಪುರಂತಹವರ ಒಂದು ನಾಟಕವೂ ಪುನರ್[...] ಯಾಗಲಿಲ್ಲ. ಈ ಕುರಿತು ಹೊಸ ಆಲೋಚನೆಯನ್ನೇ ಹುಟ್ಟುಹಾ[ಕುವ] ಸಾಧ್ಯತೆ ಇದೆ. ಇಂತಹ ಹೊಸ ಆಲೋಚನೆಯ ತುಡಿತ ಇ[...] ಕೆಲವರಾದರೂ ಜಾನಪದ ವಿವಿಗೆ ಆಯ್ಕೆಯಾದದ್ದಾದರೆ [...] ಹೊಸತೇನನ್ನಾದರೂ ಕಟ್ಟಲು ಸಾಧ್ಯವಿದೆ.

• ಡಾ. ಅರುಣ್ ಜೋಳದಕೂಡ[್ಲಿಗಿ]

ಪತ್ರಿಕೆಗಳನ್ನು ಏಕೆ ಮರೆತಿರಿ?

ಸಂಪಾದಕರಿಗೆ ಪತ್ರ

ಪ್ರಿಯರೆ,

ಕಳೆದ ವಾರದ ಸಂಚಿಕೆಯಲ್ಲಿ ಪೇರಾಜೆಯ ದಲಿತ ಯುವಕ ಶ್ರೀಧರ ಮತ್ತು ಆತನ ಸಹೋದರ ಬಾಬುವಿಗೆ ಬಂಟವಾಳದ ಭಜರಂಗಿಗಳು ಪೊಲೀಸರ ಜೊತೆ ಸೇರಿಕೊಂಡು ವಿನಾಕಾರಣ ಕೊಟ್ಟ ಹಿಂಸೆಯ ಬಗ್ಗೆ ವರದಿ ಪ್ರಕಟಿಸಿ ಒಳ್ಳೆಯ ಕೆಲಸ ಮಾಡಿದಿರಿ. ಹಾಗೆಯೇ ಈ ಪ್ರಕರಣವನ್ನು ಬಯಲು ಮಾಡಿದ ದಲಿತ ಕಾರ್ಯಕರ್ತೆ ಸರಸ್ವತಿ, ಅದನ್ನು ಆ ಕೂಡಲೇ ವರದಿ ಮಾಡಿದ ಮಂಗಳೂರಿನ ಹಿಂದೂ, ವಾರ್ತಾ ಭಾರತಿ ಮತ್ತು ಕರಾವಳಿ ಅಲೆಗೆ ಕೂಡ ನಮ್ಮ ಮೆಚ್ಚುಗೆ ಸಲ್ಲಬೇಕು.

ಬಂಟವಾಳದ ಬರಿಮಾರು ಗ್ರಾಮದ ಅನಿತಾ ಎಂಬ ತರುಣಿಯನ್ನು ಅಪಹರಿಸಿದರು ಎಂಬ ಆರೋಪದ ಮೇಲೆ ಶ್ರೀಧರ ಮತ್ತು ಬಾಬು ಅವರನ್ನೂ ಹಿಂಸಿಸಲಾಗಿತ್ತು, ಈ ಆರೋಪ ಸುಳ್ಳು ಎಂದು ಬಯಲಾದ ಮೇಲೆ ಅನಿತಾ ಮುಸ್ಲಿಮ್ ಸಮುದಾಯದ ಲವ್ ಜಿಹಾದ್‌ಗೆ ಬಲಿಯಾಗಿದ್ದಾಳೆ ಎಂದು ಆರೋಪಿಸಿ, ಭಜರಂಗಿಗಳು, ಮಂಗಳೂರು ಸಮೀಪದ ಗುರುಪುರ ವಜ್ರದೇಹಿ ಮಠದ ಸ್ವಾಮೀಜಿಯ ನೇತೃತ್ವದಲ್ಲಿ ಸಾರ್ವಜನಿಕ ಆಂದೋಲನ ನಡೆಸಿದರು. ಲವ್ ಜಿಹಾದ್‌ನ ಕಟ್ಟುಕತೆಯನ್ನು ಹರಡುವುದರಲ್ಲಿ ಕರಾವಳಿಯ ಪ್ರಮುಖ ಪತ್ರಿಕೆಗಳಾದ ಉದಯವಾಣಿ ಮತ್ತು ವಿಜಯ ಕರ್ನಾಟಕಗಳ ಕೊಡುಗೆಯೂ ದೊಡ್ಡದಿತ್ತು, ಆದರೆ ಅನಿತಾ, ಕುಖ್ಯಾತ ಸರಣಿ ಹಂತಕ ಮೋಹನ್‌ಕುಮಾರ್ ಕೊಲೆ ಮಾಡಿದ ತರುಣಿಯರಲ್ಲಿ ಒಬ್ಬಳಾಗಿದ್ದಳು ಎಂಬ ರಹಸ್ಯ ಬಯಲಾದ ನಂತರ, ತಾವು ಸೃಷ್ಟಿಸಿದ ಲವ್ ಜಿಹಾದ್ ಕಟ್ಟುಕತೆಯ ಬಗ್ಗೆ ಕರಾವಳಿಯ ಭಜರಂಗಿಗಳು, ಗುರುಪುರದ ಸ್ವಾಮೀಜಿ ಹಾಗೂ ಜಿಲ್ಲೆಯ ಪತ್ರಿಕೆಗಳಿಂದ ಕ್ಷಮಾಯಾಚನೆಯ ಒಂದು ವಾಕ್ಯವೂ ಹೊರಬೀಳಲಿಲ್ಲ.

ಮೋಹನ್ ಕುಮಾರನ ಸರಣಿ ಕೊಲೆಗಳು, ಕರಾವಳಿಯ ಬದುಕಿನ ಮಹಾನ್ ರೂಪಕದಂತೆ ನನಗೆ ತೋರುತ್ತಿದೆ. ಶ್ರೀಧರನನ್ನು ಹುಡುಕಿಕೊಂಡು ಪೇರಾಜೆಗೆ ಹೋದ ಬಂಟವಾಳದ ಭಜರಂಗಿಗಳು ಪೊಲೀಸು ಸಮವಸ್ತ್ರ ತೊಟ್ಟಿದ್ದರಂತೆ! ಅವರ ಜೊತೆ ಉದಯವಾಣಿ, ವಿಜಯ ಕರ್ನಾಟಕಗಳ ಸಂಪಾದಕರೂ ಸಮವಸ್ತ್ರ ತೊಟ್ಟು ಹೋಗಿದ್ದರೆ ಈ ರೂಪಕ ಇನ್ನಷ್ಟು ಅರ್ಥಪೂರ್ಣವಾಗಿರುತ್ತಿತ್ತು!

ನಿಮ್ಮ ವರದಿಯಲ್ಲಿ ದಲಿತ ವಿರೋಧಿ ಭಜರಂಗಿಗಳು ಮತ್ತು ಭಜರಂಗಿ ಪೊಲೀಸರನ್ನು ಮಾತ್ರ ಹೆಸರಿಸಿದ್ದೀರಿ. ಭಜರಂಗಿ ಪತ್ರಿಕೆಗಳನ್ನು ಏಕೆ ಮರೆತಿರಿ? ಸರಣಿ ಹಂತಕ ಮೋಹನ್‌ಕುಮಾರ ಇನ್ನೂ ಒಂದು ಮಾರಣಾಂತಿಕ ರೂಪಕವನ್ನು ಸೃಷ್ಟಿಸಿದ್ದಾನೆ. ಆತ ಕೊಲೆ ಮಾಡಿದ ಯುವತಿಯರಲ್ಲಿ ಬಂಟವಾಳದ ವಾಮಪದವಿನ ಲೀಲಾವತಿ ಕೂಡ ಒಬ್ಬಳಾಗಿದ್ದಳು. ಲೀಲಾವತಿ ದಸಂಸ, ಬೀಡಿ ಕಾರ್ಮಿಕರ ಸಂಘ, ಬಿಎಸ್‌ಪಿ ಮುಂತಾದ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಳು ಎಂಬ ಒಂದೇ ಒಂದು ಕಾರಣಕ್ಕೆ ಅವಳು ನಾಪತ್ತೆಯಾದ ಮೇಲೆ ಪೊಲೀಸರು ಶಂಕಿತ ನಕ್ಸಲರ ಪಟ್ಟಿಗೆ ಅವಳನ್ನು ಸೇರಿಸಿದ್ದರು! ಲೀಲಾವತಿಯನ್ನು ಪತ್ತೆ ಮಾಡಿದವರಿಗೆ 1 ಲಕ್ಷ ರೂಪಾಯಿ ಬಹುಮಾನವನ್ನು ಸಹ ಪೊಲೀಸು ಇಲಾಖೆ ಘೋಷಿಸಿತ್ತು, ಅವಳ ಸಾವಿನ ರಹಸ್ಯ ಹೊರಬೀಳುವವರೆಗೆ, ಪೊಲೀಸರು, ಅವಳ ಕುಟುಂಬದವರಿಗೆ ಸತತವಾಗಿ ಕಿರುಕುಳ ಕೊಟ್ಟಿದ್ದರು. ಬರಿಮಾರಿನ ಅನಿತಾ, ವಾಮಪದವಿನ ಲೀಲಾವತಿ, ಪೇರಾಜೆಯ ಕಾವೇರಿ (ಶ್ರೀಧರ ಮತ್ತು ಬಾಬು ಅವರ ಸೋದರಿ) ಮತ್ತು ಇನ್ನೂ ಹಲವು ತರುಣಿಯರನ್ನು ಬೇಟೆಯಾಡಿದ್ದು ಮೋಹನ ಕುಮಾರ ಒಬ್ಬನೇ ಎಂದು ಹೇಗೆ ಹೇಳುತ್ತೀರಿ?

-ನಿಮ್ಮ

ಜಿ. ರಾಜಶೇಖರ

...ಬಚ್ಚೇಗೌಡ ಹೋಯ್ತಾ ಇದ್ರೆ ಉಚ್ಚೆ ಹುಯ್ತು ಕುತಗಬೇಕು

...ಳಮಾವ, ಬಚ್ಚೇಗೌಡ ಸುದ್ದಿ ಗೊತ್ತಾಯ್ತೆ?" ಉಗ್ರಿ ಬಂದ.

...ಗ್ರಿಯು ಆತುರದ ಮಾತಿಗೆ ಕಾಳಮಾವ ...ಡುವುದಕ್ಕೂ ಮೊದಲೇ ಸೀರ, ...ಆರೋದನೇನ್ಲ?" ಎಂದ.

...ಯು ಲು ಸೀ ಮೆ

...ಟ್ಟೆಪುರಾಣ

▸▸ ಬಿ. ಚಂದ್ರೇಗೌಡ

...ರೋಗಲಿಲ್ಲ ಕಣೊ. ತನ್ನ ಕಾರ ಹಿಂದಕಾಕಿದ ...ಪಾಪ ಯಾರ್ನೊ ಹಿಡಕಂಡು ಸರಿಯಾಗಿ ನೇದವುನೆ. ...ತೀರೋಗದೆ ಇದ್ದದ್ದೇ ಹೆಚ್ಚು."

"...ರಿಯಂಪ್ಪ, ಕಾರ ಹಿಂದಕಾಕಿದ ಅಂತ ...ಡುದದೆ? ಮಿನಿಟ್ರಾದೋನು ಹಿಂಗೇನ್ಲ ನ್ಯಡಕಳದು?" ...ಕಾಳಮಾವ.

"...ಂಗರೆ ಮಿನಿಟ್ರು ಯಾರಿಗೂ ವಡಿಯಂಗಿಲವೆ?" ... ಜುಮ್ಮಿ.

"...ವಡಿಯಂಗಿಲ್ಲ ಕಣೆ. ತಪ್ಪು ಮಾಡಿದ್ರೆ ...ಸ್‌ನೋರಿಗೆ ಹೇಳಬೇಕು. ಅಧಿಕಾರಿಗಳಿಗೇಳಬೇಕು. ...ಟ್ಟು ತಾನೇ ಕೈ ಮಾಡದಲ್ಲ."

...ಗೊಂದಸತಿ ಮಾದೇಗೌಡ ಇಂಜಿನೀರಿಗೆ ಹ್ವಡದಿದ್ದ ..." ಎಂದ ಸೀರ.

"...ಂಜಿನೀಯರು ತಪ್ಪು ಮಾಡಿದ್ದ ಅದ್ಕೆ ವಡದ ...

...ವುನೇನು ತೆಪ್ಪು ಮಾಡಿದ್ದಾ?"

"...ಜರು ಬುಡದೆ ಬತ್ತುದ ಗದ್ದೆ ವಣಗಿಸಿದ್ದ ಕಣೆ. ...ಮಾದೇಗೌಡ್ರು ಅವುನ್ನ ಕರಸಿದ್ರು. ಮನೇಲಿ ಮನಿಗಿದ್ದ ...ನ್ನಸಿಗಂಡ. ಆಗ ಮಾದೇಗೌಡ ಮನೆತಕ್ಕೆ ಹೋಗಿ, ... ಕ್ಯನ್ನಿಗೆ ಬಾರಿಸಿದ. ಅವುನು ನಾನು ದಲಿತ ...ಕೇಸು ಮಾಡಕೆ ಓಡಾಡಿದ. ದಲಿತ ಅಂತ ಹಣೆ ...ಬರಕಳ್ಳಲೆ ಅಂತ ಮಾದೇಗೌಡ ಬೋದು ಬಂದಿದ್ದ. ...ಮಾದೇಗೌಡ ತಪ್ಪು ಮಾಡಿದೋನಿಗೆ ಹ್ವಡದ. ...ಚ್ಚೇಗೌಡ ತನ್ನ ಕಾರ ಹಿಂದಾಕಿದ ಅಂತ ವಡದವುನಲ್ಲಾ ...ಏನಾಗ್ಯದೆ ಅಂತ."

"...ವುನೆಸರೆ ಬಚ್ಚಾ ಕಣೊ ಉಗ್ರಿ. ಬಚ್ಚನಿಗೆ ಯಾವ ...ಕ್ಕಿ ಇರತದಪ್ಪ? ಅದ್ಕೆ ಹ್ವಡದಿದ್ದು ಅಲ್ದೆ ನಂದೇ ...ಂತ ಅವುನೆ" ಎಂದ ವಾಟಿಸ್ಸೆ.

"...ಮಾಕಂದವುನೆ ಗೊತ್ತೇನೊ? ಅವುನಿರದೇ ಅಂತ ...ದಲ್ಲಿ, ಅದೇ ದ್ಯಾವೇಗೌಡನ ಜ್ವತೆ ಇದ್ರೆ ...ತನವುನು?" ಎಂದ ಉಗ್ರಿ.

"...ಜ, ದಳದಲ್ಲಿದ್ದಾಗ ಅವುನೊಂತರ ದ್ಯಾವೇಗೌಡನ ...ಗನಂಗಿದ್ದ. ಅದರಲ್ಲೂ ಡೆಲ್ಲಿ ಜನ ಬಚ್ಚೇಗೌಡನ್ನ ದ್ಯಾವೇಗೌಡನ ಮಗ ಅಂತ್ಲೆ ತಿಳಕಂಡಿದ್ರಂತೆ. ಇವುನು ಅಲ್ಲಗಳಿಯಕ್ಕೊಗದಂಗೆ ಸುಮ್ಮನಿದ್ನಂತೆ."

"ಅದ್ಯಾಕ್ ಸುಮ್ಮನಿದ್ದಾ?"

"ಅವುನು ದ್ಯಾವೇಗೌಡ್ರು ಪ್ರಧಾನಿಯಾಗಿದ್ದಾಗ ನೋಡಕ್ಕೋಗಿದ್ನಂತೆ ಕಣಕ್ಕ. ಆಗ ಪೊಲೀಸ್‌ನೋರು ಬಾಗಲಲ್ಲೇ ತಡದರಂತೆ. ಆಗ ಬಚ್ಚೇಗೌಡ 'ನಾನು ಬಚ್ಚೇಗೌಡ ಕಂಡ್ರೀ' ಅಂದನಂತೆ. ಅದ ಕೇಳಿಸಿಗಂಡೋನೊಬ್ಬ 'ಅರೆ ವೊ ಪರ್‌ದಾನ್ ಮಂತ್ರಿ ದೇವೊಗೋಡಾಕ ಬೇಟ ಚೋದ್ರೆ' ಅಂದನಂತೆ. ಓಹೊ ಇವುನು ದೇವೇಗೌಡನ ಬಚ್ಚಾ ಅನ್ನಕಂಡು ಅವತ್ತಿಂದ ಗೌಡ್ರು ನೋಡಕ್ಕೆ ಈ ಬಚ್ಚೇಗೌಡನಿಗೆ ಯಾವ ಪರವಾನಗಿನೂ ಬೇಕಾಗಲಿಲವಂತೆ. ಅವತ್ತು ಬಂದ ಅಂಕಾರ ಇನ್ನೂ ಇಳದಿಲವೇನೊ."

"ನಿಜ ಕಣೊ, ಮಂತ್ರಿಯಾದೋನ ಮಕದಲ್ಲಿ ಜನಗಳ ರಕ್ಷಣೆ ಮಾಡೋ ಜವಾಬ್ದಾರಿ ಇರತದೆ. ಆದ್ರೆ ಇವುನು ಅಂಗೆ ಕಂಸಣ್ಣನಂಗೆ ಉರಿತನೆ. ಯಾವನೊ ಹುಡುಗ ಇವುನ ಕಾರ ಹಿಂದಕಾಕಿ ಮುಂದಕೋದ ಅನ್ನು. ಅದಕ್ಕೆ ಕಾರಣ ಏನಪ್ಪ ಅಂದ್ರೆ ಇವುನು ನಿಧಾನಕೋಯ್ತಿದ್ದ ಅಂತ ಕಾಣ್ತದೆ. ಅದ್ಕೆ ಅವುನು ಇವುನ್ನ ಹಿಂದಕಾಕ್ಯವುನೆ."

"ಉಗ್ರಿ, ಈ ಸೈಡ್‌ತಗಂಡು ಪಾಸ್ಯಾಗೋಯ್ತರಲ್ಲ, ಆ ಪೂಲಿಸ್ ಫೆಲೊಗಳು ಹೋಗಿ ಮಾಡಬೇಕಾಗಿರೊ ಅಂತ ಯಾವ ಘನಕಾರ್ಯನೂ ಇರದಿಲ್ಲ ಕಣೊ. ಸುಮ್ಮನೆ ಅಂಗೋಯ್ತವೆ. ಇದೂ ಅಂತ ಗಿರಾಕಿನೇ ಇರಬೇಕು. ಬಚ್ಚೇಗೌಡ ಮದ್ದೆ ತಿಕ್ಲ, ಇಳುದು ಸರಿಯಾಗಿ ಗೂಸು ಕೊಟ್ಟವುನೆ."

"ಅದಕಿಂತ ಯಾಕಪ್ಪ ಸ್ಪೀಡಾಗೋಯ್ತಿ ಅಂತ ಅಂದಿದ್ರೆ ಎಷ್ಟು ಚನ್ನಾಗಿತ್ತು. ಬಚ್ಚೇಗೌಡ ಸ್ವಚ್ಚೇಗೌಡಾಗನು."

"ಮಂತ್ರಿಯಾಗಿದ್ರು ಜಂಟ್ಲುಮ್ಯಾನ್ ತರ ನ್ಯಡಕಳೋರು ಅಂದ್ರೆ ಎಂ.ಪಿ. ಪ್ರಕಾಶ್ ಕಣೊ ಉಗ್ರಿ. ಅಂಥೋರ್‍ಯಲ್ಲ ನ್ನ ಫ್ರೆಂಡಾಗಿದ್ರು ಅಂತ ನ್ಯನಿಸಿಗಂಡ್ರೆ ಏನೊ ಒಂಥರಾಯ್ತದೆ. ಅವುರು ಹೋಂ ಮಿನಿಷ್ಟ್ರಾಗಿದ್ದಾಗ ಅಪರಾಧಿಗಳನೂ ಗೌರವವಾಗಿ ಮಾತಾಡಸರು. ಹೋಂ ಮಿನಿಷ್ಟ್ರ ಮಾತಾಡಸಕ್ಕೆ ಮನಿಗೆ ಬಂದ ಕಳ್ರು ಸುಳ್ರುನ್ಯಲ್ಲ 'ಕೂತಗಳಪ್ಪ ಕಾಫಿ ಕುಡಿ' ಅಂತ ಹೇಳಿದ್ದ ನಾನೇ ನೋಡಿದ್ದಿನಿ. ನನಿಗೇ ಒಂದು ಸತಿ 'ನಿನ್ನ ಐಟಂ ನಮ್ಮನೆಲಿ ಇಲ್ಲ ಕಣಪ್ಪ, ಪಟೇಲ್ರು ಮನೆಲಿ ಸಿಕ್ಕತದೆ' ಅಂತ ನಗಾಡಿದ್ರು. ಮಂತ್ರಿಯಾದೋರು ಎಂ.ಪಿ. ಪ್ರಕಾಶನಂಗಿರಬೇಕೆ ವರತು ಈ ಬಚ್ಚ ರೆಡ್ಡಿ ರಾಮುಲು, ರೇಣುಕನ ತರ ಇರಬಾರ್ದು."

"ಅವುನ್ಯಾರ್ಲ ಪ್ರಕಾಸುನ್ನ ಬೋದವುನಂತೆ. ಅವ್ವನ ಬಾಯಿಗೆ ನನ್ನ ತೊಂಬಲ ಹಾಕ" ಎಂದಳು ಜುಮ್ಮಿ.

"ಪ್ರಕಾಶ್ ಪಟ್ಟದ ಕುದುರೆಯಿದ್ದಂಗೆ ಕಣಕ್ಕ. ಅದು ಯಾವತ್ತೂ ರಾಜಬೀದಿಲೆ ತಿರಗದು. ಆದ್ರೆ ಚರಂಡಿಲಿ ತಿರುಗಾಡೊ ಹಂದಿ, ಕುದುರೆ ಜರಿತು ಅಂದ್ರೆ ಅದರ ಯೇಗ್ತಿನೆ ಅಷ್ಟು. ಹಂದಿ ಏನು ಮಾಡ್ತದೇಳು."

"ಊರಲ್ಲಿರೊ ಹುಚ್ಚಿ ಬಾಗಲುಡಿಕ್ಯಂಡು ತಿರುಗ್ತದೆ."

"ಎಜ್ಜಾಟ್ಲಿ ಕರಟ್. ಸದಾ ಗಣಿ ಹೇಸಿಗೆ ಹುಡುಕೋ ಹಂದಿ ಏನಾದ್ರು ಅಂದ್ರೆ ರಾಜಬೀದಿ ಕುದುರೆ ಯಂಗೆ ತಲೆ ಕೆಡಿಸಿಗಳದಿಲವೊ, ಅದೇ ತರ ಪ್ರಕಾಶ್ ರೆಡ್ಡಿಗೆ ಏನೂ ಹೇಳಲಿಲ್ಲ. ಆದ್ರೆ ಜನಗಳೆ ಕೈಗೆ ಸಿಕ್ಕದ ಕಲ್ಲು ತಗಂಡು ಹಂದಿ ಗ್ವಡುದ್ರು. ಸಾಕಲವೆ ಮರಿಯಾದಿ."

"ಪ್ರಕಾಸುನ್ನ ಇಲ್ಲಿಗಂಟ ಯಾರೂ ಬೋದಿಲ್ಲ. ಇವುನ್ಯಂಗೆ ಬೋದುನ್ಲ?" ಎಂದ ಕಾಳಮಾವ.

"ಬಳ್ಳಾರಿಲಿ ಸಭೆ ಮಾಡಿದರಲ್ಲ ದ್ವಡಪ್ಪ, ಆಗ ಪ್ರಕಾಶ್ ಭಾಸಣ ಮಾಡ್ತ ಸುಸುಮ ಸ್ವರಾಜ್ ಲಕ್ಷ್ಮಿ ಪೂಜೆಗೆ ಅಂತ ಬತ್ತಳೆ. ಲಕ್ಷ್ಮಿ ಜ್ವತೆಲೆ ಹೋಯ್ತಳೆ ಅಂತ ಅಂದ್ರು.



ಅದಂ ನಿಜವೇ ಆದ್ರಿಂದ ಈ ರೆಡ್ಡಿಗಳಿಗೆ ಮೆಣಸಿನಕಾಯಿಗಿಡದಂಗಾಯ್ತು. ಅದ್ಕೆ ಪ್ರಕಾಶನ್ನ ಬೋದ. ನಾವ್ಯಲ್ಲ ಪ್ರತಿಭಟನೆ ಮಾಡಿ ರೆಡ್ಡಿ ಮಕ್ಕುಗದೊ. ನಾವ್ಯಲ್ಲ ಉಗದ ಮ್ಯಾಲ್ರೆ ಯಾವೊ ಒಂದಿಷ್ಟು ಲಿಂಗಾಯಿತ್ರು ಸೇರಿಕಂಡು ಕೂಗಾಡ್ಯವೆ. ಅವ್ರುಕೆ ಸ್ವಾಭಿಮಾನ ಇದ್ರೆ ರೆಡ್ಡಿ ರಾಜೀನಾಮೆ ಕೊಡೋಗಂಟ ಹೋರಾಡಬೇಕಿತ್ತು."

"ಇದೇನೊ ವಾಟಿಸ್ಸೆ ಹಿಂಗಂತೀ? ಪ್ರಕಾಶನಿಗೆ ಲಿಂಗಾಯಿತ್ರಿಗಿಂತ ಕಲೆ, ಸಾಯಿತ್ಯ, ಸಂಗೀತ, ಸಿನುಮದೋರೆ ಅಲವೆ ಸಮಂದಿಗಳು. ಅದ್ಕೆ ಈಗ ಬೇಜಾರಾಗಿರೋದು ಇವುರಿಗೇ ವರತೂ ಲಿಂಗಾಯಿತ್ರಿಗೇನೂ ಅನ್ನಿಸಿಲ್ಲ."

"ಎಜ್ಜಾಟ್ಲಿ ಕರಟ್ ಕಣೊ. ನಾವು ಪ್ರತಿಭಟನೆ ಮಾಡಬೇಕು ಅಂದಾಗ ಒಬ್ಬನೇ ಒಬ್ಬ ಲಿಂಗಾಯಿತ ಬರಲಿಲ್ಲ. ಅವುರೇನಿದ್ರು ಆನು ಹೊರಗಣವನು, ಧರ್ಮಕಾರಣ, ಮಾರ್ಗ, ಇಂತ ಸುದ್ದಿತಗಂಡು ಗಂಟ್ಯರಕತ್ತರೆ. ಅಂಗೆ ಅವುರಿಗೆ ನೋವಾಗೊ ಸುದ್ದಿನೆ ಬ್ಯಾರೆ. ಅವುರು ಒಂಥರಾ ಸಾಬರಿದ್ದಂಗೆ. ಬುಡು ಅವುರ ಸುದ್ದ್ಯಾಕೆ."

"ಬುಡದಲ್ಲ ಕಣೊ. ಎಂ.ಪಿ. ಪ್ರಕಾಶ್ ಈ ಟೈಮಲ್ಲಿ ಯಾವ ಪಾರ್ಟಿ, ಯಾವ ಜಾತಿ, ಧರ್ಮಕ್ಕೂ ಸೇರಿದೋನಲ್ಲ, ಸಾವು ಗೆದ್ದು ಬಂದಿರೊ ಸಜ್ಜನ. ಯಲ್ಲಾ ಸಜ್ಜನರ ಪ್ರತಿನಿಧಿ ಅವುನು. ಅಂಥವುನಿಗೆ ಇಂತ ಮಾತಂತನೇ ಅಂದ್ರೇ ಎಡೂರಪ್ಪ ರೆಡ್ಡಿಗೆ ಬೈಬೇಕಾಗಿತ್ತು, ಅದೇ ಬಚ್ಚೇಗೌಡನ ವಿಷಯದಲ್ಲಿ ಕ್ಷಮೆ ಕೇಳ್ಯವುನೆ. ಪ್ರಕಾಶ್ ವಿಷಯದಲ್ಲಿ ಬಾಯಿಬುಟ್ಟಿಲ್ಲ."

"ಮಿಸ್ಟರ್ ಉಗ್ರಿ, ಬಚ್ಚೇಗೌಡ ನಿಜವಾಗ್ಲು ಎಡೂರಪ್ಪನಿಗೆ ಹೇಳಿಮಾಡಿಸಿದ ಮಂತ್ರಿ. ದಾವಣಗೆರೆ ಸಭೆಲಿ, ಪಾಪ ಮನೆ ಮಠ ಇಲ್ಲದ ಜನ ಪ್ರತಿಭಟನೆ ಮಾಡಿದಾಗ, ಇದೇ ಎಡ್ಯೂರಪ್ಪ ಏನಂದ? ಏ ಪೊಲೀಸ್‌ನೋರು ಕತ್ತೆ ಕಾಯ್ತ ಇದ್ದಿರಾ ಅಂದ. ಆ ಮಾತ ಕೇಳಿಸಿಗಂಡ ಪೊಲೀಸ್‌ನೋರು ಮನೆ ಇಲ್ಲದ ಜನಕೆ ಯಾವ ತರ ಹ್ವಡದವುರೆ ಅಂದ್ರೆ, ಅವುರಿನ್ನು ಮುಂದೆ ಬೀದಿಲೆ ಇರತದೇ ವರತೂ ಮನೆ ಕೇಳದಿಲ್ಲ."

"ಅಯ್ಯೋ ಪಾಪ ಅಂಗ್ವಡದ್ರೇನ್ಲ?"

"ಊ ಕಣಕ್ಕ ಮುಖ್ಯಮಂತ್ರಿನೆ ಹೇಳಿ ಹ್ವಡಿಸಿದ. ಅದ್ರಿಲ್ಲಿ ಬಚ್ಚೇಗೌಡನೆ ಹೋಗಿ ಹ್ವಡದನಂತೆ. ಇನ್ನು ಮುಂದೆ ಮುಖ್ಯಮಂತ್ರಿ ಸಭೆಲಿ ಯಾರು ಉಸುರೆತ್ತಂಗಿಲ್ಲ. ಮಂತ್ರಿ ಕಾರು ಬತ್ತಾಯಿದ್ರೆ ಜಾಗಬುಟ್ಟು ಸೈಡಿಗೆ ನಿಂತಗಂಡು ಉಚ್ಚೆ ಹೂದು ಅವುನು ಹೋದ ಮ್ಯಾಲೆ ರಸ್ತೆಗೆ ಬರಬೇಕು."

"ಊ ಕಣೊ ಉಗ್ರಿ. ಸಚಿನ್ ತೆಂಡುಲ್ಕೆರ ಇನ್ನು ಮ್ಯಾಲೆ ಆಡಿದ್ಯಲ್ಲ ದಾಖಲನೆ ಅಂತೆ. ಅಂಗೆ ಈ ಎಡೂರಪ್ಪನ ಸರಕಾರ ಇಲ್ಲಿ ಗಂಟ ಮಾಡಿರೊ ದಾಖಲೆನ್ಯಲ್ಲ ನೋಡಿದ್ರೆ ಇನ್ನು ಏನೇನು ಮಾಡ್ತರೊ ಏನೊ. ಕಾಂಗ್ರೆಸಿನವು ಬಳ್ಳಾರಿಲಿ ಸಭೆ ಮಾಡಿದ್ರು ಅಂತ ಮೈಸೂರಿಗೂ ಬಂದು ಸಭೆ ಮಾಡಿದ್ರಲ್ಲಾ ವಿರೋಧ ಪಕ್ಷಕ್ಕೆ ಉತ್ತರ ಕೊಡೂದು ಹಿಂಗೇನೊ."

"ಅದಿಲ್ಲೋ, ಸುತ್ತಮುತ್ತಲ ಜಿಲ್ಲೆ ಡಿಪೋಗಳ ಬಸ್ಸನ್ಯಲ್ಲ ಮೈಸೂರಿಗೆ ತಗಂಡೋಗಿ ಜನೇಟು ಪರದಾಡಿದ್ರು ಅಂತೀ? ಅವತ್ತು ಚನ್ನಾಪಟ್ನದಲ್ಲಿ ಜನ ಪರದಾಡಿದ್ದ ನೋಡಕ್ಕಾಗಲಿಲ್ಲ. ಜನ ಗಲಾಟೆ ಮಾಡ್ಯರು ಅಂತವ ಪೊಲೀಸ್‌ನೋರ ಹಾಕ್ಯವುರೆ. ಅವತ್ತೇನಾರ ಗಲಾಟೆ ಹತ್ತಿಗಂಡಿದ್ರೆ ಹ್ಯಣ ಬಿದ್ದೊಗ್ತವು."

"ಬಿದ್ದೊದ್ರೆ ಏನಾಗದು ಗೊತ್ತೇನೊ? ಎಡೂರಪ್ಪ ಸತ್ತೋರ ಮನಿಗೆ ಒಂದು ಲಕ್ಷ ಕೊಟ್ಟು 'ನಾನೆ ನಿಮ್ಮ ಮಗ ಅಂತ ತಿಳಕಳಿ' ಅಂತ ಗೋಳಾಡೋನು. ಅಮ್ಯಾಲೆ 'ಸತ್ತೋನು ಬಸ್ ಪ್ರಯಾಣ ಮಾಡಕ್ಕೆ ಅಂತ ಬಂದೋನಲ್ಲಾ, ಬಿಜೆಪಿ ಸರಕಾರದ ಬಸ್ಸುಗಳಿಗೆ ಕಲ್ಲು ಹ್ವಡಿಯಕ್ಕೆ ಅಂತ ಬಂದಿದ್ದೋನು" ಅಂತನನ್ದೋನು. ಆಗೇನೀಸಗಂಡಿ?"

"ನಿಜ ಬುಡು. ಅವುನು ಯಾವ ಟೇಮಲ್ಲಿ ಏನು ಮಾತಾಡ್ತನೆ ಅಂತ ಅವುನಿಗೇ ಗೊತ್ತಿರದಿಲ್ಲ. ಆ ರೆಡ್ಡಿಗಳ ಸವಾಸ ಎಲ್ಲಿಗಂಟ ಇರತದೊ ಅಲ್ಲಿವರಿಗೂ ಎಡೂರಪ್ಪನ ಮಾತು ಸರಿಯಾಗದಿಲ್ಲ." ●



ಕುಂಡೆಯ ಮೇಲೆ ಲಾತಾ

ಇದನ್ನು ವಿಚಿತ್ರ ಘಟನೆಯಿಂದ ಶುರುಮಾಡೋಣ. ಸಿಂಗಪೂರ್‌ನಲ್ಲಿ ದೊಡ್ಡ ಕೋಲಾಹಲವೆದ್ದಿದೆ ಎಂದು ಬಹಳ ಜನ ಹೇಳುತ್ತಿದ್ದರೂ ಸಿಂಗಪೂರ್ ತಣ್ಣಗೇ ಇದೆ. ಕೋಲಾಹಲದ ಊಹೆಗೆ ಕಾರಣ, ಮೊನ್ನೆ ಸಿಂಗಪೂರ್‌ನಲ್ಲಿ ತನ್ನ ತಂದೆತಾಯಿಯರೊಂದಿಗೆ ಬಹಳ ವರ್ಷದಿಂದ ವಾಸಿಸುವ ಮೈಕೇಲ್ ಫೇ ಎಂಬ ಹದಿನೆಂಟು ವರ್ಷದ ಹುಡುಗ ಸುದ್ದಿಯಲ್ಲಿದ್ದಾನೆ; ಈತ ಸಿಂಗಪೂರ್‌ನ ರಸ್ತೆಯಲ್ಲಿ ನಿಂತಿದ್ದ ಕಾರುಗಳಿಗೆ ಬಣ್ಣ ಬಳಿದು ವಿರೂಪಗೊಳಿಸಿದ. ಅಮೆರಿಕಾದಲ್ಲಾಗಿದ್ದರೆ ಈತ ಕಲ್ಲಿನಿಂದ ಜಜ್ಜಿ ಡ್ಯಾಂಬರ್ ಹೊಡೆಯುತ್ತಿದ್ದನೆಂದು ಕಾಣುತ್ತದೆ. ಕಾರುಗಳಿಗೆ ಬಣ್ಣ ಬಳಿದು ವಿರೂಪಗೊಳಿಸುವುದು ಸಿಂಗಪೂರ್‌ನಲ್ಲಿ ಅಪರಾಧ; ಬಹಳ ಕೆಟ್ಟ ಹುಡುಗರು ಮಾತ್ರ ಹಾಗೆ ಮಾಡುತ್ತಾರೆ. ಅಂಥವರು ಮುಂದೆ ಇನ್ನೇನು ಮಾಡಬಹುದೆಂದು ಊಹಿಸುವುದು ಕಷ್ಟ. ಆದ್ದರಿಂದ ತುಂಬ ಶಿಸ್ತು, ಅಚ್ಚುಕಟ್ಟಿನ ಸಿಂಗಪೂರ್‌ನಲ್ಲಿ ಈ ತಪ್ಪು ಮಾಡಿದವನಿಗೆ ಶಿಕ್ಷೆ–ಅವನ ಚೆಡ್ಡಿ ತೆಗೆದು ಅಂಡಿನ ಮೇಲೆ ಬಿದಿರು ಬೆತ್ತದಿಂದ ಆರು ಸಲ ಥಳಿಸುವುದು. ಆ ಶಿಕ್ಷೆಯನ್ನು ಮೈಕೇಲ್ ಫೇಗೆ ವಿಧಿಸಲಾಗಿದೆ. ಅಮೆರಿಕಾದಲ್ಲಿ ಬೊಬ್ಬೆಯೋ ಬೊಬ್ಬೆ! ಮೈಕೇಲ್ ಫೇಯ ತಂದೆತಾಯಿಗಳು ತಮ್ಮ ಮಗ ಆಗಲೇ ಅಂಡು ಕಳೆದುಕೊಂಡಂತೆ ಕೂಗಾಡುತ್ತಿದ್ದಾರೆ. ಅಧ್ಯಕ್ಷ ಬಿಲ್ ಕ್ಲಿಂಟನ್‌ಗೆ ದೂರು ಕೊಟ್ಟಿದ್ದಾರೆ. ಕ್ಲಿಂಟನ್ ಸಿಂಗಪೂರ್ ಸರ್ಕಾರಕ್ಕೆ 'ಅಷ್ಟೆಲ್ಲ ಕಟು ಶಿಕ್ಷೆ ಕೊಡಬೇಡಿ' ಎಂದು ಸೂಚಿಸಿದ್ದಾನೆ! ಸಿಂಗಪೂರ್ ಯಾರ ಮಾತನ್ನೂ ಕೇಳುತ್ತಿಲ್ಲ.



ಇದಕ್ಕೆ ಇನ್ನೊಂದು ಮುಖವಿದೆ. ಮೈಕೇಲ್ ಫೇಯ ತಂದೆತಾಯಿ, ಅಮೆರಿಕಾದ ಸರ್ಕಾರ, ಅನೇಕ ಪತ್ರಿಕೆಗಳು ಮೈಕೇಲ್‌ನ ಪರವಾಗಿ ಬರೆದಿದ್ದರೂ ಅಮೆರಿಕಾದ ಬಹುಪಾಲು ಜನ 'ಈ ತರಹದ ಹುಡುಗರ ಅಂಡಿನ ಮೇಲೆ ಬೀಳಬೇಕು. ಇವರ ಅವಾಂತರ ಅತಿಯಾಗಿದೆ' ಎಂದು ಹೇಳುತ್ತಿದ್ದಾರೆ. ಅಮೆರಿಕಾದಲ್ಲಿ ಕೂಡ ಈ ಬಗೆಯ ಶಿಕ್ಷೆ ಇದ್ದರೆ ಅನೇಕ ಬಗೆಯ ಪಾತಕ ಕಮ್ಮಿಯಾಗಲಿವೆ.


ಭಾರತದಲ್ಲೂ ಅಷ್ಟೆ. 'ಬಲಕ್ಕೆ ತಿರುಗಕೂಡದು' ಎಂಬ ಬೋರ್ಡ್ ಇದ್ದರೂ ಬಲಕ್ಕೆ ಹೋಗುವವರು, 'ನಿಲ್ಲಬೇಕು' ಅಂದಲ್ಲಿ ಓಡಿಸುವುದು, ಎಡಗಡೆಯಿಂದ ಓವರ್‌ಟೇಕ್ ಮಾಡುವುದು, ತಂದೆತಾಯಿಗಳ ನೋವನ್ನು ಗಮನಿಸದೇ ಎರಡು ದಿನ ಹೇಳದೆ-ಕೇಳದೆ ತಪ್ಪಿಸಿಕೊಂಡುಹೋಗುವ ಮಕ್ಕಳು, ಸಾರ್ವಜನಿಕ ಪಾರ್ಕ್, ಕಾರು, ರಸ್ತೆ ಎಲ್ಲವನ್ನು ವಿರೂಪಗೊಳಿಸುವವರು... ಇವರ ಅಂಡಿನ ಮೇಲೆ ಹತ್ತು ಸಲ ಬೆತ್ತ ಬಿದ್ದರೆ ಸರಿಹೋದೀತು, ಅಲ್ಲವೆ?

ಹಾಗೆನ್ನುವುದು ಸುಲಭ. ಆದರೆ ಅದರಿಂದಲೂ ಸರಿಹೋಗುವುದಿಲ್ಲ, ಇವತ್ತಿಗೂ ಈ ಕಟ್ಟುನಿಟ್ಟಿನ ಸಿಂಗಪೂರ್‌ಗಿಂತ ಹಾಂಕಾಂಗ್, ಬೆಂಗಳೂರು, ಮೆಲ್ಬೋರ್ನ್, ಅಡ್ಡಿಸ್ ಅಬಾಬಾ ಜೀವಿಸಲು ಉತ್ತಮ ಜಾಗಗಳು.... ಏಕೆಂದು ಯೋಚಿಸಿ.

ಮೇ 11, 1994

ಯಾವತ್ತು ಹೋದರೂ ಇವತ್ತು!

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಎದೆ ತುಂಬಿ ಹಾಡುವೆನು ಕಾರ್ಯಕ್ರಮದಲ್ಲಿ ಏಳೆಂಟು ವರ್ಷದ ಪುಟ್ಟಮಗು 'ವಿರಹಾ ವಿರಹಾ... ನೂರು ನೂರು ತರಹಾ' ಎಂದು ಸುಶ್ರಾವ್ಯವಾಗಿ ಹಾಡಿದಾಗ.... ಆ ಹುಡುಗಿಗೇನು ತಿಳಿದಿರುತ್ತೆ 'ವಿರಹಾ ವಿರಹಾ' ಅಂದರೇನು ಅಂತ... ಆದರೂ ಜನ ನೋಡಿ, ಕೇಳಿ ಆನಂದಿಸೋಲ್ವೆ.... ಎಸ್.ಪಿ. ಬಾಲಸುಬ್ರಹ್ಮಣ್ಯಂ ಅಂತಹ ಎಸ್‌ಪಿಯವರೇ 'ಚೆನ್ನಾಗಿ ಹಾಡಿದೆಯಮ್ಮ... ನೋ ಕಾಮೆಂಟ್ಸ್... ಗಾಡ್ ಬ್ಲೆಸ್ ಯು' ಎಂದೆಲ್ಲ ಆಶೀರ್ವದಿಸೋದಿಲ್ವೆ... ಅದೇ ರೀತಿ ನೀನೂ ನಡೆದುಕೋಬೇಕು ಮಗು ಆಗಸ್ಟ್ ಹದಿನೈದು ಸ್ವಾತಂತ್ರ್ಯ ಬಂದ ದಿನ. ಕರ್ತವ್ಯ ಪರಿಪಾಲನೆ ಮಾಡಬೇಕು. ಅದಕ್ಕೇ ಮಂತ್ರಿ ಆದವರು ಯಾರೋ ಬರೆದು ಕೊಟ್ಟ ಭಾಷಣ ಒದರ್‍ತಾರೆ. ಹಾಗಂತ ಅವರು ಹೇಳಿದಂತೆ ನಡೆದುಕೊಳ್ಳಬೇಕು ಅನ್ನುವುದಾಗಲಿ, ಬೂದಿ ಬುದ್ಧಿಗಳು ಎಂದು ಜರಿಯುವುದಾಗಲಿ ಸಮಂಜಸ ಅಲ್ಲ.... 'ವಿರಹಾ ವಿರಹಾ' ತರಹಾನೆ ಇದನ್ನೂ ಅನುಭವಿಸಿ ಗಾಡ್ ಬ್ಲೆಸ್ ಯು ಎನ್ನುವುದನ್ನು ಕಲಿ ಮಗೂ ಎಂದೆಲ್ಲ ಹೇಳಿದರು ಹಿರಿಯರು... ಪಾದಯಾತ್ರೆ, ಜಾಗೃತಿ ಸಮಾವೇಶ, ಸ್ವಾತಂತ್ರ್ಯ ದಿನಾಚರಣೆಗಳ ಭಾಷಣ ಭೀಕರತೆಯಿಂದ ಜರ್ಝರಿತವಾಗಿ ಟಿವಿ ಬಂದ್ ಮಾಡಿ, ಪತ್ರಿಕೆಗಳನ್ನೆಲ್ಲ ಮೂಲೆಗೆಸೆದು ಬೇಸರ ಕೋಪದಿಂದ ಕುದಿಯುತ್ತಿದ್ದ ನನಗೆ ಸಮಾಧಾನ ಹೇಳಿದ್ದರು.

ಅವರ ಮಾತೂ ನ್ಯಾಯ ಇರಬಹುದು ಎನ್ನಿಸಿತು. ನಿಧಾನವಾಗಿ ಗೆಲುವಾದೆ. ಅರ್ಥವಿಲ್ಲದ ಮಾತನಾಡುವುದೂ ಒಂದು ಕಲೆ ಎಂಬುದು ಟ್ಯೂಬ್‌ಲೈಟ್ ಬುದ್ಧಿಗೆ ಅರಿವಾಯಿತು. ವಿಪಕ್ಷಗಳಿಗೆ ಬುದ್ಧಿಭ್ರಮಣೆ ಆಗಿದೆ ಎನ್ನುತ್ತದೆ ಆಡಳಿತ ಪಕ್ಷ. ಆಡಳಿತ ಪಕ್ಷಕ್ಕೆ ಬುದ್ಧಿಭ್ರಮಣೆ ಆಗಿದೆ ಎನ್ನುತ್ತಿದೆ ವಿಪಕ್ಷ. ಅಂದರೇನಾಯಿತು. ರಾಜಕಾರಣಿಗಳಿಗೆಲ್ಲ ಬುದ್ಧಿ ಭ್ರಮಣೆ ಆಗಿದೆ ಎಂದು ದೃಢಪಟ್ಟಿತು. ಹುಚ್ಚರ ಮಾತು ಎಂದು ಅವರ ಅಭಿಪ್ರಾಯಗಳನ್ನು ಕಡೆಗಣಿಸುವಂತೆಯೂ ಇಲ್ಲ, ಹುಚ್ಚರ ಮಾತಿನಲ್ಲೂ ಸತ್ಯದ ಅಂಶ ಗೋಚರಿಸಬಹುದಲ್ಲವೆ!

ಈಗ ಯಡ್ಯೂರಪ್ಪನವರ ವಿಷಯಕ್ಕೆ ಸೀಮಿತ ಆಗೋಣವಂತೆ. ಹಾವುಗಳು ಆಗಾಗ್ಗೆ ಪೊರೆ ಬಿಡುತ್ತವೆ. ಆಗ ನೋಡಬೇಕು ಅವನ್ನ..... ಮೈಮೇಲಿನ ಕೊಳೆ ಕಳೆದುಕೊಂಡು ಮಿರಮಿರನೆ ಮಿಂಚುತ್ತವೆ. ಅದ ನೋಡೋಕೇ ಒಂದು ಚಂದ. ಸನ್ಮಾನ್ಯ ಮುಖ್ಯಮಂತ್ರಿಗಳೂ ಇಂತಹ ಉರಗ ವಂಶಜರೇ ಇರಬೇಕು. ತಮ್ಮ ದೈಹಿಕ, ಮಾನಸಿಕ, ಜಡತ್ವವನ್ನು ಕಳೆದುಕೊಳ್ಳಲು ಆವಾಗ ಆವಾಗ 'ಪ್ರತಿಜ್ಞೆ' ಹೊರಹಾಕುತ್ತಾರೆ. ಇವುಗಳಲ್ಲಿ ಕೆಲವನ್ನು ಪರಿಶೀಲಿಸೋಣವಂತೆ.

ಮುಖ್ಯಮಂತ್ರಿಯವರು ಬಹಿರಂಗಸಭೆಯಲ್ಲಿ ಕಣ್ಣೀರು ಸುರಿಸಿದರು!

ಯಾಕೆ ಈ ಕಣ್ಣೀರು?

ಬಡವರ ಕಷ್ಟ ನೆನೆದು ಎಂದು ಕೆಲವರು. ಅಲ್ಲ ಎಂದು ಹಲವರು.

ಈಗ ಪ್ರಶ್ನೆ-ಅದು ಎಂತಹ ಕಣ್ಣೀರು?

ಆನಂದಭಾಷ್ಪವೋ? ದುಃಖಾಶ್ರುವೊ? ಮೊಸಳೆ ಕಣ್ಣೀರೊ?

ಇದು ಜಿಜ್ಞಾಸೆ.

ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದರೆ ಇದು ಬಯಲಾಗುವುದಂತೆ. ಆದರೆ ಹಾಕಿರೋದು ಕಣ್ಣೀರಿನ ಸ್ಯಾಂಪಲ್ ಇಲ್ಲ!

ಅಪಚಾರವಾಗಿತ್ತು, ಇನ್ನು ಮುಂದೆಯಾದರೂ ಇಂತಹವಕ್ಕೆ ಎಡೆ ಕೊಡಬಾರದು. ರಾಜಕಾರಣಿಗಳು ಸಾರ್ವಜನಿಕವಾಗಿ ಕಣ್ಣೀರು ಸುರಿಸಿದರೆ ಅದರ ಸ್ಯಾಂಪಲ್ ಸಂಗ್ರಹಿಸಬೇಕು. ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಬೇಕು. ಆಗ ನೋಡಿ. 'ಇಲ್ಲಿದೆ ವೈಜ್ಞಾನಿಕ ವರದಿ' ಎಂದು ಎದೆತಟ್ಟಿ ಸಮರ್ಥಿಸಿಕೊಳ್ಳಬಹುದು. ಯಡ್ಯೂರಪ್ಪನವರು ಇದರಿಂದ ವಂಚಿತರಾದರು.

ಪರೀಕ್ಷೆಯೇ ನಡೆದಿಲ್ಲ. ಆಗಲೇ ಫಲಿತಾಂಶ ಹೊರಬಿದ್ದಿದೆ! ಮೊಸಳೆ ಕಣ್ಣೀರು!!

ಪರಿಣಾಮ: 'ಹೇಡಿ ಮುಖ್ಯಮಂತ್ರಿ' ಬಿರುದು!

ಅದು ಯಾರಿಗೆ? ಸಿಡಿದೇಳುವ ಮುಖ್ಯಮಂತ್ರಿಗೆ! ಅದೂ ಕಾರಣವಿಲ್ಲದಿದ್ದರೂ ಸಿಡಿದೇಳುವ ಮುಖ್ಯಮಂತ್ರಿಗೆ! ಸಾಕ್ಷಿಬೇಕೆ? ದಾವಣಗೆರೆ ಸಮಾವೇಶದಲ್ಲಿ ಹೇಗೆ ಹಾರಾಡಿದ್ದರು ಎಂಬುದನ್ನು ನೆನಪಿಸಿಕೊಳ್ಳಿ. ಕೆಲವು ದಲಿತರಿಗೆ ಮನೆ ಇರಲಿಲ್ಲವಂತೆ. ಅರ್ಜಿ ಸಲ್ಲಿಸುತ್ತಲೇ ಇದ್ದರು. ಕೊಟ್ಟಿರಲಿಲ್ಲ. ಎಲ್ಲ ಕಡೆ ನಡೆಯುವಂತೆಯೇ ಇಲ್ಲೂ ನಡೆದಿತ್ತು. ದಲಿತ ಸಂಘರ್ಷ ಸಮಿತಿ ಪ್ರತಿಭಟನೆ ಮಾಡಿತು. ಜಗ್ಗಲಿಲ್ಲ ಯಡ್ಯೂರಪ್ಪ... 'ಪೋಲೀಸ್ನೋರೆ ನೀವೇನು ಕತ್ತೆ ಕಾಯ್ತಿದಿರೇನ್ರಿ? ಎಂದಾರ್ಭಟಿಸಿದರು. ಆವೇಶದಲ್ಲಿ ಕೂಗಾಡಿದರು. ಇಂತಹ 'ಸಿಡಿದೇಳುವ' ಮನುಷ್ಯನಿಗೇ 'ಹೇಡಿ' ಎಂದರೆ....

ಇವೆಲ್ಲ ಅಸಭ್ಯ ನಡವಳಿಕೆ ಯಾದಿಯಲ್ಲಿ ಬರಬಹುದು. ಆದರೆ ಹೇಡಿ ಎಂಬುದರಲ್ಲಲ್ಲ!

ಇವೆಲ್ಲವುಗಳ ಸಂಯುಕ್ತ ಪರಿಣಾಮವೇ ಇರಬೇಕು. 'ಕಣ್ಣೀರು ಅಸ್ತ್ರ'ವನ್ನು ದೇವೇಗೌಡರ ವಂಶಜರಿಗೆ ಧಾರೆ ಎರೆದು ತಾವು 'ಸಿಡಿದೇಳು ಅಸ್ತ್ರ'ಕ್ಕೆ ಶರಣಾಗಿ 'ಇನ್ನು ಮುಂದೆ ಬಹಿರಂಗವಾಗಿ ಕಣ್ಣೀರು ಸುರಿಸುವುದಿಲ್ಲ' ಎಂಬ ಭೀಷ್ಮ ಪ್ರತಿಜ್ಞೆ ಕೈಗೊಂಡರು!

ಇದು ಪ್ರತಿಜ್ಞೆಯ ಒಂದು ಝಲಕ್ ಆಯಿತು.

ಆಗಸ್ಟ್ 14. ಮೈಸೂರಿನಲ್ಲಿ ಜಾಗೃತಿ ಸಮಾವೇಶ.

ಯಡ್ಯೂರಪ್ಪನವರು ಗುಡುಗಿದರು- 'ನೀವು ಇವತ್ತಿನಿಂದ ಬೇರೆ ಯಡ್ಯೂರಪ್ಪನ್ನ ಕಾಣ್ತೀರಿ.'

ಇವತ್ತು ಅಂದರೆ ಯಾವತ್ತು? ಇವತ್ತು ಅಂದರೆ ಇವತ್ತೇನಾ ಅನ್ನುವ ಪ್ರಶ್ನೆ ಉದ್ಭವಿಸಿತು. ಸನ್ಮಾನ್ಯರನ್ನೇ ಕೇಳಿ ಸಂಶಯ ಪರಿಹರಿಸಿಕೊಳ್ಳೋಣ ಅನ್ನಿಸಿತು. ಆದರೂ ಹಿಂಜರಿದೆ. ಆಷಾಢಮಾಸ ಅಂದರೆ ಅಶುಭ ಅಂತ ಸರ್ವರ ಅಭಿಪ್ರಾಯ. ಅದಕ್ಕೇ ಅದು ಕಳೆದ ನಂತರ ಮಂತ್ರಿಮಂಡಲ ವಿಸ್ತರಣೆ ಅಂದಿದ್ದರು ಯಡ್ಯೂರಪ್ಪನವರು. ಆ ಮಾಸ ಕಳೀತು. ಪತ್ರಕರ್ತರಿಗೆ ಕುತೂಹಲ. ಯಾರು ಮಂತ್ರಿಯಾಗ್ತಾರೆ, ಯಾವಾಗ ಆಗ್ತಾರೆ ಅನ್ನೋದು ತಿಳಿಯೋಕೆ ಯಡ್ಯೂರಪ್ಪನವರನ್ನ



'ಆಷಾಢ ಮಾಸ ಆದನಂತರ ಮಂತ್ರಿ ಮಂಡಳದ ವಿಸ್ತರಣೆ ಎಂದು ಹೇಳಿದ್ದೀರಿ'

'ಹೌದು ಹೇಳಿದ್ದೆ' ಅಂದ್ರು ಅಪ್ಪನವರು.

'ಆಷಾಢ ಕಳೀತಲ್ಲ, ಇನ್ನೂ ವಿಸ್ತರಣೆ ಮಾಡಿಲ್ಲವಲ್ಲ?' ಅಂದ್ರು ಅವರು. 'ನಾನು ಆಷಾಢ ಆದ ನಂತರ ಅಂದದ್ದು ನಿಜ. ಆದರೆ ಯಾವ ಆಷಾಢ ಅಂತ ಹೇಳಿದ್ನಾ' ಎಂದು ದಬಾಯಿಸಿದರು ಯಡ್ಯೂರಪ್ಪನವರು! ನಾಳೆ ಬಾ ಎಂದು ಮನೆಮುಂದಿನ ಬಾಗಿಲಿಗೆ ಬರೆದ ಹಾಗೇನೆ ಮುಖ್ಯಮಂತ್ರಿಗಳ ಮಾತು ಅಂದ್ರೆ! ಈಗೇನಾದ್ರೂ ನಾನು ಅವರನ್ನು ಕೇಳಿದರೆ 'ನಾನು ಇವತ್ತು ಅಂದದ್ದು ನಿಜ. ಇವತ್ತಿನಿಂದ ಬದಲಾವಣೆ ಆಗ್ತೀನಿ' ಅಂತಾರೆ. ಸತ್ಯಸಂಧ ನೋಡಿ. ನಾಳೆ ಹೋಗಿ ಅದೇ ಮಾತು. ನಾಡಿದ್ದು ಹೋಗಿ 'ಅದೇ ಇವತ್ತು!' ಯಾವತ್ತು ಹೋದ್ರೂ 'ಇವತ್ತು'! ಮಾತು ಬದಲಾಯಿಸಲ್ಲ ಇವರು 'ಸತ್ಯಸಂಧರು'

ಬಿಎಸ್‌ವೈ ಯೋಜನೆ!

ಹಾಗೆಂದರೇನು?

ಯಡ್ಯೂರಪ್ಪನವರಿಗಾಗಿ ಯೋಜನೇನು?

ಥೂ ಥೂ. ಅಲ್ಲವಂತೆ. ಅವರಿಗಾಗಿ ಮಾಡಿರುವ ಯೋಜನೆ ಅಲ್ಲವಂತೆ. ಮಧ್ಯಮ ವರ್ಗದ ಜನರಿಗೆ ವಸತಿ ಕಲ್ಪಿಸುವ ಯೋಜನೆಯಂತೆ ಇದು. ಜಿಲ್ಲಾ ತಾಲ್ಲೂಕು ಕೇಂದ್ರದಲ್ಲಿ ಇರುವವರಿಗೋಸ್ಕರವಂತೆ ಈ ಯೋಜನೆ.

ಬಿಎಸ್‌ವೈ ಅಂದ್ರೇನು?

ಬಿ.ಎಸ್. ಯಡ್ಯೂರಪ್ಪ ಅಂತಾನಾ?

ಛೇ ಛೇ ಅಲ್ಲವಂತೆ ಕಣ್ರೀ. 'ಭಾಗ್ಯ, ಸುಂದರ, ಯಶಸ್ಸು' ಅಂತಾ ಅಂತೆ! ಯಡ್ಯೂರಪ್ಪ ಅನ್ನೋ ಹೆಸರಿಗೂ ಇದಕ್ಕೂ ಬಾದರಾಯಣ ಸಂಬಂಧವೂ ಇಲ್ಲವಂತೆ!

ಹಂಗಂತ ಮಂತ್ರಿವರ್ಯರಾದ ಕಟ್ಟಾಸುಬ್ರಹ್ಮಣ್ಯ ನಾಯ್ಡು ಅವರೇ ಹೇಳಿರುವ ಮಾತು ಇದು. ಅದೂ ಆಗಸ್ಟ್ ಹದಿನೈದರಂದು. ಸ್ವಾತಂತ್ರ್ಯ ಬಂದ ದಿನ ಮಂತ್ರಿಯಾದವರು ಸುಳ್ಳು ಹೇಳುತ್ತಾರೆಯೇ?! ಆದರೂ ಕೆಲವು ಸಂಶಯ ಪಿಶಾಚಿಗಳು ಇರುತ್ತವಲ್ಲಾ... ಅವು ಈ ಹೆಸರಿನ ಬಗ್ಗೆಯೇ ಸಂಶಯ ವ್ಯಕ್ತಪಡಿಸಿದವಂತೆ..... ರೇಗೋಯ್ತಂತೆ ಕಟ್ಟಾಗೆ. 'ಇದೇ ರೀತಿ ಮುಂದೆ ಎಲ್ಲಾ ಯೋಜನೆಗಳಿಗೂ ಇಡೋ ಕಾಲ ಬರ್‍ತದೆ' ಅಂತ ಉಗ್ರವಾದಿ ಆದರಂತೆ.

ಅಯ್ಯೋ ಮಾರಾಯ್ರೆ.... ಹಾಕ್ರಿ... ಅದ್ಯಾಕಂಗೆ ಮುಕ್ಕಿಗೆ ಎಟ್ಟಿಸ್ಕೊಂಡಂಗೆ ಆದ್ರೀರಿ... ಎಲ್ಲಾ ಯೋಜನೆಗೂ ಹಾಕ್ರಿ... ಶೌಚಾಲಯಗಳಿಗೂ ಬಿಎಸ್‌ವೈ ಶೌಚಾಲಯ ಅಂತ ಬರುಸ್ರಿ.... ಬೇಕಾದರೆ ಅವರ ಫೋಟೋನೂ ಹಾಕುಸ್ರಿ.... ನಮಗೇನೋ ಬಿಎಸ್‌ವೈ ಯೋಜನೆ ಅಂದ್ರೆ 'ಬುರುಡೆ ಸರದಾರ ಯೋಜನೆ' ಅಂದಂಗಾಗ್ತದೆ... ಅಂತೆಲ್ಲ ತಲೆ ಕೆಟ್ಟೋವು ಆಡ್ಕೊತ್ತಾ ಅವಂತೆ. ಬದುಕಿದ್ರು ನನ್ ಮಕ್ಳು ಹಿಂದೆ ಮಾತಾಡಿ.... ಸಂಸ್ಕೃತ ರಕ್ಷಕರ ಮುಂದೆ ಆಡಬೇಕಾಗಿತ್ತು ಅದೇ ಮಾತ...

ಅಲ್ಲಾ ಈ ಸರ್ಕಸ್ ಎಲ್ಲ ಮಾಡುವುದರ ಬದಲಿಗೆ ಬಿ.ಎಸ್. ಯಡ್ಯೂರಪ್ಪ ಯೋಜನೆ ಅಂತಾನೇ ಹೇಳಬಹುದಾಗಿತ್ತಲ್ಲಾ....

ಟಿ.ಎಸ್.ಎಸ್. ಸದಸ್ಯರು ನಿಮಗೆ ಕೃತಜ್ಞರಾಗಿದ್ದಾರೆ

ಆಗಸ್ಟ್ 25, 2010ರ 'ಲಂಕೇಶ್' ಸಂಚಿಕೆಯಲ್ಲಿ ನಿರಂತರ 15 ವರ್ಷಗಳಿಗೂ ಮೀರಿ ನಡೆಯುತ್ತ ಬಂದ ಶಿರಸಿಯ ಟಿಎಸ್‌ಎಸ್‌ನ ಅವ್ಯವಹಾರ ಕರ್ಮಕಾಂಡ ಕುರಿತು ಆಮೂಲಾಗ್ರವಾಗಿ ಮಾಹಿತಿ ಸಂಗ್ರಹಿಸಿಕೊಂಡಂಥ ಆಧಾರಪೂರ್ವಕ ವಿಸ್ತೃತ ವರದಿ ಬಂತು. ಈ ವಿಷಯದಲ್ಲಿ ತಮ್ಮ ಪತ್ರಿಕೆಯ ವರದಿಗಾರರು ತುಂಬಾ ಶ್ರಮವಹಿಸಿ ಸತ್ಯನಿಷ್ಠೆಯಿಂದ ವಸ್ತುನಿಷ್ಠವಾಗಿ ಚಿತ್ರಣ ನೀಡಿದ್ದಾರೆ. ಈ ವರದಿಯಿಂದಾಗಿ ಭ್ರಷ್ಟರ ಕರಾಳಮುಖವನ್ನು ಜನತೆಗೆ ಪರಿಚಯ ಮಾಡಿದಂತೆ ಆಗಿದೆ. ಈ ವರದಿಯಿಂದ ಸಂಘದ ಕುರಿತು ಸಂಶಯವಿದ್ದರೂ ದೃಢವಾದ ವಿಷಯ ನಿರ್ಧಾರಕ್ಕೆ ಬರಲಾರದವರಿಗೆ ಇದು ಉತ್ತಮ ಪರಿಣಾಮವನ್ನುಂಟುಮಾಡಿದೆ. ಈ ಸಂದರ್ಭದಲ್ಲಿ ತಮ್ಮ ಪತ್ರಿಕೆಯು ತಳೆದ ನಿರ್ಭೀತ ನಿಲುವನ್ನು ಶ್ಲಾಘಿಸುತ್ತೇನೆ.

ಹಣ ಹಾಗೂ ಅಧಿಕಾರ ಬಲದಿಂದ ಮದೋನ್ಮತ್ತರಾದ ಈ ದುಷ್ಟರನ್ನು ನಿಯಂತ್ರಿಸಲು ಕಾಯ್ದೆ ಕಾನೂನು ಹಾಗೂ ಪ್ರಜಾತಂತ್ರ ವ್ಯವಸ್ಥೆ ಶಿಥಿಲವಾಗಿರುವಂಥ ದುರ್ಬರ ಸನ್ನಿವೇಶದಲ್ಲಿ ತಮ್ಮ ಪತ್ರಿಕೆಯು ಸರಳವೂ ಹರಿತವೂ ಸಮಗ್ರವೂ ಆದ ವಿವರಣೆಗಳೊಂದಿಗೆ ಶಿರಸಿ ಟಿಎಸ್‌ಎಸ್ ಹೇಗೆ ಈ ಭ್ರಷ್ಟರ ಕೈಯಲ್ಲಿ ಸಿಲುಕಿ ನಲುಗುತ್ತಿದೆ ಹಾಗೂ ಅವಸಾನದಂಚಿಗೆ ಸಾಗುತ್ತಿದೆ ಎಂಬ ಸಂಗತಿಯ ಮೇಲೆ ಚೆನ್ನಾಗಿ ಬೆಳಕನ್ನು ಚೆಲ್ಲಿದೆ. ತಮಗೆ ಈ ಸಂಘದ ಸದಸ್ಯರ ಪರವಾಗಿ ಹಾಗೂ ವೈಯಕ್ತಿಕವಾಗಿ ಅನಂತಾನಂತ ಧನ್ಯವಾದಗಳು.

ತಮ್ಮ ಪತ್ರಿಕಾ ಭಾಷೆಯು ವಿಶಿಷ್ಟವಾದದ್ದು, ಇಲ್ಲಿ ಬಳಸಲ್ಪಡುವ ಪದಗಳು ವಾಚಾಮಗೋಚರವೆನಿಸಿದರೂ ದುಷ್ಟಚರ್ಮದ ಈ ನೀಚ ಸ್ವಾರ್ಥಿ ಭಂಡರನ್ನು ಹಣಿಯುವಲ್ಲಿ ಈ ಪಟ್ಟು, ವರಸೆ, ಮರ್ಮಾಘಾತ ಏಟು ಅಪೇಕ್ಷಣೀಯವೇ ಸರಿ. ಸಾಮಾನ್ಯ ಪತ್ರಿಕೆಗಳಿಂದಾಗದ ಮಹತ್ತರವೂ ಗಂಭೀರವೂ ಆದ ಕೆಲಸ ತಮ್ಮಿಂದಾಗುತ್ತಿದೆ. ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಸಂಘ ಸಂಸ್ಥೆಗಳಲ್ಲಿಯ ಅನ್ಯಾಯ ಅತ್ಯಾಚಾರಗಳನ್ನು ಬಯಲಿಗೆಳೆದು ದೌರ್ಜನ್ಯಕ್ಕೆ ತುತ್ತಾದ ಅಸಹಾಯಕ ನೊಂದ ಕಷ್ಟಜೀವಿಗಳಿಗೆ ನ್ಯಾಯ ಕೊಡಿಸುವಲ್ಲಿ ಇದೇ ಸಮದ ನೀತಿಯಿಂದ ತಮ್ಮ ಪತ್ರಿಕೆ ನೂರ್ಕಾಲ ಬಾಳಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

-ಗೋ.ಗೋ.ಹೆಗಡೆ, ಉತ್ತರಕನ್ನಡ

ಹೊಗಳಿಕೆ ತೆಗಳಿಕೆ

ಅಕ್ಕ, ಈ 'ದೇಶಕಾಲ'ದ ಬಗೆಗಿನ ಚರ್ಚೆಗೆ ಇನ್ನು ಇತಿಶ್ರೀ ಹಾಡಿಸಿ. ನಿಜ ಬಣ್ಣಗಳು ಬಯಲಾದ ಮೇಲೆ ಬೇರೆ ವಿಷಯಕ್ಕೆ ಹೋದರೆ ಒಳ್ಳೆಯದು.

-ರಂಗಸ್ವಾಮಿ, ಮೈಸೂರು

ಈ ವಾರದ ಪತ್ರಿಕೆಯು ಒಂದಕ್ಷರವನ್ನೂ ಬಿಡದೆ ಓದುವಂತಿದೆ. ಗೌರಿ ಅವರ 'ಕಂಡಹಾಗೆ', ಶಿವಸುಂದರ್ ಅವರ 'ಚಾರ್ವಾಕ', ತರೀಕೆರೆ ಅವರ '..ಪಾನಗೋಷ್ಠಿ' ಎಲ್ಲವೂ....

-ಹರಿನಾಥ ಬಾಬು (ಎಸ್ಸೆಮ್ಮೆಸ್ ಮೂಲಕ)

ಜೋಕ್

ಗೌಡ: ನಿನ್ನ ಹೆಂಡತಿ ಕಳೆದುಹೋಗಿದ್ರೂ ಪೊಲೀಸರಿಗೆ ಯಾಕೆ ದೂರು ಕೊಟ್ಟಿಲ್ಲ?


ಪಟೇಲ : ನನ್ನ ಸ್ಕೂಟರ್ ಕಳೆದುಹೋಗಿದ್ದಾಗ ಪೊಲೀಸರು ಅದನ್ನು 15-20 ದಿನ ಉಪಯೋಗಿಸಿ ಕೊಟ್ಟಿದ್ರು, ಅದಕ್ಕೆ!

ರ್ದೇಶಕರ ಮುಂದೆ ‘ಕೂಲ್’ ಆದ ಚೇಂಬರ್!

ವಿನೆಗೂ ಗೋಲ್ಡನ್ ಸ್ಟಾರ್ ಗಣೇಶ್ ಪತ್ನಿ ಶಿಲ್ಪಾ ಮತ್ತು ನಿರ್ದೇಶಕ ಮುಸ್ಸಂಜೆ ಮಹೇಶ್ ನಡುವಿನ ಚಿತ್ರಕ್ಕೆ ಸಂಬಂಧಪಟ್ಟ ವಿವಾದ ಸುಖಾಂತ್ಯ ಕಂಡಿತು. ನ್ನೆ ಚೇಂಬರ್ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ರ ಸಮ್ಮುಖದಲ್ಲಿ ಮಹೇಶ್ ಮತ್ತು ಶಿಲ್ಪಾ ಗಣೇಶ್‌ರ ವ ಮಾಡಿಸಿದರು. ಆನಂತರ ದೇಶಾವರಿ ನಗುವನ್ನು ಒಂದೇ ವಾಕ್ಯದಲ್ಲಿ ಪಾಟೀಲರು ಹೇಳಿದ್ದಿಷ್ಟೇ: ಈ ಚಿತ್ರದಿಂದ ಹೊರಬರಲು ನಿರ್ಧರಿಸಿದ್ದಕ್ಕೆ ಕಿ ಶಿಲ್ಪಾ ಗಣೇಶ್ ಒಪ್ಪಿಗೆ ನೀಡಿದ್ದು, ಈಗ ಸ್ಥಾನದಲ್ಲಿ ಚಿತ್ರವನ್ನು ಸ್ವತಃ ಗೋಲ್ಡನ್ ಸ್ಟಾರ್ ನಿರ್ದೇಶಿಸಲಿದ್ದಾರೆ.” ಅದೇ ಸಂದರ್ಭದಲ್ಲಿ ರಿಗೆ ಹಿತೋಪದೇಶ ನೀಡಿದ ಪಾಟೀಲರು ಟ್ಟು ಈ ಪ್ರಕರಣವನ್ನು ಇಲ್ಲಿಗೆ ಮುಗಿಸಿಬಿಡಿ; ದೊಡ್ಡದು ಮಾಡ್ಬೇಡಿ” ಎಂದೂ ಮನವಿ ಂಡರು. ಮಾತ್ರವಲ್ಲ “ಈ ವಿಷಯಕ್ಕೆ ಸಿದಂತೆ ಶಿಲ್ಪಾ ಹಾಗೂ ಮಹೇಶ್ ಮಾಧ್ಯಮಕ್ಕೆ ಹೇಳಬಾರದು ಎಂದು ಆದೇಶ ನೀಡಿದ್ದೇವೆ” ನ್ನು ಪತ್ರಕರ್ತರ ಗಮನಕ್ಕೆ ತಂದರು.

ದೆ ಅದೇ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ನಿರ್ದೇಶಕ ಮತ್ತು ನಿರ್ಮಾಪಕಿ ಶಿಲ್ಪಾ ಗಣೇಶ್‌ಗೆ ಡಲು ಅವಕಾಶ ನೀಡಬೇಕೆಂದು ಪತ್ರಕರ್ತರು ಮಾಡಿದಾಗ, ಪಾಟೀಲರು ಮತ್ತೆ ತಮ್ಮ ಮೂಗು “ನೋಡ್ರಿ, ಈ ಸಮಸ್ಯೆ ಪರಿಹಾರ ಆಗಿದೆ ಎಂದಷ್ಟೇ ಯೂ ಹೇಳಿ” ಎಂದರು. ಚೇಂಬರ್ ಅಧ್ಯಕ್ಷ ಮುವ ಬಸಂತ್‌ಕುಮಾರ್ ಪಾಟೀಲರು ಒಂದು ಯನ್ನು ಪರಿಹರಿಸುವ ನೆಪದಲ್ಲಿ ಎಲ್ಲರ ಅಭಿವ್ಯಕ್ತಿ ವನ್ನು ದಮನಮಾಡಿದಂತಿತ್ತು ಆ ಸಂದರ್ಭ.

ೇಶಕರ ಸಂಘದ ಅಧ್ಯಕ್ಷ ಎಂ.ಎಸ್.ರಮೇಶ್ ಯುವ ನಿರ್ದೇಶಕರ ದೊಡ್ಡ ಪಡೆಯೇ ಮಹೇಶ್‌ಗೆ ತೋರಿಸಲು ಅಲ್ಲಿ ಜಮಾಯಿಸಿತ್ತು. ನಿರ್ದೇಶಕರ ಪದಾಧಿಕಾರಿಗಳು ಕೂಡಾ ಈ ಸಂದರ್ಭದಲ್ಲಿ ಕ್ ಎನ್ನದೆ ಪಾಟೀಲರ ಆಜ್ಞೆಯನ್ನು ಶಿರಸಾವಹಿಸಿ ಂತಿದ್ದರು. ಒಟ್ಟಾರೆಯಾಗಿ ಪಾಟೀಲ ೊಟ್ಟರೆ ಆ ಪತ್ರಿಕಾಗೋಷ್ಠಿಯಲ್ಲಿ ಯೂ ಮಾತನಾಡಲು ಅವಕಾಶವಿರ ೀರೆ ಯಾರೂ ಮಾತನಾಡಲೂ ಲ್ಪಾ ಮತ್ತು ಮಹೇಶ್ ಪತ್ರಕರ್ತರ ಕ್ಕೆ ಪಾಟೀಲರ ಅನುಮತಿ ಪಡೆದು ಂ ಹಾರಿಕೆಯ ಮಾತಗಳನ್ನಾಡಿದರು.


ಬಸಂತ್

ಹೇಶ್ ಮಾತಿನ ಸಾರಾಂಶ...

ಹೇಶ್: ನಾನು ಕ್ರಿಯೇಟಿವ್ ಪ್ರಾಯದ ಕಾರಣಕ್ಕಾಗಿ ಮಾತ್ರ ಈ ಂದ ಹೊರಬಂದೆನೆ ವಿನಃ ನನಗೆ ದೇ ದುರುದ್ದೇಶ, ಕಾರಣಗಳು ಇರಲಿಲ್ಲ.

ರ್ತರು: ಕ್ರಿಯೇಟಿವ್ ಭಿನ್ನಾಭಿಪ್ರಾಯ ಎಂದರೇನು?

ಹೇಶ್: ನಾನು ಹೇಳಿದ ಶಾಟ್ಸ್‌ಗಳ ಬದಲಿಗೆ ಗ್ರಾಹಕ ರತ್ನವೇಲು ಅವರು ಬೇರೆಯೇ ಶಾಟ್ಸ್‌ಗಳನ್ನು ್ ಮಾಡುತ್ತಿದ್ದರು. ಅದು ನಿರ್ದೇಶಕನಾಗಿ ನನಗೆ ಲ್ಲ. ಆ ಕಾರಣಕ್ಕೆ ಹೊರಬಂದೆ.

ರ್ತರು: ರತ್ನವೇಲು ಅವರು ರಾಷ್ಟ್ರಮಟ್ಟದಲ್ಲಿ ಮಾಡಿದ ಛಾಯಾಗ್ರಾಹಕ. ಕನ್ನಡದಲ್ಲಿ ಈಗಾಗಲೇ ರಾಜ್ ಭಟ್ ಮತ್ತು ರಮೇಶ್ ಜೊತೆ ಕೆಲಸ ಎನಿಸಿಕೊಂಡವರು. ಅವರಿಗೆದುರಾಗದ ಸಮಸ್ಯೆ ಯಾಕೆ ಆಯಿತು?

ಮಹೇಶ್: ಅವರು ಭಾರೀ ಹೆಸರು ಮಾಡಿದ ಛಾಯಾಗ್ರಾಹಕ ಎಂದು ನಾನೂ ಸಂತೋಷಪಟ್ಟಿದ್ದೆ. ಉಳಿದ ನಿರ್ದೇಶಕರ ಜೊತೆಗೆ ಅವರು ಹೇಗೆ ಕೆಲಸ ಮಾಡಿದರೋ ನನಗೆ ಗೊತ್ತಿಲ್ಲ. ಆದರೆ ನನ್ನ ಜೊತೆ ಅವರು ತಮ್ಮ ಕೆಲಸದ ವ್ಯಾಪ್ತಿಯನ್ನು ಮೀರಿದ್ದರು.

ಮಹೇಶ್ ನಂತರ ಶಿಲ್ಪಾ ಗಣೇಶ್ ಮಾತನಾಡಿದ್ದು (ಇಂಗ್ಲಿಷ್‌ನಲ್ಲಿ) ಹೀಗೆ:


ಶಿಲ್ಪಾ ಗಣೇಶ್: ‘ಕೂಲ್’ ಚಿತ್ರಕ್ಕೆ ಸಂಬಂಧಪಟ್ಟಂತೆ ಈತನಕ ಆಗಿದ್ದೆಲ್ಲಾ ದುರದೃಷ್ಟಕರ. ಅದು ಆಗಬಾರದಿತ್ತು. ಈಗ ಅದು ಮುಗಿದುಹೋದ ಅಧ್ಯಾಯ.

ಪತ್ರಕರ್ತರು: ಮಹೇಶ್ ಕ್ರಿಯೇಟಿವ್ ಭಿನ್ನಾಭಿಪ್ರಾಯ ಎಂದು ಹೇಳಿದ್ದಾರಲ್ಲ? ಅದರ ಬಗ್ಗೆ ನಿಮಗೇನೆನಿಸುತ್ತೇ?

ಶಿಲ್ಪಾ ಗಣೇಶ್: ಒಂದು ಚಿತ್ರದ ಮೊದಲ ದಿನವೇ ಈ ರೀತಿ ಹೇಳಿದರೆ ನಾನು ನಿರ್ಮಾಪಕಿಯಾದವಳು ಚಿತ್ರದ ಬಗ್ಗೆ ಚಿಂತಿಸಬೇಕಾಗುತ್ತದೆ. ನನ್ನ ಪ್ರಕಾರ, ದಿ ಷೋ ಮಸ್ಟ್ ಗೋ ಆನ್.

ಪತ್ರಕರ್ತರು: ಛಾಯಾಗ್ರಾಹಕರನ್ನು ಕ್ಯಾಪ್ಟನ್ ಆಫ್ ದಿ ಶಿಪ್ ಎಂದು ಒಪ್ಪಿಕೊಂಡಿರುವ ನಿರ್ದೇಶಕರನ್ನೇ ನೀವು ಆಯ್ಕೆ ಮಾಡಬೇಕಿತ್ತಲ್ಲವೇ?


ಶಿಲ್ಪಾ ಗಣೇಶ್: ನೋಡಿ, ಈ ವಿಷಯವನ್ನು ನಾನು ಮತ್ತೊಮ್ಮೆ ಸ್ಪಷ್ಟೀಕರಿಸಲು ಬಯಸುತ್ತೇನೆ. ಕಥೆ-ಚಿತ್ರಕಥೆ-ಸಂಭಾಷಣೆ ಮತ್ತು ಉಳಿದ ತಂತ್ರಜ್ಞರನ್ನು ಆಯ್ಕೆ ಮಾಡಿದ ನಂತರವೇ ನಾವು ನಿರ್ದೇಶಕ ಮಹೇಶರನ್ನು ಚಿತ್ರ ಮಾಡಿಕೊಡಲು ಕೇಳಿಕೊಂಡೆವು. ಆಗ ಅವರು ಅದಕ್ಕೊಪ್ಪಿದ್ದರು.


ಶಿಲ್ಪಾ ಗಣೇಶ್

ಹೀಗೆ ಪತ್ರಕರ್ತರು ಶಿಲ್ಪಾ ಗಣೇಶ್ ಮತ್ತು ಮಹೇಶ್ ಅವರನ್ನು ಮಾತನಾಡಿಸುತ್ತಿರುವಾಗಲೇ ಎದ್ದು ನಿಂತ ಬಸಂತ್‌ಕುಮಾರ್ ಪಾಟೀಲ್ “ನೀವು ಪತ್ರಿಕಾಗೋಷ್ಠಿಗೆ ಬಂದು ಸಹಕರಿಸಿದಕ್ಕೆ ಧನ್ಯವಾದಗಳು” ಎಂದು ಘೋಷಿಸಿದರು.

ಸಂಧಾನಸೂತ್ರ ಏರ್ಪಡಿಸುವಲ್ಲಿ ಯಾಕೆ ಇಷ್ಟು ತಡವಾಯಿತು? ಯಾವ್ಯಾವ ಷರತ್ತುಗಳನ್ನು ಯಾರ್ಯಾರು ಒಪ್ಪಿಕೊಂಡರು? “ಗೆಟೌಟ್” ಎಂದು ಮಹೇಶ್‌ಗೆ ಶಿಲ್ಪಾ ದಬಾಯಿಸಿದ್ದಕ್ಕೆ ಕ್ಷಮೆ ಕೇಳಿದರಾ? ಮಹೇಶ್‌ಗೆ ಎಷ್ಟು ಸಂಭಾವನೆ ಕೊಡಿಸಿದ್ದೀರಿ? ಎಂಬಿತ್ಯಾದಿ ಹಲವಾರು ಪ್ರಶ್ನೆಗಳಿಗೆ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ಉತ್ತರಿಸುವ ಬದಲು ದೇಶಾವರಿ ನಗೆ ಬೀರುತ್ತಾ ತಪ್ಪಿಸಿಕೊಂಡರು.

ಆದರೆ ಮೂರು ವಾರಗಳಿಂದ ‘ಕೂಲ್’ ಚಿತ್ರಕ್ಕೆ ಸಂಬಂಧಪಟ್ಟಂತೆ ನಿರ್ದೇಶಕರ ಸಂಘ ಮತ್ತು ಚೇಂಬರ್ ನಡುವೆ ಹಾಟ್-ಹಾಟ್ ಚರ್ಚೆಯಾಗಿದ್ದು ಮಾತ್ರ ಎಲ್ಲರಿಗೂ ಗೊತ್ತಿರುವ ವಿಷಯ. ಸುಮಾರು ನಾಲ್ಕು ಬಾರಿ ಎಂ.ಎಸ್.ರಮೇಶ್ ನೇತೃತ್ವದ ನಿರ್ದೇಶಕರ ಸಂಘದ ಪದಾಧಿಕಾರಿಗಳು ಮತ್ತು ಶಾಂತಿ ಸಂಧಾನ ಸಮಿತಿಯ ಸದಸ್ಯರುಗಳ ಜೊತೆ ಏಳೆಂಟು ಗಂಟೆಗಳ ಕಾಲ ಬಿಸಿಬಿಸಿ ಚರ್ಚೆ ನಡೆದಿತ್ತು. ಚೇಂಬರ್ ಸೂಚಿಸಿದ್ದ ಹಲವಾರು ಸಂಧಾನಸೂತ್ರಗಳನ್ನು ಯಾವುದೇ ಮುಲಾಜಿಲ್ಲದೆ ತಿರಸ್ಕರಿಸಿದ್ದ ನಿರ್ದೇಶಕರ ತಂಡ ಒಂದು ಹಂತದಲ್ಲಿ ಚೇಂಬರ್ ವಿರುದ್ಧವೇ ಬಂಡೆದ್ದು ನಿಲ್ಲಲು ಕೂಡಾ ತಯಾರಾಗಿತ್ತು. ನಿರ್ದೇಶಕರ ಸಂಘದ ಪರವಾಗಿ ಕಾರ್ಮಿಕರ ಸಂಘ, ಛಾಯಾಗ್ರಾಹಕರ ಸಂಘ, ಸಂಕಲನಕಾರರ ಸಂಘ... ಹೀಗೆ


ಮಹೇಶ್

ಬಹುತೇಕ ಎಲ್ಲರೂ ಬೆಂಬಲಕ್ಕೆ ನಿಂತಿದ್ದರಿಂದ ಚೇಂಬರ್ ಉಪಾಯವಿಲ್ಲದೆ ತನ್ನ ನಿಲುವನ್ನು ಬದಲಾಯಿಸಲೇಬೇಕಾಗಿತ್ತು. ಕೊನೆಗೆ ನಿರ್ದೇಶಕರ ಸಂಘದ ಐದು ಬೇಡಿಕೆಗಳಲ್ಲಿ ನಾಲ್ಕು ಬೇಡಿಕೆಗಳನ್ನು ಚೇಂಬರ್ ಒಪ್ಪಿಕೊಳ್ಳಲೇಬೇಕಾಯಿತು.

ಹೀಗೆ ‘ಕೂಲ್’ ವಿಷಯಕ್ಕೆ ಸಂಬಂಧಪಟ್ಟಂತೆ ದೊಡ್ಡಣ್ಣ ಸ್ಥಾನದಲ್ಲಿರುವ ಚೇಂಬರ್‌ಗೆ ಮುಖಭಂಗವಾಯಿತು. ಹಾಗೆಯೇ ಈ ತನಕ ಕೋಟ್ಯಂತರ ಬಂಡವಾಳ ಹೂಡುವ ತಾನೇ ದೊಡ್ಡವನು ಎಂದು ಪ್ರತಿಪಾದಿಸುವ ನಿರ್ಮಾಪಕನಿಗೂ ಈ ಪ್ರಕರಣದಲ್ಲಿ ಮುಖಭಂಗವಾಯಿತು. ನಿರ್ದೇಶಕರ ಸಂಘದ ಅತ್ಯುತ್ಸಾಹದ ಮತ್ತು ವೀರಾವೇಶದ ಕ್ರಮದಿಂದಾಗಿ ಮೊದಲ ಬಾರಿಗೆ ನಿರ್ದೇಶಕನೊಬ್ಬನಿಗೆ ಆದ ಅನ್ಯಾಯಕ್ಕೆ ಗೌರವಯುತವಾದ ನ್ಯಾಯ ದೊರೆತಂತಾಯಿತು. ಈ ಹಿಂದೆ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ನಿರ್ದೇಶಕರಿಗೆ ಅನೇಕ ಬಾರಿ ಘೋರ ಅನ್ಯಾಯವಾಗಿತ್ತು; ಗೂಸಾ ಕೂಡಾ ಬಿದ್ದಿದ್ದವು; ಇನ್ನು ಕೆಲವರಿಗೆ ಒಂದು ಪೈಸೆ ಸಂಭಾವನೆಯೂ ದೊರೆತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ನಿರ್ಮಾಪಕರ ಸಂಘ ಮೇಲುಗೈ ಸಾಧಿಸಿತ್ತು. ಬಹುಶಃ ಮುಂಬರುವ ದಿನಗಳಲ್ಲಿ ನಿರ್ದೇಶಕರೇ ಚೇಂಬರ್ ಮತ್ತು ನಿರ್ಮಾಪಕರ ಸಂಘವನ್ನು ಅಲ್ಲಾಡಿಸುವಂತಾಗುವ ಸೂಚನೆಯಿದು.

ಇದು ‘ಕೂಲ್’ ಚಿತ್ರದ ವಿವಾದ ಮತ್ತು ಸಂಧಾನ ಸೂತ್ರದ ಹಿನ್ನೆಲೆಯಲ್ಲಿ ನಡೆದ ದೊಡ್ಡ ಬೆಳವಣಿಗೆ.

ಈಗ ‘ಕೂಲ್’ ವಿಷಯವನ್ನೇ ಮತ್ತೊಮ್ಮೆ ಅವಲೋಕಿಸಿ. ಆರಂಭದಲ್ಲಿ ನಿರ್ದೇಶಕ ಮಹೇಶ್ ಅವರೇ ಈ ಇಡೀ ಪ್ರಕರಣಕ್ಕೆ ಕಾರಣ ಎಂದೇ ಚೇಂಬರ್ ಆರೋಪಿಸಿತ್ತು. ಈ ಆರೋಪದ ವಿರುದ್ಧ ನಿರ್ದೇಶಕರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದಾಗ ನಿರ್ದೇಶಕರ ಸಂಘದ ಎಲ್ಲಾ ಬೇಡಿಕೆಗಳಿಗೆ ಪಾಟೀಲರು ಅಸ್ತು ಅನ್ನಬೇಕಾಯಿತು. ಗಣೇಶ್ ನಿರ್ದೇಶಿಸುವಾಗ ಆ ಚಿತ್ರದ ಛಾಯಾಗ್ರಾಹಕರಾಗಿ ರತ್ನವೇಲು ಮುಂದುವರೆಯಬಾರದು ಎಂಬ ಒಂದೇ ಒಂದು ಬೇಡಿಕೆಯನ್ನು ಮಾತ್ರ ಚೇಂಬರ್ ಪುರಸ್ಕರಿಸಲಿಲ್ಲ. ಉಳಿದಂತೆ ನಾಲ್ಕು ಬೇಡಿಕೆಗಳಿಗೂ ಅಸ್ತು ಎನ್ನುತ್ತಾ ನಿರ್ದೇಶಕರ ಸಂಘದ ಎದುರು ಚೇಂಬರ್ ಮಂಡಿಯೂರಿ ಕುಳಿತುಕೊಂಡಂತಾಗಿದೆ. ಕೋಟ್ಯಂತರ ಬಂಡವಾಳ ಹೂಡುವ ನಿರ್ಮಾಪಕರ ಸಂಘದ ಸದ್ದೇ ಅಡಗಿಹೋಗಿದೆ.

ಒಟ್ಟಾರೆಯಾಗಿ ಒಂದು ಸಣ್ಣ ಮನಸ್ತಾಪ ಮತ್ತು ಭಿನ್ನಾಭಿಪ್ರಾಯದಿಂದಾಗಿ ಈಗ ಗೋಲ್ಡನ್ ಸ್ಟಾರ್ ಗಣೇಶ್ ಇಮೇಜಿಗೂ ಧಕ್ಕೆಯಾಗಿದೆ. ನಿರ್ಮಾಪಕಿಯಾಗಿ ಶಿಲ್ಪಾ ಗಣೇಶ್ ಕೂಡಾ ಭಾರೀ ನಷ್ಟ ಅನುಭವಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕರ ದೃಷ್ಟಿಯಲ್ಲಿ ಕನ್ನಡ ಚಿತ್ರರಂಗದ ಬಗ್ಗೆ ಇರುವ ಗೌರವ ಕಡಿಮೆಯಾಗಿದೆ. ಕನಿಷ್ಠ ‘ಕೂಲ್’ ಚಿತ್ರದ ಪ್ರಕರಣದಿಂದಲಾದರೂ ಇನ್ನುಂದೆ ದುರ್ಘಟನೆಗಳು ಮರುಕಳಿಸಲಾರದು ಎಂದು ಆಶಿಸೋಣ.

• ಶೆಣೈ
shenoylankesh@gmail.com

ಮುರುಳಿ ಮೀಟ್ಸ್ ಮೀರಾ

ಇದು ಚಿತ್ರದ ಟೈಟಲ್. ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಈ ತರಹ ವಿಭಿನ್ನವಾದ ಹೆಸರುಗಳ ಚಿತ್ರಗಳು ಬರುತ್ತಿರುವುದು ಸಂತೋಷದ ವಿಷಯ. ನಾಗಶೇಖರ್ ನಿರ್ದೇಶನದ ರಮ್ಯಾ-ಶ್ರೀನಗರ ಕಿಟ್ಟಿ ನಟಿಸಿರುವ ‘ಸಂಜು ವೆಡ್ಸ್ ಗೀತಾ’ ಎಂಬ ಹೆಸರಿನ ಚಿತ್ರ ಶುರುವಾಗಿದ್ದು ಅದರ ಮಾದರಿಯಲ್ಲೇ ಇದೂ ಇದೆ. ಆದರೆ ಆ ಚಿತ್ರದ ಕತೆಗೂ ಈ ಚಿತ್ರದ ಕಥಾವಸ್ತುವಿಗೂ ಅಜಗಜಾಂತರ ವ್ಯತ್ಯಾಸವಿದೆ.

ಈ ಚಿತ್ರವನ್ನು ಯೋಗೇಶ್ ಹುಣಸೂರು ನಿರ್ಮಿಸುತ್ತಿದ್ದಾರೆ. ಇವರು ಮೂಲತಃ ನಿರ್ದೇಶಕರು. ಮೊನ್ನೆಮೊನ್ನೆಯಷ್ಟೇ ಲೂಸ್ ಮಾದ ಯಾನೆ ಯೋಗಿಶ್‌ನನ್ನು ಹಾಕಿಕೊಂಡು ‘ರಾವಣ’ ಎಂಬ ಚಿತ್ರವನ್ನು ಇವರು ನಿರ್ದೇಶಿಸಿದ್ದರು. ಯಾಕೋ ಏನೋ ಆ ಚಿತ್ರ ಬಾಕ್ಸಾಫೀಸ್‌ನಲ್ಲಿ ಅಮೋಘವಾಗಿ ನೆಲಕಚ್ಚಿತ್ತು. ಈ ಕಾರಣಕ್ಕೋ ಏನೋ ಈಗ ನಿರ್ದೇಶನಕ್ಕಿಂತ ನಿರ್ಮಾಪಕನಾಗಿ ಬಂಡವಾಳ ಹೂಡುವುದೇ ಒಳ್ಳೆಯ ಕೆಲಸವೆಂಬ ತೀರ್ಮಾನಕ್ಕೆ ಇವರು ಬಂದಿರುವಂತಿದೆ.

ಹೀಗಾಗಿ ‘ಮುರುಳಿ ಮೀಟ್ಸ್ ಮೀರಾ’ ಚಿತ್ರವನ್ನು ಯೋಗೇಶ್ ಹುಣಸೂರು ನಿರ್ಮಿಸುತ್ತಿದ್ದು ‘ಧಿಮಾಕ್’ ಚಿತ್ರವನ್ನು ನಿರ್ದೇಶಿಸಿದ್ದ ಮಹೇಶ್ ಇದರ ನಿರ್ದೇಶನದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅಂದಹಾಗೆ ಪ್ರಜ್ವಲ್ ದೇವರಾಜ್ ಈ ಚಿತ್ರದ ನಾಯಕ.

‘ಧಿಮಾಕ್’ ಚಿತ್ರದ ನಿರೂಪಣೆಯಲ್ಲಿ ಒಂದಿಷ್ಟು ಹೊಸತನ ತೋರಿಸಿದ್ದ ಮಹೇಶ್ ತನ್ನ ದ್ವಿತೀಯ ಚಿತ್ರದಲ್ಲಿ ಇನ್ನಷ್ಟು ಸಾಧನೆ ತೋರಿಸಬಹುದೋ ನೋಡೋಣ.



ನಿರ್ದೇಶಕರ ‘ಡೆಡ್ಲಿ’ ಸಪೋರ್ಟ್!

ಎಂ.ಎಸ್.ರಮೇಶ್ ನಿರ್ದೇಶಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಅನೇಕ ‘ಪವಾಡ’ಗಳು ಅಲ್ಲಿ ನಡೆಯುತ್ತಿವೆ.

ಉದಾಹರಣೆಗೆ ಈಗ ತೆರೆಕಂಡಿರುವ ‘ಡೆಡ್ಲಿ-2’ ಚಿತ್ರದ ಒಂದು ಪ್ರದರ್ಶನದ ಬಾಲ್ಕನಿ ಟಿಕೆಟ್‌ಗಳನ್ನು ನಿರ್ದೇಶಕರ ಸಂಘ ಖರೀದಿಸಿದೆಯಂತೆ. ಆ ಚಿತ್ರವನ್ನು ನಿರ್ದೇಶಕರ ಸಂಘದ ಸದಸ್ಯರೆಲ್ಲಾ ಅವರ ಕುಟುಂಬದ ಜೊತೆಗೆ ವೀಕ್ಷಿಸುವ ವ್ಯವಸ್ಥೆಯನ್ನು ರಮೇಶ್ ಮಾಡಿದ್ದಾರೆ.

ಇದು ಹಾಡುಗಳಿಲ್ಲದೆ ಅಥವಾ ಸಿದ್ಧ ಸೂತ್ರಗಳಿಲ್ಲದೆ ತೆರೆಕಂಡಿರುವ ರವಿಶ್ರೀವತ್ಸ ನಿರ್ದೇಶನದ ‘ಡೆಡ್ಲಿ-2’ ಚಿತ್ರಕ್ಕೆ ಪರೋಕ್ಷವಾಗಿ ಬೆಂಬಲ ಮತ್ತು ಶಹಬ್ಬಾಸ್ ಎಂದು ಹೇಳುವ ರೀತಿಯಂತೆ!

ಇದು ನಿಜಕ್ಕೂ ಒಂದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ. ಒಂದು ಚಿತ್ರವನ್ನು ಉಳಿದ ನಿರ್ದೇಶಕರು ಒಟ್ಟಾರೆಯಾಗಿ ಕುಳಿತು ನೋಡುವುದೆಂದರೆ ಒಂದು ಆರೋಗ್ಯಪೂರ್ಣ ವಾತಾವರಣಕ್ಕೆ ಒಳ್ಳೆಯ ಉದಾಹರಣೆ. ಮುಂಬರುವ ದಿನಗಳಲ್ಲಿ ಯಾವುದಾದರೂ ಚಿತ್ರ ನಿರ್ದೇಶನ ದೃಷ್ಟಿಯಿಂದ ವಿಭಿನ್ನವಾಗಿದ್ದರೆ ಅದನ್ನು ಇದೇ ರೀತಿ ಬಾಲ್ಕನಿ ಬುಕ್ ಮಾಡಿ ನೋಡುವ ಸಂಪ್ರದಾಯವನ್ನು ಮುಂದುವರೆಸುತ್ತೇವೆ ಎಂದಿದ್ದಾರೆ ರಮೇಶ್.

ಕನ್ನಡ ಚಿತ್ರರಂಗದಲ್ಲಿ ಒಬ್ಬ ನಟನ ಚಿತ್ರವನ್ನು ಮತ್ತೊಬ್ಬ ನಟ ನೋಡುವುದಿಲ್ಲ. ಒಬ್ಬ ನಿರ್ದೇಶಕನ ಚಿತ್ರವನ್ನು ಮತ್ತೊಬ್ಬ ನೋಡುವುದಿಲ್ಲ. ಅಂತಹ ವಾತಾವರಣವಿರುವ ಕನ್ನಡ ಚಿತ್ರರಂಗದಲ್ಲಿ ಸುಮಾರು ನೂರಕ್ಕೂ ಹೆಚ್ಚು ನಿರ್ದೇಶಕರು ಒಂದು ಚಿತ್ರವನ್ನು ಒಟ್ಟಿಗೆ ಕುಳಿತು ವೀಕ್ಷಿಸುತ್ತಿದ್ದಾರೆ ಎಂದರೆ ಅದು ಪವಾಡವಲ್ಲದೇ ಮತ್ತೇನು? ಭಲೇ ಭೇಷ್ ನಿರ್ದೇಶಕರ ಸಂಘ.... ●



ಯಾರಿಗೇನು ಲಾಭ?

ಈ ಪ್ರಕರಣದಿಂದ ಯಾರಿಗೆ ಲಾಭ? ಯಾರಿಗೆ ನಷ್ಟ ಎಂಬ ಬಗ್ಗೆಯೂ ಗಾಂಧಿನಗರದಲ್ಲಿ ಚರ್ಚೆ ನಡೆಯುತ್ತಿದೆ.

ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ ದಿಢೀರನೆ ಗಣೇಶ್ ನಿರ್ದೇಶಕನಾಗಿ ಬಡ್ತಿ ಪಡೆದಿರುವುದು ಆತನ ಪಾಲಿಗೆ ವರವೇ ಆಗಬಹುದು. ಅಷ್ಟೇ ಅಲ್ಲ; ಮುಂಬರುವ ದಿನಗಳಲ್ಲಿ ರವಿಚಂದ್ರನ್-ಉಪ್ಪಿ-ಸುದೀಪ್ ತರ ಗಣೇಶ್ ಕೂಡಾ ತಮ್ಮ ಚಿತ್ರಗಳನ್ನು ತಾವೇ ನಿರ್ದೇಶಿಸುವ ಪರಿಪಾಠವನ್ನು ಮುಂದುವರೆಸಬಹುದು. ಬಹುಶಃ ಈ ಪ್ರಕರಣ ಆಗದೇ ಇದ್ದಲ್ಲಿ ಗಣೇಶ್ ನಿರ್ದೇಶಕನಾಗುವ ಸಾಧ್ಯತೆ ಇರಲಿಲ್ಲವೋ ಏನೋ?

‘ಮುಸ್ಸಂಜೆ’ ಖ್ಯಾತಿಯ ಮಹೇಶ್ ಪಾಲಿಗೆ ಇದೊಂದು ರೀತಿಯಲ್ಲಿ ಸಿಹಿ ಮತ್ತು ಕಹಿ ಅನುಭವದ ಮಿಶ್ರಣ. ಈ ವಿವಾದದಿಂದ ಅವರು ನಿರ್ದೇಶಕರ ಸ್ಥಾನಮಾನ ಮತ್ತು ಗೌರವವನ್ನು ಎತ್ತಿಹಿಡಿದ ಕೀರ್ತಿಗೆ ಪಾತ್ರರಾಗುತ್ತಾರೆ. ಆದರೆ ವೈಯಕ್ತಿಕವಾಗಿ ಖಂಡಿತವಾಗಿಯೂ ಮಹೇಶ್ ಪಾಲಿಗೆ ಇದೊಂದು ದೊಡ್ಡ ನಷ್ಟವೇ. ಛಾಯಾಗ್ರಾಹಕ ರತ್ನವೇಲು ಜೊತೆ ಯೋಗರಾಜ್ ಭಟ್ ಅಥವಾ ರಮೇಶ್ ತರಹದ ನಿರ್ದೇಶಕರು ಯಾವುದೇ ತೊಂದರೆಯಿಲ್ಲದೆ ಕೆಲಸ ಮಾಡಿದ್ದರು. ಆದರೆ ಅದು ಈ ಮಹೇಶ್ ಏಕೆ ಸಾಧ್ಯವಾಗಲಿಲ್ಲ? ಎಂದೂ ಚರ್ಚೆಯಾಗುತ್ತಿದೆ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 01-09-2010 RNI No. KARKAN

ರಿಯಲ್ ಲೈಫಲ್ಲೂ ದಿನೇಶ್ ಬಾಬು ಎರಡನೇ ಮದುವೆ!

ಮಗಳಿಗಿಂತಾ ಚಿಕ್ಕವಳು...!

ಇತ್ತೀಚೆಗೆ ತಾನೇ ಬಿಡುಗಡೆಯಾದ 'ಎರಡನೇ ಮದುವೆ' ಎಂಬ ಸಿನಿಮಾ ಸೂಪರ್‌ಹಿಟ್ ಆಗಿದೆ. ಬಹಳಷ್ಟು ಏಳೇ ವೃದ್ಧರು "ಈ ಚಿತ್ರದಲ್ಲಿ ನಮ್ಮ ಬದುಕಿಗೂ ಏನಾದರೂ ಟಿಪ್ಸ್ ಸಿಗಬಹುದು" ಎಂದು ಸಾಲುಗಟ್ಟಿ ಸಿನಿಮಾ ನೋಡುತ್ತಿದ್ದಾರೆ. ಹೀಗಾಗಿ ಥಿಯೇಟರಿನ ಮುಂದೆ ಬರೀ ಬಿಳೀ ತಲೆಗಳೇ ಕಾಣುತ್ತಿವೆ! ಇದೇ ಕಾರಣಕ್ಕೋ ಏನೋ ಮುಖ್ಯಮಂತ್ರಿ ಯಡಿಯೂರಪ್ಪ ಕೂಡಾ ತಮ್ಮ ಭಯಾನಕ ಒತ್ತಡಗಳ ನಡುವೆಯೂ ಮಂತ್ರಿ ಮಾಲ್‌ಗೆ ಹೋಗಿ ಬುಡ ಊರಿ ಸಿನಿಮಾ ನೋಡಿ ಬಂದಿದ್ದಾರೆ.

ವಿಚಿತ್ರವೆಂದರೆ, ಈ ಚಿತ್ರದ ನಿರ್ದೇಶಕ ದಿನೇಶ್ ಬಾಬು ರೀಲ್ ಲೈಫ್‌ನಲ್ಲಿ 'ಎರಡನೇ ಮದುವೆ' ಮಾಡಿದ ಹಾಗೆ ಈಗ ತಮ್ಮ ರಿಯಲ್ ಲೈಫ್‌ನಲ್ಲೂ ಎರಡನೇ ಮದುವೆಯಾಗಿದ್ದಾರೆ.

ಐದು ತಿಂಗಳ ಹಿಂದೆ ದಿನೇಶ್ ಬಾಬು ಗುಟ್ಟಾಗಿ ಎರಡನೆ ಮದುವೆಯಾಗಿದ್ದು ಈಗ ರಟ್ಟಾಗಿದೆ. ವಿಚಿತ್ರವೆಂದರೆ ವಯಸ್ಸಿನಲ್ಲಿ ತನ್ನ ಮಗಳಿ ಗಿಂತಲೂ ಕಿರಿಯ ವಯಸ್ಸಿನ ಹುಡುಗಿಯನ್ನು ದಿನೇಶ್ ಬಾಬು ಮದುವೆಯಾಗಿದ್ದಾರೆ.

ಅವರ ಎರಡನೆ ಪತ್ನಿ ಬೇರೆ ಯಾರೂ ಅಲ್ಲ, ಮಾಜಿ ನಾಯಕಿ, ಹಾಲಿ ಪೋಷಕ ನಟಿ ಆಶಾಲತಾರ ಮೊದಲ ಮಗಳು ಚೇತನಾ!

ಆಕೆಗಿನ್ನೂ ಈಗ ಇಪ್ಪತ್ತೆರಡರ ಹರೆಯ. ದಿನೇಶ್ ಬಾಬು ಅವರ ಪುತ್ರಿಗೆ ಈಗ 26 ವರ್ಷ ವಯಸ್ಸು. ಇನ್ನು ಸ್ವತಃ ದಿನೇಶ್ ಬಾಬುಗೆ ಇದೇ ಆಗಸ್ಟ್ 17ಕ್ಕೆ ಐವತ್ಮೂರು ದಾಟಿದೆ. ಈಗಾಗಲೇ ಅವರ ಕುತ್ತಿಗೆ ಸುತ್ತ ಸುಕ್ಕುಗಳು ಆರಂಭವಾಗಿವೆ.

ದಿನೇಶ್ ಬಾಬು ಈ ಹಿಂದೆ ನಿರ್ದೇಶಿಸಿದ್ದ 'ಜನುಮದ ಗೆಳತಿ', 'ಮಿ. ಪೇಂಟರ್' ಮತ್ತು 'ಎರಡನೇ ಮದುವೆ' ಚಿತ್ರಕ್ಕೆ ಚೇತನಾ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕಾರ್ಯ ನಿರ್ವಹಿಸಿದ್ದಳು. ಈ ಸಂದರ್ಭದಲ್ಲೇ ಚೇತನಾ ಬಾಬಣ್ಣನ ಪ್ರೇಮಪಾಶಕ್ಕೆ ಸಿಲುಕಿದಳಂತೆ. ನಂತರ ಇಬ್ಬರೂ ಸೇರಿ ಆಶಾಲತಾರನ್ನು ಒಪ್ಪಿಸಿದರಂತೆ. ಮದುವೆಗೇನೋ ಸಮ್ಮತಿಸಿದ ಆಶಾಲತಾ, ಅದು ವೈಭವವಾಗಿ ನಡೆದು ಎಲ್ಲರಿಗೂ ಗೊತ್ತಾಗಬೇಕು ಎಂದು ಅಪೇಕ್ಷಿಸಿದರಂತೆ. ಆದರೆ ದಿನೇಶ್ ಬಾಬು ಈ ಮದುವೆಯನ್ನು ಗುಟ್ಟು ಗುಟ್ಟಾಗೇ ಇಡಲು ಇಷ್ಟಪಟ್ಟರಂತೆ. "ಮದುವೆ ಎಂಬುದು ನಮ್ಮ ಖಾಸಗಿ ವಿಚಾರ. ಅದು ಜನರ, ಮಾಧ್ಯಮಗಳ ಪಾಲಿಗೆ ದೊಡ್ಡ ವಿಷಯವೇ ಆದರೂ ನಮಗದು ದೊಡ್ಡದು ಅನಿಸುವುದಿಲ್ಲ" ಎಂಬುದು ದಿನೇಶ್ ಬಾಬು ಒಕ್ಕಣೆ.

ಹೀಗಾಗಿ ದಿನೇಶ್ ಬಾಬು ಮತ್ತು ಚೇತನಾ ಮದುವೆ ಬೆಂಗಳೂರಿನ ದೇವಸ್ಥಾನವೊಂದರಲ್ಲಿ ಸರಳವಾಗಿ ನೆರವೇರಿದೆ. ಇತ್ತೀಚಿನ ತನಕ ಕತ್ತರಿಗುಪ್ಪೆ ರಿಂಗ್ ರಸ್ತೆ ಬಳಿ ಫ್ಲಾಟ್ ಒಂದರಲ್ಲಿ ಏಕಾಂಗಿಯಾಗಿ ಜೀವಿಸುತ್ತಿದ್ದ ದಿನೇಶ್ ಬಾಬು ಈಗ ಸುಂಕದಕಟ್ಟೆ ಬಳಿ ಆಶಾಲತಾ ಮನೆ ಬಳಿಯೇ ಒಂದು ಬಾಡಿಗೆ ಮನೆ ಹಿಡಿದು ಹೊಸ ಹೆಂಡತಿ ಚೇತನಾ ಜೊತೆ ಹೊಸ ಬಾಳಿಗೆ ಹೆಜ್ಜೆಯಿರಿಸಿದ್ದಾರೆ.

ಮೊದಲನೇ ಮದುವೆ ಮುರಿದು ಬಿದ್ದಿತ್ತು!

ಕೇರಳದ ತಿರುವನಂತಪುರಂ ಮೂಲದ ದಿನೇಶ್ ಬಾಬು ಸಿನಿಮಾ ಛಾಯಾಗ್ರಾಹಕರಾಗಿ ವೃತ್ತಿ ಆರಂಭಿಸಿದವರು. ಮಲಯಾಳಂನ 'ಧ್ರುವಂ', 'ಕಿಂಗ್' ಮುಂತಾದ ಬ್ಲಾಕ್‌ಬಸ್ಟರ್ ಸಿನಿಮಾಗಳಿಗೆ ಕ್ಯಾಮೆರಾ ಹಿಡಿದಿದ್ದ ಬಾಬು ನಂತರದಲ್ಲಿ ನಿರ್ದೇಶನಕ್ಕೂ ಮುಂದಾಗಿ ಕೆಲವು ಮಲಯಾಳಂ ಮತ್ತು ತಮಿಳು ಚಿತ್ರಗಳನ್ನು ನಿರ್ದೇಶಿಸಿದರು. ಆದರೆ ಕ್ಯಾಮೆರಾದ ಕೈಚಳಕವನ್ನು ಅವರು ನಿರ್ದೇಶನದಲ್ಲಿ ತೋರಲು ಸಾಧ್ಯವಾಗಲಿಲ್ಲ. ಆದ್ದರಿಂದ ಬಾಬು ನಿರ್ದೇಶಿಸಿದ ಚಿತ್ರಗಳೆಲ್ಲಾ ತೋಪೆದ್ದವು. ಅದೇ ಸಂದರ್ಭದಲ್ಲಿ ಕನ್ನಡಕ್ಕೆ ಕಾಲಿರಿಸಿದ ಬಾಬು ಕೇವಲ ನಲವತ್ತೆಂಟು ಗಂಟೆಗಳಲ್ಲಿ 'ಇದು ಸಾಧ್ಯ' ಎಂಬ ಸಿನಿಮಾ ನಿರ್ದೇಶಿಸಿ ಗಿನ್ನಿಸ್ ದಾಖಲೆ ಮಾಡಿದರು. ನಂತರ 'ಇನ್ಸ್‌ಪೆಕ್ಟರ್ ವಿಕ್ರಂ', 'ಸುಪ್ರಭಾತ', 'ಲಾಲಿ' ಮುಂತಾದ ಸದಭಿರುಚಿಯ ಚಿತ್ರಗಳನ್ನೂ ನೀಡಿದರು.

ಅಷ್ಟರಲ್ಲಾಗಲೇ ಕೇರಳದಲ್ಲಿ ಮದುವೆಯಾಗಿದ್ದ ಬಾಬು ತಮ್ಮ ಪತ್ನಿ ಕೆ.ಕೆ. ಶೋಭನಾ ಮತ್ತು ಮಗಳು ಅಂಜನಾ ಜೊತೆ ಆರಾಮಾಗೇ ಇದ್ದರು. ದಿನೇಶ್ ಬಾಬು ಸಿನಿಮಾ ಕೆಲಸಗಳ ಕಾರಣ ಬೆಂಗಳೂರಿಗೆ ಬಂದುಹೋಗುತ್ತಿದ್ದರೂ ಅವರ ಕುಟುಂಬ ಮಾತ್ರ ಕೇರಳದಲ್ಲೇ ನೆಲೆಸಿತ್ತು.



ಆಗ ಬೆಂಗಳೂರಿನಲ್ಲಿ ಏಕಾಂಗಿಯಾಗಿರುತ್ತಿದ್ದ ದಿನೇಶ್ ಬಾಬು ಒಂದಷ್ಟು ಜನ ಪೋಷಕ ಕಲಾವಿದೆಯರೊಂದಿಗೆ ಸ್ನೇಹ ಬೆಳೆಸಿದ್ದರ ಬಗ್ಗೆ ಗುಸುಗುಸು ಕೇಳಿಬಂದಿತ್ತು. ಇದಕ್ಕೆ ಇಂಬು ನೀಡುವಂತೆ ದಿನೇಶ್ ಬಾಬು ನಿರ್ದೇಶಿಸಿದ ಚಿತ್ರಗಳಲ್ಲಿ ಅವರ ಕಾಯಂ 'ಗೆಳತಿಯರಿಗೆ' ಚಿಕ್ಕಪುಟ್ಟ ಪಾತ್ರಗಳು ಇದ್ದೇ ಇರುತ್ತಿದ್ದವು. ಆದರೆ ದಿನೇಶ್ ಬಾಬು ಪ್ರತಿಭಾವಂತ ಎಂಬ ಕಾರಣಕ್ಕೋ ಏನೋ ಯಾರೂ



ಅದನ್ನೆಲ್ಲ ಗಂಭೀರವಾಗಿ ಪರಿಗಣಿಸಿರಲಿಲ್ಲ.

ಎರಡು ವರ್ಷಗಳ ಹಿಂದೆಯಷ್ಟೇ ತಮ್ಮ ಮಗಳು ಅಂಜನಾಳಿಗೆ ಕೇರಳದಲ್ಲೇ ಮದುವೆ ಮಾಡಿಕೊಟ್ಟ ದಿನೇಶ್ ಬಾಬು ಆನಂತರ ತಮ್ಮ ಮೊದಲ ಪತ್ನಿ ಶೋಭಾನಾಗೆ ಡಿವೋರ್ಸ್ ನೀಡಿದ್ದರು. ನಂತರ ಕೇರಳದ ಕಡೆ ಹೋಗುವುದನ್ನೇ ನಿಲ್ಲಿಸಿದ ಬಾಬು ಪರ್ಮನೆಂಟಾಗಿ ಬೆಂಗಳೂರಿನಲ್ಲೇ ಬಿಡಾರ ಹೂಡಿದರು...

ಹಾಳು ಮಾಡಿದ್ದು ಜೂಜು!

ದಿನೇಶ್ ಬಾಬು ಯಾವತ್ತಿಗೂ ಕೆಲಸವಿಲ್ಲದೆ, ನಿರುದ್ಯೋಗಿಯಾಗಿ ಕೂರಲಿಲ್ಲ. ಚಿತ್ರರಂಗ ಎರಡು ಮೂರು ಬಾರಿ 'ಬರಗಾಲ'ದಂತಹ ಸ್ಥಿತಿ ತಲುಪಿದ್ದರೂ ದಿನೇಶ್ ಬಾಬು ಮಾತ್ರ ಒಂದೇ ಸಮನೆ ಸಿನಿಮಾ ನಿರ್ದೇಶನದಲ್ಲಿ ತೊಡಗಿದ್ದರು; ಕೈತುಂಬ ಸಂಭಾವನೆಯನ್ನೂ ಪಡೆಯುತ್ತಿದ್ದರು.



ಓರ್ವ ಅದ್ಭುತ ನಿರ್ದೇಶಕನಿಗೂ ವರ್ಷಕ್ಕೆ ಮೂರಕ್ಕಿಂತ ಹೆಚ್ಚು ಸಿನೆಮಾಗಳನ್ನು ಮಾಡಲು ಸಾಧ್ಯವಿಲ್ಲ. ಚಿತ್ರದ ಸ್ಟೋರಿ ಡಿಸ್ಕಷನ್ನು, ಚಿತ್ರಕಥೆ, ಸಂಭಾಷಣೆ, ಶೂಟಿಂಗು, ಪೋಸ್ಟ್‌ಪ್ರೊಡಕ್ಷನ್ನು ಎಂದು ಒಂದು ಸಿನಿಮಾ ಏನಿಲ್ಲವೆಂದರೂ ಐದಾರು ತಿಂಗಳುಗಳ ದೀರ್ಘವಾದ ಸಮಯಾವಕಾಶವನ್ನು ಬೇಡುತ್ತದೆ. ಹೀಗಿರುವಾಗ ದಿನೇಶ್ ಬಾಬು ಮಾತ್ರ ವರ್ಷಕ್ಕೆ ಆರರಿಂದ ಎಂಟು ಸಿನಿಮಾಗಳನ್ನು ನಿರ್ದೇಶಿಸಿ ದಾಖಲೆ ಮಾಡಿದ್ದಾರೆ. ಒಂದು ವೇಳೆ ನಿರ್ದೇಶನದ ಅವಕಾಶ ಕಮ್ಮಿಯಾದರೆ, ಸುಮ್ಮನೇ ಕೂರದ ಬಾಬು ಕ್ಯಾಮೆರಾಮನ್ ಆಗಿ ಕೆಲಸ ಮಾಡಿದ ಉದಾಹರಣೆಗಳೂ ಇವೆ. 'ನಾನೊಬ್ಬ ಯಶಸ್ವಿ ನಿರ್ದೇಶಕ. ಆದ್ದರಿಂದ ಕ್ಯಾಮೆರಾ ಹಿಡಿದು ಬೇರೊಬ್ಬರ ಕೈಕೆಳಗೆ ಕೆಲಸ ಮಾಡಬೇಕಲ್ಲ..." ಎಂಬ ಅಹಂ ದಿನೇಶ್‌ಬಾಬುರನ್ನು ಯಾವತ್ತೂ ಕಾಡಿಲ್ಲ. ಅಷ್ಟರಮಟ್ಟಿಗೆ ದಿನೇಶ್ ಬಾಬು ಶ್ರಮಿಕ ಎಂಬುದು ನಿಜ.

ಆದರೆ ಇಷ್ಟೆಲ್ಲಾ ಕಷ್ಟಪಟ್ಟು ಸಂಪಾದಿಸಿದ ಹಣವನ್ನೆಲ್ಲ ದಿನೇಶ್ ಬಾಬು ಜೂಜಾಟಕ್ಕೆ ಸುರಿದು ಬರ್ಬಾದಾದರು. ಅವರು ಜೂಜಾಟಕ್ಕೆ ಆರಿಸಿಕೊಂಡಿದ್ದು ಪೋಕರ್ ಎಂಬ ಇಸ್ಪೀಟು ಆಟವನ್ನು. ರವಿಚಂದ್ರನ್‌ರಂಥ ಕ್ರೇಜಿಸ್ಟಾರ್ ಕೂಡಾ ಈ ಪೋಕರ್ ಆಟದ ಬಲೆಗೆ ಬಿದ್ದು ಕೋಟಿಗಟ್ಟಲೆ ಹಣ ಕಳೆದುಕೊಂಡಿದ್ದರು ಎಂದರೆ ನಂಬಲೇಬೇಕು.


ದಿನೇಶ್ ಬಾಬು ಕೂಡಾ ಪೋಕರ್ ತೆಕ್ಕೆಗೆ ಬಿದ್ದು ಆರ್ಥಿಕವಾಗಿ ಕಂಗಾಲಾಗಿ ಹೋದರು. ಅದೂ ಯಾವ ಮಟ್ಟಕ್ಕೆ ಎಂದರೆ, ಸಿಕ್ಕಸಿಕ್ಕವರ ಮುಂದೆ ಕೈಚಾಚಿ "ಐ ವಾಂಟ್ ಸಮ್ ಕ್ರೆಡಿಟ್. ಗೀವ್ ಮಿ ಪ್ಲೀಸ್" ಎನ್ನುವ ಮಟ್ಟಕ್ಕೆ. ಇಷ್ಟು ದೊಡ್ಡ ನಿರ್ದೇಶಕ ಹೀಗೆ ಹಣಕ್ಕಾಗಿ ಅಂಗಲಾಚುವುದನ್ನು ಕಂಡು ಎಂಥವರೂ ಒಂದಿಷ್ಟು ಸಾಲ ನೀಡಿ ಕೃತಾರ್ಥರಾಗುತ್ತಾರೆ. ಹೀಗೆ ಹಣ ಪಡೆದ ದಿನೇಶ್ ಬಾಬು ಆನಂತರ ಸಾಲಗಾರರ ಫೋನು ರಿಸೀವ್ ಮಾಡಲಿಲ್ಲ, ಹೊಸ ಸಾಲಗಾರರಿಗೆ ಬಲೆ ಬೀಸುವುದನ್ನೂ ನಿಲ್ಲಿಸಲಿಲ್ಲ.

ದಿನೇಶ್ ಬಾಬು ಅವರ ಇಂಥ ಯಡವಟ್ಟುಗಳು, ವೈಯಕ್ತಿಕ ಬದುಕಿನ ಗೋಜಲುಗಳು ಏನೇ ಇದ್ದರೂ ಆತ ಟ್ಯಾಲೆಂಟೆಡ್ ಡೈರೆಕ್ಟರ್ ಅನ್ನೋದು ನಿಜ. ತಮಗಿಂತಲೂ ವಯಸ್ಸಿನಲ್ಲಿ ತುಂಬಾ ಚಿಕ್ಕವಳಾದ ಯುವತಿಯನ್ನು ಮದುವೆಯಾಗಿದ್ದಾರೆ ಎಂಬ ಅಪಸ್ವರ ಕೇಳಿಬರುತ್ತಿದ್ದರೂ, ಅದು ಅವರವರ ಬದುಕಿನ ಆಯ್ಕೆ.

ದಿನೇಶ್ ಬಾಬು ಅವರ 'ಎರಡನೇ ಮದುವೆ' ಯಾದರೂ ಗಟ್ಟಿಯಾಗಿರಲಿ. ಅವರನ್ನು ನಂಬಿ ಕೈಹಿಡಿದಿರುವ ಚೇತನಾಳ ಬದುಕು ಅತಂತ್ರವಾಗದಿರಲಿ...

● ಅರುಣ್ ಕುಮಾರ್.ಜಿ
arunodayagc@gmail.com

ಪ್ರಚಾರಕ್ಕೆ ಬಳಸಿಕೊಳ್ಳಿ ಅಂದರಂತೆ...



ದಿನೇಶ್ ಬಾಬು ನಿರ್ದೇಶನದ 'ಎರಡನೇ ಮದುವೆ' ಚಿತ್ರ ಬಿಡುಗಡೆಗೆ ಮುನ್ನ ಅದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರದ್ದೇ ಕತೆ ಎಂದು ಪುಕಾರೆದ್ದಿತ್ತು. ಆದರೆ ಸಿನಿಮಾ ಬಿಡುಗಡೆಯಾದಮೇಲೆ ಗೊತ್ತಾಗಿದ್ದೆಂದರೆ ಈ ಚಿತ್ರದಲ್ಲಿ ಕುಮಾರಸ್ವಾಮಿ ಅವರಿಗೆ ಸಂಬಂಧಿಸಿದ ಸಣ್ಣದೊಂದು ಡೈಲಾಗು ಬಿಟ್ಟರೆ, ಬೇರೆ ಯಾವ ಸಂಬಂಧವೂ ಆ ಕತೆಯಲ್ಲಿರಲಿಲ್ಲ.

ಇದೇ ಸಂದರ್ಭದಲ್ಲಿ ದಿನೇಶ್ ಬಾಬುಗೆ ಅವರ ಹತ್ತಿರದವರು "ನಿಮ್ಮ ರಿಯಲ್ ಲೈಫ್‌ನ ಎರಡನೇ ಮದುವೆಯನ್ನೂ ನಿಮ್ಮ ಚಿತ್ರದ ಪ್ರಚಾರಕ್ಕೆ ಬಳಸಿಕೊಳ್ಳಿ" ಎಂಬ ಘನಂದಾರಿ ಐಡಿಯಾವನ್ನು ಕೊಟ್ಟಿದ್ದರಂತೆ. ಸದ್ಯ ಅಂಥ ಕೀಳುಮಟ್ಟದ ಕೃತ್ಯಕ್ಕೆ ಇಳಿಯಲು ಸ್ವತಃ ಬಾಬು ಅವರೇ ನಿರಾಕರಿಸಿದರಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar